
S.N. ALANDHER.
VASANT STUDIO



ಕುಮುದಿನಿ—ಚಂದ್ರನು ಆಕರ್ಷಿಸಿದ್ದಕ್ಕಾಗಿ. . . . (ಪುಟ ೧೬)

ಓಂ

॥ ಸಿರಿಗನ್ನಡಂ ಗೆಲ್ಗೆ ॥

ಪ್ರತಿಜ್ಞಾಪಾಲನ

ಲೇಖಕ :

ರಾಘವೇಂದ್ರಭೀಮರಾವ ಮನಸಬ್ದಾರ

ಸುರಪುರ

ಮೊದಲನೇ ಆವೃತ್ತಿ ೧೦೦೦

೧ ರೂಪಾಯಿ

ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ

೧೯೬೦

ಅರ್ಪಣಾ ಪತ್ರಿಕೆ

ಒಂದೇ ಒಂದು ತಿಂಗಳದಲ್ಲಿಯೇ ತಾಯಿಯನ್ನಗಲಿದ ನನ್ನನ್ನು ಮೈದುನನ
ಮಗುವು ನನ್ನದೇ ಶಿಶುವೆಂದು ಪರಿಪರಿಯಿಂದ ಪೊರೆದು ಬೆಳೆಸಿ,
ಆವಾಗಲೂ ಸತ್ಕಾರ್ಯಕ್ಕಾಗಿಯೇ ಹುರಿಗೊಳಿಸುತ್ತಿರುವ
ದೇವೀ! ನವಮಾಸ ಹೊತ್ತು ಹೆತ್ತವಳ ಪರಿಚಯವಿಲ್ಲದ
ನನಗೆ ನೀನೇ ತಾಯಿ. ಹೊಟ್ಟೆಯಲಿ ಹುಟ್ಟಿದ ಮಕ್ಕಳ
ಪರಿಚಯವಿಲ್ಲದ ನಿನಗೆ ನಾನೇ ವತ್ಸ. ಮಾತೇ!
ಲಕುಮೀ ಮಾತೇ!! ಭಾಗ್ಯದ ನಿಧಿಯೇ!!!
ಇಗೋ! ನನ್ನ ಅರಳದ ಹೂವು. ಇದನ್ನು ನಾನು
ನಿನ್ನ ಅಡಿದಾವರೆಗಳಲ್ಲಿ ಅರ್ಪಿಸುವೆನು.
ಇನ್ನು ನಿನ್ನ ಕಾಂತಿಯುಕ್ತ ಕಂಗಳ
ನಲ್ನೋಟದಿಂದ ನನ್ನ ಹೃದಯ
ಗುಚ್ಛದಲ್ಲಿರುವ ಇತರ ಮೊಗ್ಗೆ
ಗಳನ್ನು ಬೇಗ ಅರಳಿಸು. ಇದೇ
ನನ್ನ ಬೇಡಿಕೆ.

—ರಾಘು.

ಪ್ರಸ್ತಾವನೆ

ಕನ್ನಡದ ವಿಷಯದಲ್ಲಿ ಕರ್ನಾಟಕದ ಎಲ್ಲ ಭಾಗಗಳಿಗಿಂತ ನೈರ್ಋತ್ಯ ಕರ್ನಾಟಕದ ಸ್ಥಿತಿಯು ಹೆಚ್ಚು ಶೋಚನೀಯವಾಗಿದೆ. ಕರ್ನಾಟಕದಲ್ಲಿ ಎಲ್ಲ ಕಡೆಗೂ ಜಾಗೃತಿಯಾಗಿರುವಂತೆ ಅಲ್ಲಿಯೂ ಆಗಿದೆ. ಅದರ ದೃಶ್ಯಚಿನ್ಹವೆಂದರೆ ಅಲ್ಲಿಯ ಕನ್ನಡ ತರುಣರು ಮುಂದೆ ಬಂದು ಕನ್ನಡ ಶಿಕ್ಷಣ ಪ್ರಸಾರಕ್ಕಾಗಿ ಅಲ್ಲಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸುತ್ತಿರುವುದು. ಸಾಮಾನ್ಯವಾಗಿ ಕನ್ನಡಿಗರೆಲ್ಲರಲ್ಲಿಯೂ ಜಾಗೃತಿಯಾಗಬೇಕೆಂದು ರಂಜನರೂಪವಾದ ನಾಟಕಗಳನ್ನು ಬರಿಯುವದನ್ನು ಕೆಲವರು ಕೈಕೊಂಡಿದ್ದಾರೆ. ಅಂಥ ತರುಣರಲ್ಲಿ ಈ ನಾಟಕ ಲೇಖಕರಾದ ವಿ॥ ಮನಸಬದಾರರೂ ಒಬ್ಬರಿದ್ದಾರೆ.

ಇವರಿಗೆ ಮೂಲತಃ ಕನ್ನಡ ಶಿಕ್ಷಣವು ಕಡಿಮೆ. ಕನ್ನಡ ಸಾಹಿತ್ಯದ ಅಭ್ಯಾಸವು ಕಡಿಮೆ. ಹೀಗಿದ್ದು ನಮ್ಮ ಸಾಹಿತ್ಯದಲ್ಲಿ ನಾಟಕಗಳು ಕಡಿಮೆ. ಅದರಲ್ಲೂ ಸಾಮಾಜಿಕ ಐತಿಹಾಸಿಕ ನಾಟಕಗಳು ತೀರ ಕಡಿಮೆ ಎಂಬುದನ್ನು ನೋಡಿ ಜನಸಾಮಾನ್ಯದ ಶಿಕ್ಷಣದ ಈ ಮಹತ್ವದ ಕೊರತೆಯನ್ನು ಕಂಡುಹಿಡಿದು ಕೇವಲ ದೇಶಭಾಷೆಯ ಸದಭಿಮಾನದಿಂದ ಪ್ರೇರಿತರಾಗಿ ಸಮಾಜ ಸೇವೆಯ ಪ್ರಥಮ ಪ್ರಯತ್ನವೆಂದು ಅವರು ನಾಟಕಗಳನ್ನು ಬರೆಯುಲು ಉದ್ಯುಕ್ತರಾಗಿದ್ದಾರೆ. ನಾಟಕವನ್ನು ಆಡಿ ತೋರಿಸದ ಹೊರತು ಅದರ ಸಾಫಲ್ಯವಿಲ್ಲ—ಎಂಬುದನ್ನು ಅರಿತು ಅವರು ಅವುಗಳನ್ನು ಆಡಿ ತೋರಿಸಲೂ ಸಿದ್ಧರಾಗಿದ್ದಾರೆ. ನಾಟಕ ಲೇಖನದಲ್ಲಿ ಇದು ಅವರ ದ್ವಿತೀಯ ಪ್ರಯತ್ನ. ಇದನ್ನೂ ಇವರು ಆಡಿ ತೋರಿಸಿದ್ದಾರೆ

ಈ ನಾಟಕವು ಕಥಾನಕಕ್ಕಾಗಿಯೂ ಕೆಲಮಟ್ಟಿಗೆ ಭಾಷೆಯ ವಿಚಾರಗಳಿಗಾಗಿಯೂ ಶ್ರೀಮಾನ್ ಗಳಗನಾಥರವರ 'ಕುಮುದಿನಿ' ಎಂಬ ಕಾದಂಬರಿಗೆ ಋಣಿಯಾಗಿದೆ. ಬರಿಯ ಇತಿಹಾಸವು ಜ್ಞಾನಪ್ರದವು.

ಅದೇ ಸಾಹಿತ್ಯರೂಪವನ್ನು ಹೊಂದಿದೊಡನೆ ಜ್ಞಾನದ ಜೊತೆಗೆ ಆನಂದವೂ ಸೇರುವುದು. ಆದರೆ ಅದೊಂದು ದೃಶ್ಯಕಾವ್ಯವಾಗಿ ನಮ್ಮಿದಿರು ಸಾಕ್ಷಾತ್ತಾಗಿ ಬಂದು ನಿಂತಂತಾದರೆ ಅದು ಬಹಳೇ ಸ್ಫೂರ್ತಿದಾಯಕವಾಗುವುದು. ಆ ನಂಬಿಗೆಯಿಂದಲೇ ಅವರೀ ಮಾರ್ಗದಲ್ಲಿ ಪ್ರವರ್ತಿಸುತ್ತಿರುವರು. ತಮ್ಮ ನಾಟ್ಯಕೃತಿಯು ಈಗಾಗಲೆ ಸರ್ವಾಂಗ ಸುಂದರವಾಗಿದೆ ಎಂಬ ಯಾವ ಭ್ರಮೆಯೂ ಅವರಿಗೆ ಇಲ್ಲ. ಪ್ರಥಮ ಪ್ರಯತ್ನಗಳಿಗೆ ಪ್ರೋತ್ಸಾಹನವು ದೊರೆತಲ್ಲಿ ಇನ್ನುಮೇಲೆ ಇದಕ್ಕೂ ಸೊಗಸಾದ ಕೃತಿಗಳನ್ನು ಅಪೇಕ್ಷಿಸಲು ಅಡ್ಡಿ ಇಲ್ಲ. ಇದಲ್ಲದೆ ಒಬ್ಬರ ಕೃತಿಯನ್ನು ನೋಡಿ ಇನ್ನೊಬ್ಬರಿಗೂ ಪ್ರೋತ್ಸಾಹನವು ಬರುವದುಂಟು. ಮತ್ತೂ ರಂಗಭೂಮಿಯಲ್ಲಿ ಆಟವನ್ನು ಆಡಿ ತೋರಿಸಿದ ಮೇಲೆ ಅದಕ್ಕೆ ಮೆಚ್ಚಿದ ಎಷ್ಟೋ ಜನರಿಗೆ ಆ ನಾಟಕವನ್ನು ಓದಬೇಕೆಂಬ ಅಪೇಕ್ಷೆಯು ಆಗುವದುಂಟು. ಹೀಗೆ ಹಲವೊಂದು ಬಗೆಯಿಂದ ವಿಚಾರಮಾಡಿ ಗ್ರಂಥಕರ್ತರು ನಾಟಕ ಪ್ರಕಾಶನನ್ನು ಕೈಕೊಂಡಿದ್ದಾರೆ. ಅವರ ಇಚ್ಛೆಯನ್ನು ಸಫಲಮಾಡುವದು ರಸಿಕರಾದ ಕನ್ನಡ ವಾಚಕ ವರ್ಗವನ್ನು ಕೂಡಿದೆ.

ಮಿತಿ। ಭಾದ್ರಪದ ವ ೧೨
೧೮೫೧

ದ. ರಾ. ಬೇಂದ್ರೆ,
ಧಾರವಾಡ.

ಒಟ್ಟಿಕೆಯಲ್ಲಿ ನಾಟಕವು ಚೆನ್ನಾಗಿದೆಯೆಂದು ಹೇಳದಿರಲಾರೆನು. ಭಾಷೆಯು ತಟ್ಟನೇ ಮನಸ್ಸಿಗೆ ಅರ್ಥವಾಗುವಂತಿದ್ದುದರಿಂದ ಭಾವನೆಗಳು ಸರಳವಾಗಿ ಎದೆಯನ್ನೇ ಸೇರುವುವು. ಸ್ವದೇಶಪ್ರೀತಿಯು ಪ್ರತಿಯೊಂದು ಮಾತಿನಲ್ಲಿಯೂ ಓತಪ್ರೋತವಾಗಿ ತುಂಬಿಕೊಂಡಿದ್ದನ್ನು ನೋಡಿ ಪರಮ ಸಂತೋಷವಾಯ್ತು. ನಿಮ್ಮಂಥ ಯುವಕರು ಕಾರ್ಯೋನ್ಮುಖರಾದರೆ ಕನ್ನಡನುಡಿ ತಾಯಿಯ ಮುಂದಿನ ಬೆಡಗು ಎಂತಿರುವದೋ ಎಂದೆನಿಸುವದು, ನೋಡಬೇಕು. ಕನ್ನಡಿಗರ ಕಾರ್ಯಕುಶಲತೆಯನ್ನು, ನಾಟಕವನ್ನು ಪ್ರಸಿದ್ಧಿಸುವ ಸಂಕಲ್ಪವಿದ್ದರೆ ಅವಶ್ಯವಾಗಿ ಮಾಡಿರೆಂದು ನನ್ನ ಮತ.

ವಿಜಾಪುರ,
೨೪ ಜುಲೈ ೧೯೨೯.

ವ್ಹಿ. ಬಿ. ನಾಯಕ, ಎಂ.ಎ.

ಮುನ್ನುಡಿ

ಸಿರಿಗನ್ನಡ ಸಾಹಿತ್ಯದ ಅಭಿಮಾನಿಯಾದ ಜನತಾ ಜನಾರ್ದನನೇ! ಪಾಮರನಾದ ನನ್ನಲ್ಲಿ ನಿನಗೆ ಸಲ್ಲುವಂಥ ಸೇವೆಯನ್ನು ಮಾಡುವ ಶಕ್ತಿಯಿಲ್ಲ. ಶಕ್ತಿಯಿಲ್ಲದಿದ್ದರೂ ನಿನ್ನ ಸೇವೆಯ ಪರವಾಗಿಯೇ ಅದನ್ನು ಗಳಿಸಿ ಬೆಳೆಸಬೇಕೆಂದು ನನ್ನ ಸಾಹಸ. ಸಾಹಸದಲ್ಲಿ ನನಗೆ ಸನ್ಮಾರ್ಗದರ್ಶಿಯಾಗಲು ನಿನಗೆ ಪ್ರೇರಣೆಯುಂಟಾಗಲೆಂದು ನುಡಿತಾಯಿಯಡಿಯಲ್ಲಿ ಬೇಡಿಕೆ. ಕಾಡಿಬೇಡುವ ಕಂದನನ್ನು ತಾಯಿಯು ವಾತ್ಸಲ್ಯದಿಂದ ಮುದ್ದಿಟ್ಟು ಹಾಲುಕುಡಿಸುವಂತೆ ಕರ್ನಾಟಕಾಂಬೇ! ಬಡಬಾಲಕನಿಗೆ ನಿನ್ನ ಕೃಪಾಪ್ರಸಾದವನ್ನಿತ್ತು ನನ್ನನ್ನು ಹರಸೆಂದು ನನ್ನ ಹಾರೈಕೆ.

ಭಾಗ್ಯನಗರದ ಕನ್ನಡ ಚಳವಳಿಯ ಅಧ್ವರ್ಯುಗಳಾಗಿರುವ ಶ್ರೀ॥ ರಾ॥ ರಾ॥ ಘೀ. ಗೋ. ಚೆಮ್ಮಲಗಿಯವರ ಪ್ರೋತ್ಸಾಹನೆಯಿಂದ ನಾನು ಈ ನಾಟಕವನ್ನು ಬರೆಯಲು ಕೈಕೊಂಡೆನು. ಇದನ್ನು ಬರೆಯುವಾಗ್ಗೆ ನನ್ನ ಸನ್ಮಾನ್ಯ ಗೆಳೆಯರಾದ ಮೈಸೂರಿನ ಶ್ಯಾಮರಾಯರು ಅಥದಿಂದ ಇತಿಯವರೆಗೆ ನನಗೆ ಮಾರ್ಗದರ್ಶಿಯಾಗಿರದಿದ್ದರೆ ಈ ಕೆಲಸವು ಎಷ್ಟರಮಟ್ಟಿಗೆ ಕೊನೆಗಾಣುತ್ತಿತ್ತೋ ತಿಳಿಯದು. ಇವರೀರ್ವರ ಆಭಾರವನ್ನು ನಾನು ಮೊಟ್ಟಮೊದಲು ಮನ್ನಿಸದಿರಲಾರೆನು. ಶ್ರೀ॥ ರಾ॥ ರಾ॥ ಗಂಗಾವತಿ ರಾಘವೇಂದ್ರರಾಯರ ಮತ್ತು ಶ್ರೀ॥ ರಾ॥ ರಾ॥ ಜಳಗೇರಿ ಲಕ್ಷ್ಮಣರಾಯರ ಸಾಹಸಯುಕ್ತವಾದ ಪ್ರಯತ್ನದಿಂದ ಹೈದ್ರಾಬಾದ ಕರ್ನಾಟಕ ಅಮೇಚ್ಯುಅರ ಮಂಡಲಿಯವರು ಬಡಗೆಳೆಯನಿಗೆ ಕೇವಲ ಪ್ರೋತ್ಸಾಹನೆಯೆಂದು ಶ್ರೀ॥ ರಾ॥ ರಾ॥ ಲಕ್ಷ್ಮೀನಾರಾಯಣರಾವ, ಬಿ.ಎ., ಎಲ್‌ಎಲ್.ಬಿ. ಇವರ ನೇತ್ರುತ್ವದಲ್ಲಿ ಎಳೆಯ ಕಂದನಾಗಿದ್ದ 'ಪ್ರತಿಜ್ಞಾಪಾಲನ'ಕ್ಕೆ ರಂಗಭೂದೇವಿಯ ಪುಣ್ಯದರ್ಶನವನ್ನು ಮಾಡಿಸಿಕೊಟ್ಟು ಪುಸ್ತಕಕ್ಕಾಗಿ ತಮ್ಮ ಭಾವಚಿತ್ರಗಳನ್ನು ಕೊಟ್ಟ ಗೆಳೆಯರ ಉಪಕಾರವನ್ನು ನಾನೆಷ್ಟು ನೆನಿಸಿಕೊಂಡರೂ ಕಡಿಮೆಯೆ. ಈ ಮಂಡಲಿಯವರು ಈ ನಾಟಕವನ್ನು ಪ್ರಯೋಗ ಮಾಡಲು ಪೂರ್ಣವಾಗಿ ಅಧಿಕಾರವುಳ್ಳವರಾಗಿದ್ದಾರೆ.

ತೀರ ಬಾಲ್ಯಾವಸ್ಥೆಯಲ್ಲಿರುವ ಚಿಕ್ಕಮಗುವು ಹಿರಿಯರಂತೆ ತನ್ನ ಬಾಲಭಾವಕ್ಕನುಸರಿಸಿ ದೇವಪೂಜೆಯನ್ನು ಮಾಡುವುದನ್ನು ಕಂಡು ಆ ಬಾಲಕನ ಹಿತೈಷಿಗಳಾದ ಹಿರಿಯರು ಕೌತುಕಪಟ್ಟು "ಹೀಗೆಯೇ ನೀನು ಹರಿಭಕ್ತನಾಗು" ಎಂದು ಆಶೀರ್ವದಿಸುವಂತೆ ಗು॥ ದೇ॥ ಭ॥ ಬೇಂದ್ರೆಯವರಂಥ ವಾಙ್ಮಯವಿಶಾರದರೂ ಕವಿವರ್ಯರೂ ತಮ್ಮ ಪ್ರೋತ್ಸಾಹಪರವಾದ ಪ್ರಸ್ತಾವನೆಯಿಂದಲೂ, ಶ್ರೀ॥ ದೇ॥ ಭ॥ ವ್ಹಿ. ಬಿ. ನಾಯಿಕರು ತಮ್ಮ ಹುರಿದುಂಬಿಸುವ ಅಭಿಪ್ರಾಯದಿಂದಲೂ "ಬಾಲಕಾ! ಇಂತೆಯೇ ಕರ್ನಾಟಕಾಂಬೆಯ ಪರಮ ಭಕ್ತನಾಗು" ಎಂದು ನನ್ನನ್ನು ಆಶೀರ್ವದಿಸಿದ್ದಕ್ಕಾಗಿ ನಾನು ಆಜನ್ಮ ಅವರಿಗೆ ಋಣಿಯಾಗಿದ್ದೇನೆ.

ಶ್ರೀ॥ ರಾ॥ ರಾ॥ ಭೀಮಸೇನರಾವ ದೇಸಾಯಿ ಮುಡಮಾಲ, ಶ್ರೀ॥ ರಾ॥ ರಾ॥ ಜೋಶಿ ಕೃಷ್ಣಾಚಾರ್ಯ, ಬಿ.ಎ., ಎಲ್‌ಎಲ್.ಬಿ., ಹೈದ್ರಾಬಾದ ಇವರೀರ್ವರು ಪುಸ್ತಕವನ್ನು ಪ್ರಕಾಶಿಸುವುದರಲ್ಲಿ ಉದಾರವಾದ ಬುದ್ಧಿಯಿಂದ ಸಹಾಯವನ್ನಿತ್ತಿದ್ದರಿಂದ ಅವರಿಗಾಗಿ ನನ್ನ ಕೃತಜ್ಞತೆಯನ್ನು ವ್ಯಕ್ತಗೊಳಿಸದಿರಲಾರೆನು.

ಪುಸ್ತಕದಲ್ಲಿರುವ ಛಾಯಾಚಿತ್ರಗಳನ್ನು ತೆಗೆದುಕೊಟ್ಟಿರುವ ಶ್ರೀ॥ ರಾ॥ ರಾ॥ ಮೂರ್ತಿಯವರನ್ನೂ, ಮುಖಪೃಷ್ಠದಲ್ಲಿರುವ ಸುಂದರವಾದ ಚಿತ್ರವನ್ನು ತೆಗೆದುಕೊಟ್ಟಿರುವ ನನ್ನ ಸಹಾಧ್ಯಾಯಿಗಳಾದ ಕಲ್ಬುರ್ಗಿಯ ಚಿತ್ರಗಾರರಾದ ಶ್ರೀ॥ ರಾ॥ ರಾ॥ ಅಲ್ದೀ ಶಂಕರರಾಯರನ್ನೂ, ಆಗಾಗ್ಗೆ ಉಪಯುಕ್ತವಾದ ಸೂಚನೆಗಳನ್ನಿತ್ತ ಶ್ರೀ॥ ರಾ॥ ರಾ॥ ಜಹಗೀರದಾರ ರಾಘವೇಂದ್ರರಾಯರನ್ನೂ, ಶ್ರೀ॥ ರಾ॥ ರಾ॥ ಅಶ್ವತ್ಥರಾವ, ಬಿ.ಎ., ಎಲ್‌ಎಲ್.ಬಿ. ಇವರನ್ನೂ, ಇನ್ನೂ ಹಲವು ಸನ್ಮಿತ್ರರನ್ನೂ ನಾನೆಷ್ಟು ಕೊಂಡಾಡಿ ಹೇಳಿಕೊಂಡರೂ ಕಡಿಮೆಯೆ.

ಪುಸ್ತಕವನ್ನು ಮುದ್ರಿಸುವ ಹೊಣೆಗಾರಿಕೆಯನ್ನು ಹೊತ್ತು ಅದನ್ನು ಅಂದವಾಗಿ ಸಿದ್ಧಗೊಳಿಸಿದ ಬೆಂಗಳೂರ ಮುದ್ರಣಾಲಯದ ವ್ಯವಸ್ಥಾಪಕರ ಆಭಾರವನ್ನು ಬಹಳ ಪ್ರೇಮಪೂರ್ವಕವಾಗಿ ಮನ್ನಿಸುತ್ತೇನೆ.

ಕಲ್ಬುರ್ಗಿ,
೧ನೇ ಏಪ್ರೈಲ್ ೧೯೩೦.

ರಾ. ಭೀ. ಮನಸಬ್ದಾರ.

ಪಾತ್ರಗಳು

೧.	ವೇಂಕಟದೊರೆಗಳು	ಚಂದ್ರಗಿರಿಯ ಅರಸರು
೨.	ರಂಗರಾಯರು	ಅರಸರ ಅಣ್ಣನ ಮಕ್ಕಳು
೩.	ವೀರನರಸಿಂಹ	ರಂಗರಾಯರ ಜ್ಯೇಷ್ಠ ಪುತ್ರ
೪.	ಚಿನ್ನವೇಂಕಟ	,, ಮಧ್ಯಮ ,,
೫.	ಚಿಕ್ಕರಾಯ	ಚಾಯಮ್ಮ ರಾಣಿಯವರು ಸಾಕಿದ ಮಗು
೬.	ಎಚ್ಚನಾಯಕ	ಪ್ರತಾಪದುರ್ಗದ ಸ್ವಾಮಿನಿಷ್ಠ ಸರದಾರರು
೭.	ಜಗರಾಯ	ಚಂದ್ರಗಿರಿಯ ಮಂತ್ರಿ
೮.	ಮಕರನಾಯಕ	
೯.	ತಿಮ್ಮನಾಯಕ	ಚಂದ್ರಗಿರಿಯ ಸರದಾರರು
೧೦.	ತಿರುಮಲರಾಯ	
೧೧.	ಚಾಂದಖಾನ್	ಎಚ್ಚನಾಯಕರ ಮಹಮ್ಮದೀಯ ಮಿತ್ರ
೧೨.	ವಿಪ್ರಮುನಿ	
೧೩.	ಋಷಿಮುನಿ	
೧೪.	ಪ್ರೇಮಾನಂದ	
೧೫.	ಶ್ಯಾಮಭಟ	
೧೬.	ರಾಣಿ	ರಂಗರಾಯರ ಪತ್ನಿ
೧೭.	ಕುಮುದಿನಿ	ಎಚ್ಚನಾಯಕರ ಪತ್ನಿ
೧೮.	ಮೀನಾಕ್ಷಿ	ಕುಮುದಿನಿಯ ಗೆಳತಿ

ಓಂ

ಸಿರಿಗನ್ನಡಂ ಗೆಲ್ಗೆ

ಪ್ರತಿಜ್ಞಾಪಾಲನ

೧ ನೇ ಅಂಕ

೧ ನೇ ನೋಟ

[ಶ್ರೀ ವಿರುಪಾಕ್ಷಲಿಂಗನ ಗರ್ಭಗುಡಿ. ಧೂಪದಿಂದುಂಟಾದ ಹೊಗೆಯು ಮಬ್ಬು. ಅರ್ಚಕರು ಕುಳಿತಿರುವರು. ಎಚ್ಚನಾಯಕನು ತನ್ನ ಸೇನಾಪತಿಗಳೊಡನೆ ಕೈಜೋಡಿಸಿ ನಿಂತಿರುವನು. ಮಂಗಳಾರತಿಯನ್ನು ಭಕ್ತಿಪುರಸ್ಸರವಾಗಿ ಸ್ವೀಕರಿಸಿ, ಉದ್ವೇಗದಿಂದ]

ಎಚ್ಚನಾಯಕ—ಶಂಭೋ ಶಂಕರನೇ! ಮಾಧವಾರ್ಯರ ಮಹಾದೇವನೇ! ಏನಿದು? ಸಾವಿರಾರು ವಿಪ್ರಮುನಿಗಳ ವೇದಘೋಷ ದಿಂದಲೂ, ರಣಶೂರರಾದ ರಾಜರಾಗಮನದಿಂದುಂಟಾದ ಜಯಜಯಕಾರದಿಂದಲೂ, ಭಗವದ್ದಾಸರ ತಾಳ ಮೃದಂಗ ಗಳಿಂದ ಯುಕ್ತವಾದ ಭಜನೆಯಿಂದಲೂ, ಶುಭಸೂಚಕ ವಾದ ಸುಸ್ವರವಾದ ಆಲಾಪಗಳಿಂದ ಜನರ ಆನಂದವನ್ನು ವೃದ್ಧಿಗೊಳಿಸುವ ಸನಾದಿಗಳಿಂದಲೂ, ಭಾವಿಕರ ಜಯಹರ ಎಂಬ ಗರ್ಜನೆಯಿಂದಲೂ ಯಾವ ಘನತೆಯಲ್ಲಿ ನಿನ್ನ ಪೂಜೆಯು ಸಮಾರಂಭವು ಬಲು ಸಡಗರದಿಂದ ಸಾಗು ತ್ತಿತ್ತೋ ಅದೀಗ ಹೀಗೆ ಬೆರಳುಗಳಿಂದ ಎಣಿಸಲ್ಪಡುವ ಬಲು ದೀನರಾದ ಕನ್ನಡಿಗರ ಆರ್ತಸ್ವರದಿಂದೊಡಗೂಡಿದ ಈ ಮಂತ್ರಪುಷ್ಪದಿಂದ, ವೈಭವವು ಸಮಾಧಿಯನ್ನು ಹೊಂದಿ ತೆಂದು ಸೂಚಿಸುವುದಕ್ಕಾಗಿ ಅಲ್ಲಲ್ಲಿರುವ ಬೆಳವುಗಳ ಬಳಲಿಕೆ ಯಿಂದ, ಮ್ಲೇಂಚ್ಛ ವೃತ್ತಿಗೆ ಒಳಗಾಗಿರುವ, ವಿಷಯಾ

ಸಕ್ತಿಯಿಂದ ತೊಳಲುತ್ತಿರುವ, ಐಹಿಕ ಸುಖಕ್ಕಾಗಿ ಹಂಬಲಿಸುತ್ತಿರುವ, ದೀನ ದುರ್ಬಲರು ಹರಿಕೆಗಾಗಿ ಮಾಡುವ ಪ್ರಲಾಪಗಳಿಂದ ಘೋರ ದೃಶ್ಯವನ್ನು ತಾಳಿದ ಈ ಸ್ಥಾನದಲ್ಲಿ ಹೀಗೆ ತಟಸ್ಥನಾಗಿ ಮೂಕನಂತೆ ಕುಳಿತಿರುವೆಯಲ್ಲಾ! ಅಜ್ಞಾನಿಗಳಾದ ಚಿಕ್ಕ ಬಾಲಕರು ತಮ್ಮ ಆಟಗಳಲ್ಲಿ ಗುಬ್ಬಿಯ ಗೂಡನ್ನು ಕಟ್ಟಿ ಪುನಃ ಅಲ್ಪಾವಧಿಯಲ್ಲಿಯೇ ಅದನ್ನು ಮಣ್ಣುಪಾಲು ಮಾಡುವಂತೆ ಹರಿಹರನಿಗೆ ಶ್ರೀ ವಿದ್ಯಾರಣ್ಯರಿಂದ ಆಜ್ಞೆಯನ್ನು ಕೊಡಿಸಿ, ಅವನಿಂದ ಈ ಪ್ರಚಂಡವಾದ ಸಾಮ್ರಾಜ್ಯವನ್ನು ಸ್ಥಾಪಿಸಿದೆಯಾ!! ಆರ್ಯಧರ್ಮಕ್ಕೆ ಒಪ್ಪುವಂಥ ಗ್ರಂಥಗಳಿಗೆ ಜನ್ಮಕೊಟ್ಟು, ಈ ಕಳಚಿಬೀಳುವ ಗುಡಿಗೋಪುರಗಳಿಂದ ಈ ಪ್ರದೇಶವನ್ನು ಸ್ವರ್ಗೀಯವನ್ನಾಗಿ ಮಾಡಿ, ಕೊನೆಗೆ ಹಾಯ್! ತಾಳೀಕೋಟೆಯಲ್ಲಿ ಕನ್ನಡಿಗರ ತಾಳಿಯನ್ನು ರಚಿಸಿ, ಇವೆಲ್ಲವುಗಳನ್ನು ಸುಟ್ಟು ಬೂದಿಮಾಡಿದೆಯಾ!!! ಭಾಪು, ಲೀಲಾ ಲಾಘವಿಯಾದ ಲಯಕರ್ತನೇ! ಭಾಪು. ಜ್ಞಾನಸಾಗರನಾದ ನಿನಗೆಂದಿಗೂ ಇದು ಸರಿಯಲ್ಲ. ಬಲು ವಿಜೃಂಭಣೆಯಲ್ಲಿ ಮೆರೆದ ನಮ್ಮ ಕನ್ನಡ ನಾಡಿನ ಅರಮನೆಯನ್ನು ಸೆರೆಮನೆಯನ್ನಾಗಿ ಮಾಡಿದೆಯಾ!!!! ಹಾಯ್, ಬಂಧನದಲ್ಲಿ ಬೆಂದು ಬೆಂಡಾದ ಬಂಧುಗಳೇ! ನಮ್ಮನ್ನಿನ್ನಾರು ಕಾಪಾಡುವರು? ಅವನು ಸರ್ವತಂತ್ರ ಸ್ವತಂತ್ರನು. ಕಟ್ಟಡವನ್ನೇರಿಸಲು ಅವನೇ ಸಮರ್ಥನು; ಕೆಡಹುವುದಕ್ಕೂ ಅವನೇ ಬಾಧ್ಯಸ್ಥನು. ಪತಿತಪಾವನನೇ! ಛೀ; ಪಾಷಾಣ ಹೃದಯಿಯಾದ ಪರಮೇಶ್ವರನೇ! ನಿನ್ನನ್ನು ನಂಬುವುದೆಂತು? (ಮುಖ್ಯ ಅರ್ಚಕನಿಗೆ) ವಿಪ್ರಶ್ರೇಷ್ಠನೇ! ದೇದೀಪ್ಯಮಾನವಾದ ರಾಮನ ರಾಜ್ಯವನ್ನು ನನ್ನಂಥ ಪಾಮರನು ಪುನಃ ಸ್ಥಾಪಿಸುವುದೆಂತು? ಎಲೈ ಸ್ವರ್ಗಸ್ಥರಾದ ಪಿತೃಗಳೇ! ವಿಜಯನಗರದ ರಾಯರ ಸೇವೆಯ

ವ್ರತವನ್ನು ಅಂಗೀಕರಿಸುವ ನಿಮ್ಮ ಪರಮ ಧ್ಯೇಯವನ್ನು ನಾನಿನ್ನು ಸಾಧಿಸುವುದೆಂತು? ಜನ್ಮದಾತೃವಾದ ಜನಕನೇ! ನಿನ್ನ ವ್ರತವನ್ನೇ ಸಾಗಿಸುವ ವಚನವನ್ನು ಕೊಟ್ಟ ನಿನ್ನ ಅಧಮ ಪುತ್ರನು ದಿಙ್ಮೂಢನಾಗಿ, ಇಗೋ! ಈ ಶಸ್ತ್ರವನ್ನು ಕೆಳಗಿಡುವನು. (ಕೆಳಗಿಡಲಿಕ್ಕೆ ಹೋಗುವಷ್ಟರಲ್ಲಿ)

ವಿಪ್ರಮುನಿ—ನಿಲ್ಲು, ಹೇಡಿಯಾಗಬೇಡ. ಕ್ಷತ್ರಿಯ ಕುಲದಲ್ಲಿ ಜನ್ಮಪಡೆದು ನೀನು ಹೀಗೆ ಬಡಬಡಿಸುವುದನ್ನು ಕಂಡರೆ ಮನಸಿಗೆ ಬಹಳ ವಿಷಾದವಾಗುವುದು. ನಿನ್ನ ಚಂಚಲ ಸ್ವಭಾವವನ್ನು ನೋಡಿ ನಿನ್ನ ಗುರುಹಿರಿಯರು ಸ್ವರ್ಗದಲ್ಲಿ ಮರುಗುವರು. ಎಲಾ! ನಮ್ಮ ಪೂರ್ವಜರು ವೃದ್ಧಾಪ್ಯದಲ್ಲಿಯೂ ಹೀಗೆ ನಿರ್ವೀರ್ಯರಾಗಿ ಷಂಡವೃತ್ತಿಯನ್ನು ಧರಿಸುತ್ತಿದ್ದಿಲ್ಲ. ಅಬಲೆಗೂ ಒಪ್ಪದ ಹತಾಶವಾದ ಸ್ಥಿತಿಯಲ್ಲಿ ಸಬಲರಾದ ನೀವು ಹೀಗೆ ಆದುದ್ದಕ್ಕೇ ನಮ್ಮ ಸ್ವರಾಜ್ಯವೂ ಹೋಯಿತು, ಸುಖವೂ ಹೋಯಿತು, ಸಂಪತ್ತೂ ಹೋಯಿತು. ಇದರಲ್ಲಿ ದೇವರದೇನು ತಪ್ಪು? ಪರಮೇಶ್ವರನು ಸ್ವತಃ ಸತತೋದ್ಯೋಗಿಯಾದಕಾರಣ ಅವನು ನಿಮ್ಮಂಥ ಪೌರುಷಹೀನರಿಗೆಂದೂ ಸಹಾಯವನ್ನೀಯುವುದಿಲ್ಲ. ಧಿಕ್ಕಾರ ನಿಮ್ಮ ತಾರುಣ್ಯಕ್ಕೆ..........

ಎಚ್ಚನಾಯಕ—ತಾಳೆನು, ತಾಳೆನು. ಇಂಥ ಅವಮಾನಕಾರಕ ಶಬ್ದಗಳನ್ನುಚ್ಚರಿಸುವ ನಾಲಿಗೆಯು ಮತ್ತಿನ್ನಾರದಾದರೂ ಆಗಿದ್ದರೆ ಅದನ್ನು ಈ ಕ್ಷಣದಲ್ಲಿಯೇ ತುಂಡು ತುಂಡಾಗಿ ಮಾಡಿಬಿಡುತ್ತಿದ್ದೆನು. ಆದರೆ ಕ್ಷತ್ರಿಯನಾದ ನಾನು ಗೋಬ್ರಾಹ್ಮಣ ಪ್ರತಿಪಾಲಕನು; ವರ್ಣಾಶ್ರಮಧರ್ಮದ ರಕ್ಷಕನು; ಆದಕಾರಣ ಈ ಖಡ್ಗವನ್ನು ಪುನಃ ಒರೆಗಾಣಿಸುವೆನು.

ವಿಪ್ರಮುನಿ— ನೀನು ಕ್ಷತ್ರಿಯ ವೀರನಾದರೆ ನಾನೇನು ಕಡಿಮೆಯಾದವನಲ್ಲ. ಪ್ರತಿಸೃಷ್ಟಿಯನ್ನು ಸೃಜಿಸಿದ ವಿಶ್ವಾಮಿತ್ರನ ಗುರು

ವಾದ ವಸಿಷ್ಠನ ವಂಶದವನು ನಾನು. "ಶಾಪಾದಪಿ ಶರಾದಪಿ" ಎಂಬ ದಿವ್ಯಶಕ್ತಿಯು ನನ್ನಲ್ಲಿದೆ. ನಿನ್ನ ಈ ದರ್ಪೋಕ್ತಿಗೆ ಸೊಪ್ಪುಹಾಕಲು ಹೊಟ್ಟೆಯನ್ನು ಹೊರೆದು ಕೊಳ್ಳುವುದಕ್ಕಾಗಿ ಕೈಯಲ್ಲಿ ಭಿಕ್ಷೆಯ ಪಾತ್ರೆಯನ್ನು ಹಿಡಿದಿರುವ ಬ್ರಾಹ್ಮಣ ವೇಷಧಾರಿಯಾದ ಭಿಕ್ಷುಕನಲ್ಲ. ಅಥವಾ ಅವಿಚಾರದಿಂದ ಕೋಪಗೊಂಡು ನಿನ್ನಂಥ ಕೈಲಾಗ ದವನನ್ನು ಶಪಿಸಿ ಭಸ್ಮಮಾಡಿ ನನ್ನ ತಪೋಬಲವನ್ನು ಕಳೆದು ಕೊಳ್ಳುವುದಿಲ್ಲ. ಅಲ್ಲೋ! ನೀನೊಳ್ಳೇ ಶೂರನಂತೆ ನಟಿಸುವೆ. ನೀನೇನನ್ನು ಮಾಡಬಲ್ಲೆಯೋ?

ಎಚ್ಚನಾಯಕ—ನಾನೇನನ್ನು ಮಾಡಬಲ್ಲೆನೇ? ನನ್ನ ಪ್ರೀತಿಯ ತಾಯ್ನಾಡಿ ಗಾಗಿ ಕುತ್ತಿಗೆಯನ್ನು ಕತ್ತಿಯಮೇಲಿಡುವುದನ್ನು ನಾನು ಬಲ್ಲೆನು. ಶತ್ರುವಿನ ಸಹಸ್ರಾವಧಿ ಸೈನ್ಯವಿದ್ದರೂ ಗೋಬ್ರಾಹ್ಮಣ ರಕ್ಷಣೆಗಾಗಿ ಎದುರಿಸಿ ಒಳಹೊಕ್ಕು ಸಕಲರನ್ನು ಸಂಹಾರಮಾಡುವುದನ್ನು ನಾನು ಬಲ್ಲೆನು. ಜನನೀ ಜನ್ಮಭೂಮಿಯನ್ನು ಯಾರಾದರೂ ಅಪಹರಿಸು ವುದನ್ನು ನಾನು ಕಂಡರೆ ನಾನೊರ್ವನೇ ಕ್ಷಣಮಾತ್ರದಲ್ಲಿ ಅವರನ್ನಡ್ಡಗಟ್ಟಿ ನನ್ನ ಮಾತೆಯನ್ನು ಈ ಬಲವುಳ್ಳ ಭುಜಗಳ ಕೋಟೆಯಿಂದ ಕಾಪಾಡಲು ನಾನು ಚೆನ್ನಾಗಿ ಬಲ್ಲೆನು.

ವಿಪ್ರಮುನಿ— ತಥಾಸ್ತು; ಕನ್ನಡ ವೀರಾ! ತಥಾಸ್ತು; ಕಳೆದುಹೋದ ನಮ್ಮ ಕನ್ನಡಿಗರ ವೈಭವವು ನಿನ್ನಂಥ ಕ್ಷತ್ರಿಯ ವೀರನ ಅವತಾರದಿಂದ ಪುನಃ ಹಾಂ ಹಾಂ ಎಂಬುವುದರಲ್ಲಿ ಬೆಳೆಯು ವುದು. ಇದರಲ್ಲೇನು ಸಂದೇಹವಿಲ್ಲ. ಆನೆಯು ಹೋದರೂ ಇನ್ನೂ ಅದರ ಬಾಲವು ಉಳಿದಿದೆ. ನಮ್ಮ ರಾಯರ ರತ್ನ ಸಿಂಹಾಸನವು ಚಂದ್ರಗಿರಿಯಲ್ಲಿ ಹೊಳೆಯುತ್ತಲಿದೆ. ಅದನ್ನ ಲಂಕರಿಸಿರುವ ಭಾಗ್ಯಶಾಲಿಗಳ ಸೇವೆಯಲ್ಲಿ ನಿನ್ನ ಸಾಹಸ ಯುಕ್ತವಾದ ಸಹಾಯವನ್ನಿತ್ತು ಮತ್ತೊಮ್ಮೆ ನಮ್ಮ ರಾಯರ ಪೀಠದ ಪ್ರತಿಷ್ಠಾಪನೆಯನ್ನು ಮಾಡು. ಇಗೋ!

ಈ ಫಲಮಂತ್ರಾಕ್ಷತೆಯನ್ನು ಸ್ವೀಕರಿಸು. ಶ್ರೀ ವಿರು ಪಾಕ್ಷನು ನಿನಗೆ ಖ್ಯಾತಿಯನ್ನೂ, ವೈಭವವನ್ನೂ, ಶ್ರೇಯ ಸ್ಸನ್ನೂ ನೀಡಲಿ. ನಮ್ಮ ಶೂರ ಸರದಾರನ ವೀರರೇ! ನಿಮ್ಮ ನಾಯಕನ ಧ್ವಜದ ಕೆಳಗೆ ಸಾಹಸಗೈದು ನಮ್ಮ ನಾಡಿನ ವೈಭವವನ್ನು ವೃದ್ಧಿಗೊಳಿಸಿರಿ. (ಎಲ್ಲರೂ ದೇವರಿಗೂ ವಿಪ್ರರಿಗೂ ನಮಸ್ಕರಿಸಿ 'ಹರಹರ ಮಹಾದೇವ,' 'ಜಯಭುವನೇಶ್ವರೀ,' 'ಜಯ ಬನಶಂಕರೀ' ಎಂದು ಗರ್ಜಿಸುತ್ತ ತೆರೆಯೊಳಗೆ ಹೋಗುವರು.)

---

೨ ನೇ ನೋಟ

[ಬೀದಿಯ ನೋಟ.]

ಶ್ಯಾಮಭಟ— (ಪ್ರವೇಶಿಸಿ) ಯಜ್ಞೋಪವೀತವನ್ನು ತೋರಿಸಿದ ಕೂಡಲೇ ಭೂತಗಳು ಓಡಿಹೋಗುತ್ತಿದ್ದವಂತೆ. ಆದರೆ ಆ ವಿಚಾರ ಈಗ ದೂರವಿರಲಿ. ಯವನರನ್ನು ನೋಡಿದ ಕೂಡಲೇ ನಾವೇ ಓಡಿಹೋಗುವೆವು. ಅಬ್ಬಬ್ಬ! ಏನು ಕಾಲದ ಮಹಿಮೆ! ಒಳ್ಳೇದು ಕಾಲದಲ್ಲೇನಾದರೂ ಅಂತರವು ಕಂಡು ಬರುವುದೋ? ಅವೇ ಪೂರ್ವ ಪಶ್ಚಿಮ ದಿಕ್ಕುಗಳು ಪೂಷ್ಣೆ ಯನ ಉದಯಾಸ್ತ ಸ್ಥಾನಗಳಿವೆ. ಮಳೆಗಾಲ, ಚಳಿಗಾಲ, ಬೇಸಿಗೆಗಾಲ ಇವುಗಳ ಕ್ರಮವೂ ಸರಿಯಾಗಿದೆ. ಹು; ನನಗೇಕಿದರ ಗೊಡವೇ? ಆ ಪುಣ್ಯಾತ್ಮನು ತನ್ನ ತಂದೆಯ ಮುಕ್ತಿಯ ಪ್ರೀತ್ಯರ್ಥ ಒಳ್ಳೇ ರುಚಿಕರವಾದ ಇಚ್ಛಾ ಭೋಜನವನ್ನೂ ಈ ಭೂರಿದಕ್ಷಿಣೆಯನ್ನೂ ಇಂತಹ ಕೊಳಕು ವಿಚಾರಮಾಡುವುದಕ್ಕಾಗಿ ಕೊಟ್ಟಿರುವನೇ? ನಾವು ಬ್ರಾಹ್ಮಣರು ಎಷ್ಟಾದರೂ ಭಿಕ್ಷುಕರು. ನಮಗೇಕೆ ಇವೆಲ್ಲಾ? ಅವನು ಹಾಗೇಕಾದನು? ಇವನು ಹೀಗೇ ಕಾದನು? ಕಾಗಿಯು ಕಪ್ಪೇಕೇ? ಗುಬ್ಬಿಯು ಬೆಳ್ಳಗೇಕೇ?

ಇವುಗಳೆಲ್ಲ ಬಡಬ್ರಾಹ್ಮಣರಾದ ನಮಗೇಕೇ? (ತೆರೆಯೊಳಗೆ ನೋಡಿ) ಓಹೋ! ಪಾಠಶಾಲೆಯ ಪ್ರೇಮಾನಂದ ಸ್ವಾಮಿ ಗಳು ಇತ್ತ ಬರುತ್ತಿರುವರು. ಬನ್ನಿ, ಅಧ್ಯಾಪಕರೇ! (ಪ್ರೇಮಾನಂದನು ಬರುವನು.) ಎಲ್ಲವೂ ಕುಶಲವೋ?

ಪ್ರೇಮಾನಂದ—ಈಶಾನುಗ್ರಹ. ಆದರೆ ತಾವು ಒಳ್ಳೇ ವಿಚಾರಗಳಲ್ಲಿ ಮಗ್ನರಾದಂತೆ ತೋರುತ್ತದೆ.

ಶ್ಯಾಮಭಟ— ಏತರ ವಿಚಾರಗಳು ಬಿಡಿ. ಅವುಗಳನ್ನಾಡಿ ತೋರಿಸು ವುದೂ ಕಷ್ಟದಾಯಕ.

ಪ್ರೇಮಾನಂದ—ಅಂತಹ ಸಂಕಟಕ್ಕೆ ಗುರಿಮಾಡುವ ವಿಚಾರಗಳಾದರೂ ಆವುವು? ಸ್ವಲ್ಪ ಹೇಳಿ. ನನ್ನಿಂದ ಸಹಾಯವಾಗು ವಂತಿದ್ದರೆ ನೋಡುವೆನು.

ಶ್ಯಾಮಭಟ— ಯವನರ ಭಯವೇನೋ ಸರಿಯೇ ಸರಿ. ಇವತ್ತಿ ನಾಳೆಂತೂ ನಮ್ಮವರೆಂದೆನಿಸಿಕೊಳ್ಳುವವರಲ್ಲಿಯೂ ನಂಬಿಗೆಯನ್ನಿಡ ಗೂಡದು.

ಪ್ರೇಮಾನಂದ—ಸ್ವಲ್ಪ ಹೇಳಿ ಸ್ವಾಮಿ. ಸಂಕೋಚವೇಕೇ?

ಶ್ಯಾಮಭಟ— ಸಂಕೋಚವೇನು? ನೀವೇನು ಶತ್ರುಗಳ ಗೂಢಚಾರ ರಲ್ಲವಲ್ಲ?

ಪ್ರೇಮಾನಂದ—ಪ್ರಸ್ತಾವನೆಯನ್ನು ಸಾಕುಮಾಡಿ, ಮಹಾಶಯರೇ! ಬೇಗ ಹೇಳಿ.

ಶ್ಯಾಮಭಟ— ಅವೇ ಸರಿಸರಿ. ಹೇಳುವುದೇನು? ಆ ಸುಡಗಾಡ ದೇಶಕಾಲ ಪರಿಸ್ಥಿತಿಯ ವಿಚಾರಗಳು. ನನ್ನ ಸಂಧ್ಯೆಯ ಸಮಯ ದಲ್ಲಿಯೂ ಈ "ದೇಶಕಾಲ"ವೆಂಬ ಶಬ್ದಗಳನ್ನುಚ್ಚರಿಸ ಬೇಕಾದರೆ ನನಗೆ ತಲೆನೋವು.

ಪ್ರೇಮಾನಂದ—ಪರಿಸ್ಥಿತಿಯನ್ನು ಕುರಿತು ನಾವೇನು ವಿಚಾರಮಾಡ ಬಾರದೇ?

ಶ್ಯಾಮಭಟ— ಏಕೆ ಸ್ವಾಮಿಾ! ನಮ್ಮ ವ್ಯವಹಾರಕ್ಕನುಸರಿಸಿ ಹೊಟ್ಟೆಯ ಉದ್ಯೋಗಗಳನ್ನು ನಾವು ಮಾಡಿದರೆ ಸಾಕು. ಉಳಿದ ಸಂಗತಿಗಳು ನಮಗೆ ಬೇಡವೇ ಬೇಡ.

ಪ್ರೇಮಾನಂದ—ಹಾಗಾದರೆ ನಿಮ್ಮ ಉದ್ಯೋಗಗಳನ್ನಾದರೂ ಹೇಳಿ.

ಶ್ಯಾಮಭಟ— ಬಿಕ್ಕೆಯಂತೂ ಬಿಟ್ಟಿದ್ದಲ್ಲ. ಅದಲ್ಲದೇ ತರುಣ ತರುಣಿಯರ ಲಗ್ನಗಳನ್ನು ಕೂಡಿಸುವುದು. ಇದಕ್ಕೂ ಹೆಚ್ಚಿನ ಲಾಭ ವುಳ್ಳ ಉದ್ಯೋಗಗಳೆಂದರೆ ಜರಠ ವಿವಾಹಗಳ ಗುತ್ತೆ ಹಿಡಿ ಯುವುದು. ಇಲ್ಲದ ಕೀಟಕುಪದ್ರವವನ್ನುಂಟುಮಾಡಿ ಜನರಿಗೆ ಮಠದಿಂದ ಬಹಿಷ್ಕಾರವನ್ನು ಹಾಕಿಸುವುದು. ಮತಮತಾಂತರದ ಗೊಂದಲವನ್ನೆಬ್ಬಿಸಿ ಪ್ರತಿಷ್ಠಿತತನವನ್ನು ಸಾಧಿಸುವುದು. ಇತ್ಯಾದಿ ಇತ್ಯಾದಿ. ಆದರೆ ನನ್ನಂಥ ಜಾಣನ ಉದ್ಯೋಗವಂತೂ ಎಲ್ಲರಿಗೂ ಹಿಂಗಿಲಾದದ್ದು.

ಪ್ರೇಮಾನಂದ—ಅದನ್ನಷ್ಟು ಹೇಳಿ.

ಶ್ಯಾಮಭಟ— (ನಾಲಿಗೆಯನ್ನು ಕಚ್ಚುತ್ತಾ) ಇಂಥ ವಿಧವಿರ್ಾಯರ ಆಡಳಿತ ದಲ್ಲಿ ಕುಮಾರಿಗಳ ವ್ಯಾಽಽಪಾರದಿಂದ......

ಪ್ರೇಮಾನಂದ—(ತನ್ನ ಕಟಾರಿಯನ್ನು ಹಿರಿದು) ಇನ್ನು ಮಾತ್ರ ನಿನ್ನ ನೀಚತನ ವನ್ನು ಸಹಿಸೆನು. ಅಧಮಾ! ನಿರ್ಲಜ್ಜಾ! ಬ್ರಾಹ್ಮಣ ವರ್ಗವನ್ನೇ ನರಕದಲ್ಲಿ ಕೆಡಹುವ ಕುಠಾರಾ! ನಿಲ್ಲು. ನಿನ್ನ ಅಸ್ತಿತ್ವವನ್ನೇ ಕಳೆಯುವೆನು. (ಸ್ವಗತ) ಅಯ್ಯೋ ಬ್ರಾಹ್ಮಣನು ಬ್ರಾಹ್ಮಣನನ್ನು ಕೊಲ್ಲುವ ಪ್ರಸಂಗವು ಬಂದಿತೇ! ಆದರೆ ಇಂಥ ಕುಕರ್ಮ ರೋಗಿಯಾದ ಕೀಟಕ ವನ್ನು ಕೊಂದರೇನೇ ಸಮಾಜದ ಸ್ವಾಸ್ಥ್ಯವು; ಇಲ್ಲದಿದ್ದರೆ ಅನರ್ಥಾಪಾತವು.

ಶ್ಯಾಮಭಟ— ಬೇಡಪ್ಪಾ, ನೀನು ನನ್ನಂತೆಯೇ ಭಿಕ್ಷುಕ ಬ್ರಾಹ್ಮಣ ನಿರುವೆಯಲ್ಲ......

ಪ್ರೇಮಾನಂದ—ಶ್ರೀ ಅವಧೂತನ ದಾಸನಾದ ನಾನು ನಿನ್ನಂಥ ಕ್ಷುದ್ರ ತಿರುಕನಲ್ಲ, ನನಗೆ ಭಿಕ್ಷೆಯನ್ನು ನೀಡಿದವರಿಗೆ ಅಕ್ಷಯವಾಗಿ ಲಕ್ಷ್ಮಿಯು ಒಲಿಯಲೆಂದು ಅವರಿಗಾಗಿಯೂ, ಅವರನ್ನೊಳಗೊಂಡ ಸಮಾಜಕ್ಕಾಗಿಯೂ ಶ್ರೀದತ್ತರಾಜನನ್ನು ಬೇಡಿಕೊಳ್ಳುತ್ತಾ ಕಾಲಹರಣಮಾಡುವ ಋಷಿವಂಶದ ಬ್ರಾಹ್ಮಣನು ನಾನು. ಹುಂ; ತಡಮಾಡಬೇಡ. ತಲೆಯನ್ನು ಚನ್ನಾಗಿ ಬಗ್ಗಿಸು. ಅದನ್ನೀಗಲೇ ಛೇದಿಸುವೆನು.

ಶ್ಯಾಮಭಟ— ನೋಡು ; ಬ್ರಹ್ಮಹತ್ಯೆಯ ಪಾತಕಕ್ಕೆ ಗುರಿಯಾಗುವೆ ......

ಪ್ರೇಮಾನಂದ—ಆರ್ಯಧರ್ಮದಿಂದ ಪತಿತನಾದ ಅನಾರ್ಯನೇ! ನೀನು ಬ್ರಾಹ್ಮಣನೇನು !

ಶ್ಯಾಮಭಟ— ಹಾಗಾದರೆ ಈಗ ವಶಿಷ್ಠನಂಥ ಬ್ರಾಹ್ಮಣನಾದರೂ ಆವನಿರುವನು ? ಮೊದಲು ಅವನನ್ನು ತೋರಿಸಿ ಆಮೇಲೆ ನನ್ನ ರುಂಡವನ್ನು ಹಾರಿಸು.

ಪ್ರೇಮಾನಂದ—ನೀನನ್ನುವದು ನಿಜವು. ಕಾಲಚಕ್ರದ ಇರುಕಿನಲ್ಲಿ ನಮ್ಮ ಸಮಾಜವು ಸಿಲುಕಿರುವ ಕಾರಣ ವರ್ಣಾಶ್ರಮಧರ್ಮವನ್ನು ಇದ್ದಕ್ಕಿದ್ದ ಹಾಗೆ ಪಾಲಿಸುವುದು ನಮಗೆ ಅಶಕ್ಯವಾದರೂ, ನಮ್ಮಲ್ಲಿಯ ಬ್ರಾಹ್ಮಣ ರತ್ನಗಳು ಅದರ ವೈಶಿಷ್ಟ್ಯವನ್ನು ಕಾಯ್ದುಕೊಂಡು, ಮನ್ವಾದಿ ಋಷಿಗಳಿಗೆ ಶರಣುಹೋಗಿ, ಆಪದ್ಧರ್ಮಕ್ಕನುಸರಿಸಿಯೇ ಶ್ರೇಯಸ್ಕರವಾದ ಮಾರ್ಗವನ್ನು ಹುಡುಕಿ ತೆಗೆಯುತ್ತಲಿರುವರು. ಆದರೆ ಪೂರ್ಣವಾಗಿ ಅವೈದಿಕ ವೃತ್ತಿಯನ್ನು ಅವಲಂಬಿಸಿರುವ ಕ್ಷುದ್ರ ಮನಸಿನ ನಿನ್ನಂಥ ಬ್ರಾಹ್ಮಣನು ಹಿಂದೆಂದೂ ಹುಟ್ಟಿಲ್ಲ. ಮುಂದೆಂದೂ ಹುಟ್ಟುವಂತಿಲ್ಲ. ಅದಕ್ಕಾಗಿ ನೀನು ಹೀಗಾಗಿರುವುದಕ್ಕಿಂತಲೂ ಸತ್ತುಹೋಗುವುದು ಬಹು ಲೇಸು. ಹುಂ; ಸಿದ್ಧನಾಗು.

ಶ್ಯಾಮಭಟ— ಅಯ್ಯೊಯ್ಯೋ! ಇದೇನು? ಇವರು ನನ್ನನ್ನು ಬಿಡು ವಂತಿಲ್ಲ. ಈ ಯುಗದಲ್ಲಿ ಯಾರನ್ನೂ ನಂಬಕೂಡದು. ಎತ್ತ ನೋಡಿದರೂ ಅಧರ್ಮವೇ ಕಾಣುವುದು. ಅಧಃಪಾತಕ್ಕಂತೂ ಎಣೆಯಿಲ್ಲ.

ಪ್ರೇಮಾನಂದ—ಅಹುದು ಮೂರ್ಖಾ! ನಿನ್ನಂಥ ನರಾಧಮರಿಂದಲೇ ನಮ್ಮ ಜನಾಂಗವು ಇಂತಹ ಹೃದಯದ್ರಾವಕ ಸ್ಥಿತಿಯಲ್ಲಿದೆ. ಸ್ವಲ್ಪ ಶಾಂತಚಿತ್ತದಿಂದ ವಿಚಾರಮಾಡು, ಬಂಧೋ! ಬ್ರಾಹ್ಮಣರೇ ಹೀಗೆ ಧರ್ಮದಿಂದ ಚ್ಯುತರಾಗಲಾರಂಭಿಸಿದರೆ ಉಳಿದ ವರ್ಗದವರು ತಮ್ಮ ತಮ್ಮ ವರ್ಣಾಶ್ರಮಧರ್ಮವನ್ನು ಬಿಟ್ಟರೇನಾಶ್ಚರ್ಯ?

ಶ್ಯಾಮಭಟ—ಸ್ವಾಮಿಗಳೇ! (ಪಶ್ಚಾತ್ತಾಪದಿಂದ **ಉಸುರು ಬಿಟ್ಟು**) ನೈತಿಕ ಅಧಃಪತನದ ಮೂಲಕ ನಾನು ಇಷ್ಟು ಬಲಹೀನನಾಗಿರುವೆನು. ನಿಮ್ಮ ಪವಿತ್ರ ಆಶ್ರಮದಲ್ಲಿ ಈ ಬಡವನನ್ನಿಟ್ಟುಕೊಂಡು ನಿಮ್ಮ ಅಮೂಲ್ಯವಾದ ಉಪದೇಶಾಮೃತದಿಂದ ನನ್ನಲ್ಲಿ ನವಜೀವನವನ್ನುಂಟುಮಾಡಬೇಕೆಂದು ಪ್ರಾರ್ಥನೆ.

ಪ್ರೇಮಾನಂದ—(ಅವನನ್ನಪ್ಪಿ**ಕೊಂಡು**) ಆಹಾ! ಬಂಧೋ! ಸತ್ಯಕ್ಕಾಗಿ ಕಠೋರಾಚರಣೆಯನ್ನು ಗೈದ ಈ ನಿನ್ನ ಚಿಕ್ಕತಮ್ಮನನ್ನು ಕ್ಷಮಿಸು. ಅಣ್ಣಾ, ಎಷ್ಟಾದರೂ ನಾವೂ ನೀವೂ ಒಂದು. ಎಂತಹ ಕಠಿಣಪ್ರಸಂಗವೊದಗಿದರೂ, ನಮ್ಮದನ್ನು ನಾವು ಕಾಯ್ದುಕೊಂಡು ಪರಿಸ್ಥಿತಿಗೆದುರಾಗಿ ನಾವದನ್ನು ಗೆಲ್ಲಬೇಕು. ಹಾಗೆ ಮಾಡಿದರೇನೇ ನಾವು ಬ್ರಾಹ್ಮಣರಾಗಿ ಹುಟ್ಟಿದ್ದಕ್ಕೂ ಸಾರ್ಥಕವು.

ಶ್ಯಾಮಭಟ— ಗುರುವೇ! ಪರಮೇಶ್ವರನನುಗ್ರಹದಿಂದ ನನ್ನ ಮಕ್ಕಳು ಪ್ರಬುದ್ಧರಾಗಿರುವರು. ನನಗೆ ಯಾವ ಪ್ರಕಾರದ ಚಿಂತೆಯಿಲ್ಲ. ನಿಮ್ಮ ಆಜ್ಞಾನುಸಾರವಾಗಿ ನಡೆದು ಇನ್ನು ಮುಂದೆ ಯೋಗ್ಯಮಾರ್ಗವನ್ನವಲಂಬಿಸುವೆನು. ನಾನಿನ್ನು

ಮನೆಮಾರಿನ ಮೇಲೆ ತುಳಸಿ ಪತ್ರವನ್ನು ಇಟ್ಟು ಕೇವಲ ಸಮಾಜಕಾರ್ಯದಲ್ಲಿಯೇ ನನ್ನ ದೇಹವನ್ನು ಸವಿಸುವೆನು. ಗುರುವೇ! ಅನುಗ್ರಹಿಸಬೇಕು.

ಪ್ರೇಮಾನಂದ—ನಾನು ನಿಮ್ಮ ಗುರುವಲ್ಲ. ಶಾಸ್ತ್ರಿಗಳೇ! ನೀವಿನ್ನು ನನ್ನ ಸಹಕಾರಿಗಳಾಗಿ ನಾನು ಕೈಕೊಳ್ಳುವ ಕಾರ್ಯದಲ್ಲಿ ನಿಮ್ಮ ಸಹಾಯವನ್ನೀಯುರಿ. ನಡೆಯಿರಿ. ಹೋಗುವಾ.

(ಹೋಗುವರು.)

---

೩ ನೇ ನೋಟ

[ಪಂಪಾಸರೋವರದಲ್ಲಿಯ ಒಂದು ವನ. ಕುಮುದಿನಿಯು ಒಂದು ಗಿಡದ ಬಡ್ಡೆಗೆ ಹಬ್ಬಿದ ಹೂವಿನಗಿಡದ ಕೆಳಗಿನಲ್ಲಿ ನಿಂತಿರುವಳು.]

ಕುಮುದಿನಿ— ಏನೇ ಮಲ್ಲಿಗೇ! ಇಂದು ಒಂದಾದರೂ ಅಂದವಾದ ಪುಷ್ಪವನ್ನು ಕೊಡುವದಿಲ್ಲವೇನೇ? ಸಖಿಯೇ! ಏಕೆಂದು ನಿನ್ನ ಗೆಳತಿಯನ್ನು ಹೀಯಾಳಿಸುವೇ? (ಗಿಡವನ್ನಲ್ಲಾಡಿಸಿ) ಜಾಣೇ! ಬಿಡು ನಿನ್ನ ಹಟವನ್ನು. ಪುಷ್ಪಗಳಿಲ್ಲದೆ, ನಾನು ತಾತನ ಬಳಿಗೆ ಯಾವ ಮುಖದಿಂದ ಹೋಗಲೇ? ಏನೇ ಆಗಲಿ; ಒಂದು ಹೂವನ್ನಾದರೂ ಪಡೆಯದೆ ನಾನಿಲ್ಲಿಂದ ಕದಲುವದಿಲ್ಲ. ಕಂಡಿಯಾ! ನಿಲ್ಲು; ನಿನ್ನ ಭುಜಗಳ ಮೇಲೆ ನಿಂತು ನಿನ್ನ ಶಿರೋಭಾಗದಲ್ಲಿರುವ ಮೊಗ್ಗೆಗಳನ್ನು ನಾನು ಅಪಹರಿಸುವೆನು. ಇಂದು ನಿನ್ನ ಮನದಲ್ಲಾದರೂ ಏನಿದೇ? ನಾನು ಗಿಡವನ್ನೆಂದೂ ಏರಿದವಳಲ್ಲ. ಏನೇ ಆಗಲಿ; ನಾನೂ ನಿನ್ನಂತೆ ಹಟಮಾರಿಯಾಗುವೆನು. (ಬಳ್ಳಿಯು ಹಬ್ಬಿರುವ ಗಿಡವನ್ನು ಏರಿ ಕೈಗೆ ನಿಲುಕುವಂತಿರುವ ಹೂವುಗಳನ್ನು ಕಂಡು, ನಕ್ಕು) ಹೀಗೆ ಸಖೀ! ನಾಚಿಕೆಯಿಂದ ಸೋತದ್ದಕ್ಕಾಗಿ ನಿನ್ನ ತಲೆಯನ್ನೇಕೆ ತಗ್ಗಿಸುವೇ? ಯಾಕೇ? ಮುಖವನ್ನು ತೋರಿಸಲಾರೇ? (ಹೂವುಗಳನ್ನು

ಕಡಿದು, ಮೂಸಿ) ನೋಡಿದಿಯಾ ನನ್ನ ಕೋಪವು ಹೇಗಿದೆ. (ಕೋಕಿಲೆಯ ಧ್ವನಿಯನ್ನು ಕೇಳಿ) ಏನೇ ಕೋಕಿಲೇ! ತಾತನು ಕರೆಯುವನೇ? (ಬೆಚ್ಚತ್ತು) ಅವ್ವಯ್ಯಾ! ಸಂಧ್ಯೆಯ ವೇಳೆಯು ಮೀರಿತೇ? ತಾತನ ಪೂಜೆಗೆ ಪುಷ್ಪಗಳೇ ಇಲ್ಲ ವಲ್ಲ! (ಮಲ್ಲಿಗೆಗೆ) ಸಖೀ! ಇಂದು ತಡವಾಗಲು ನೀನೇ ಕಾರಣ. ಇದರ ಸೇಡನ್ನು ತೀರಿಸಿದರೇನೇ ನನ್ನ ಹೆಸರು ಚಂಪೆ. (ಇಳಿಯಲಿಕ್ಕೆ ಹೋಗಲು, ಬರದಂತಾಗಿ ಅಲ್ಲಿಯೇ ನಿಲ್ಲು ವಳು.) ಅವ್ವ ನೋಡೇ! ಎಲೆ ಮಲ್ಲಿಗೇ! ನನ್ನ ಸಿಟ್ಟಿನ ಮಾತುಗಳಿಗಾಗಿ ನೀನೀಗಲೇ ನಿನ್ನ ಸೇಡನ್ನು ತೀರಿಸಿ ಕೊಳ್ಳುವಿಯೋ? ಏನೇ ಸಾಕುಮಾಡು. ನೋಡು ತಾತ ನನ್ನು ಕರೆಯುವನು. ಬನ್ನಿ ಬನ್ನಿ ಎನ್ನ ನೆರವಿಗೆ ಬನ್ನಿ! (ತೆರೆಯೊಳಗೆ ನಾಯಕನು "ಯಾರವರಲ್ಲಿ" ಎಂದು ಕೂಗುವನು.) ನೋಡೇ ಯಾವನೋ ದೇವದೂತನು ನನ್ನ ಸಹಾಯ ಕ್ಕಾಗಿ ತಾನೇ ಬಂದನು.

ಎಚ್ಚನಾಯಕ—(ಪ್ರವೇಶಿಸಿ, ಸ್ವಗತ) ಆ ಕೋಮಲ ಕಂಠ ಸ್ವರವು ನನಗಿಲ್ಲಿಂ ದಲೇ ಕೇಳಿಬಂದಿತಲ್ಲ? ಆದರೆ ಇಲ್ಲಂತೂ ಆರೂ ಇಲ್ಲ.

ಕುಮುದಿನಿ—(ಮಲ್ಲಿಗೆಗೆ) ಸಖಿಯೇ ದುಷ್ಟೇ! ಏಕೆಂದು ನನ್ನ ಸೆರಗನ್ನು ಹಿಡಿದಿರುವೇ?

ನಾಯಕ— (ಅವಳೆಡೆಗೆ ನೋಡಿ, ಸ್ವಗತ) ಇವಳಾರು? ಮೋಹಿನಿಯೇನು: ಛೀ; ಪ್ರಮಾದವು; ನನ್ನ ಮಾಯೆಯಾದ ಮೋಹಿನಿಯು ಇನ್ನೆಲ್ಲಿಂದ ಬರುವಳು. (ಪ್ರಕಾಶ) ಕೆಳಗೆ ಬರಲೆತ್ನಿಸು ವಿರೋ? ಬನ್ನಿ ಹೀಗೆ ಬನ್ನಿ. (ಸ್ವಗತ) ಪರನಾರಿಯ ಕರ ವನ್ನು ಹೇಗೆ ಹಿಡಿಯಬೇಕು! (ಪ್ರಕಾಶ) ಹೀಗೆ ಈ ಭುಜ ಗಳ ಮೇಲೆ ನಿಲ್ಲಿ, ಆಗ ಆ ಕೊಂಬೆಯ ಸಹಾಯದಿಂದ ನಿಮಗೆ ಕೆಳಗಿಳಿಯಲಿಕ್ಕೇ ಸುಲಭವಾಗುವುದು (ಹಾಗೆ ಮಾಡಿ ಅವಳು ಲಜ್ಜೆಯಿಂದ ಅಧೋಮುಖಳಾಗಿ ನಿಲ್ಲುವಳು).

ಕುಮುದಿನಿ— (ಸ್ವಗತ) ಮಾತೇ ಮಲ್ಲಿಗೇ! ನಿನ್ನ ಉಪಕಾರಗಳನ್ನು ನಾನು ತೀರಿಸುವದೆಂತು?

ನಾಯಕ— ಒಳ್ಳೇದು; ನಾನಿನ್ನು ಬರುವೆನು.

ಕುಮುದಿನಿ— (ಸ್ವಗತ) ನೀರಾ! ನಾಯಕಾ! ನಿಮ್ಮನ್ನು ಕಾಣುವ ಶುಭ ಪ್ರಸಂಗವು ಇಂದು ನನ್ನ ಪ್ರಿಯ ಸಖಿಯಾದ ಮಲ್ಲಿಗೆಯೇ ತಂದಿರುವಳಲ್ಲ. (ಪ್ರಕಾಶ) ನರವೀರರೇ! ನಿಮ್ಮಂಥ ಶೂರ ವಿಭೂತಿಗಳ ಅಂಗವನ್ನು ನಾನು ನನ್ನ ಪಾದ ಸ್ಪರ್ಶದಿಂದ ಮಲಿನಮಾಡಿದ್ದಕ್ಕಾಗಿ ಕ್ಷಮಿಸಬೇಕು.

ನಾಯಕ— ನಾನು ವಿಭೂತಿಯಲ್ಲ ಸಾಮಾನ್ಯ ಪುರುಷನು. ಋಷಿ ಕನ್ನೆಯ ದರ್ಶನದಿಂದ ನಾನಿಂದು ಧನ್ಯನಾದೆನು. ತಮ್ಮ ಹೆಸರೇನು?

ಕುಮುದಿನಿ— ನನ್ನ ಹೆಸರು ಚಂಪೆ. ನಾನು ಹತ್ತಿರದಲ್ಲ ಗುಡಿಯಲ್ಲಿರುವ ಓರ್ವ ಋಷಿ ಕನ್ನೆಯು. ಒಳ್ಳೇದು, ತಾತನು ನನ್ನ ಮಾರ್ಗ ಪ್ರತೀಕ್ಷೆಯನ್ನು ಮಾಡುತ್ತಿರಬಹುದು. ವೇಳೆಯಾಗಿದೆ. ಋಷಿದರ್ಶನಾರ್ಥ ಬರಬಹುದಲ್ಲವೇ? (ಹೋಗುತ್ತ) ಯಾಕೇ? ಈಗಲೇ......

ನಾಯಕ— ಈಗಾಗಲೇ ಬರಲು ನನಗೆ ಸಮಯವಿಲ್ಲ. ನಾನು ಬೇಗ ಚಂದ್ರಗಿರಿಗೆ ಹೋಗಬೇಕಾಗಿದೆ. ತಿರುಗಿ ಬರುವಾಗ್ಗೆ ಬರುವೆನು.

ಕುಮುದಿನಿ— ಹಾಗಾದರೆ ನನಗೆ ಅಪ್ಪಣೆಯಾಗಬೇಕು. (ಸ್ವಗತ) ಆಹಾ! ಋಷಿ ಸೇವೆಯ ಫಲವು ನನಗಿಂದು ಕೈಗೂಡಿತು. ಒಳ್ಳೇದು ತಿರುಗಿ ಬಂದ ವೇಳೆಯಲ್ಲಿಯೇ ನೋಡಿಕೊಳ್ಳುವೆನು, ನಾಯಕರೇ! (ಹೋಗುವಳು.)

ನಾಯಕ— (ಸ್ವಗತ) ಏನಿದು? ಧ್ವನಿಯನ್ನಂತೂ ಎಲ್ಲಿಯೋ ಕೇಳಿದ ಹಾಗೆ ತೋರುವುದು. ನನ್ನ ಮೋಹಿನಿಯೇ ಇರಲಿಕ್ಕಿಲ್ಲವೇ? ಛೇ; ಇರಲಾರಳು. ಅದರಲ್ಲಿಯೂ ಇವಳ

ಹೆಸರು ಚಂಪೆಯಂತೆ; ಇರಲಿ; ಇದಕ್ಕಾಗಿ ಹೆಚ್ಚು ವಿಚಾರಮಾಡಲು ವೇಳೆಯಿಲ್ಲ. (ಅಷ್ಟರಲ್ಲಿ ಒಬ್ಬ ಮುಸಲ್ಮಾನ ಸರದಾರನು ತನ್ನ ಇಬ್ಬರು ಜನರೊಡನೆ ಅಲ್ಲಿಗೆ ಬಂದು)

ಚಾಂದಖಾನ—(ಸ್ವಗತ) ಛೇಸ್; ಶತ್ರುಪಕ್ಷದ ನಾಯಕನು ನನ್ನ ಹಿಡಿತದಲ್ಲಿ ಚನ್ನಾಗಿ ಸಿಲುಕಿರುವನು. (ನಾಯಕನಿಗೆ ಪ್ರಕಾಶ) ಎಲೋ! ನನ್ನ ದೈವವು ನನ್ನ ಸಹಾಯಕ್ಕೆ ಇಂದು ತಾನೇ ಬಂದಿದೆ. ಇದೀಗಲೇ ಹಸಿದು ನೀರಡಿಸಿದ ನನ್ನ ಖಡ್ಗಕ್ಕೆ ನಿನ್ನ ಆಹುತಿಯನ್ನು ಅರ್ಪಿಸಿ ಜನ್ಮ ಸಾಫಲ್ಯವನ್ನು ಮಾಡಿಕೊಳ್ಳುವೆನು. (ಅವನೂ ಅವನ ಇಬ್ಬರು ಸರದಾರರೂ ಖಡ್ಗಗಳನ್ನು ಒರೆಯೊಳಗಿಂದ ಹಿರಿಯುವರು. ನಾಯಕನೂ ಹಾಗೇಯೇ ಮಾಡುವನು. ಯುದ್ಧವು ಸಾಗುವುದು. ಖಾನನ ಕೈಯೊಳಗಿಂದ ಖಡ್ಗವು ಕೆಳಗೆ ಬೀಳುವುದು. ಇದನ್ನು ನೋಡಿ ಅವನ ಜನರು ಓಡುವರು. ನಾಯಕನು ತನ್ನ ಖಡ್ಗವನ್ನು ಒರೆಯೊಳಗಿಟ್ಟು, ಖಾನನನ್ನು ನೋಡುತ್ತಾ ನಿಲ್ಲುವನು.)

ಚಾಂದಖಾನ—ಆಹಾ! ಕರ್ನಾಟಕದ ಪ್ರತಾಪಶಾಲಿಯೇ! ಅನಾಯಾಸವಾಗಿ ನೀನು ಶತ್ರುವನ್ನು ನಿನ್ನ ಅಂಕಿತದಲ್ಲಿ ಪಡೆದಿರಲು, ಅವನನ್ನು ನಿಃಶಸ್ತ್ರ ಸ್ಥಿತಿಯಲ್ಲಿ ಸಂಹರಿಸುವುದು ಯೋಗ್ಯವಲ್ಲವೆಂದು, ಶಸ್ತ್ರಕ್ಕಿಂತಲೂ ತೀಕ್ಷ್ಣವಾದ ಅವಮಾನದಿಂದ ನನ್ನ ಕರುಳುಗಳನ್ನು ಕತ್ತರಿಸುವಿಯಾ! ಪ್ರಭು ಪೈಗಂಬರನ ಅನುಯಾಯಿಯಾದ ನಾನು, ಯಾವನ ನಾಳಿಗಳಲ್ಲಿ ಪವಿತ್ರ ಇಸ್ಲಾಮು ಧರ್ಮದ ರಕ್ತವು ಹರಿಯುವುದೋ, ಅಂಥವನು ನಾನು ನಿನ್ನಂಥ ವೀರನ ಔದಾರ್ಯವನ್ನು ನೋಡಿ, ನನ್ನಲ್ಲಿ ಉತ್ಪನ್ನವಾದ ಸಕೌತುಕಾಭಿಮಾನವನ್ನು ವ್ಯಕ್ತಪಡಿಸದಿರಲಾರೆನು. ಆದರೂ ನಿನ್ನಂಥ ಪರಾಕ್ರಮಿಯ ಸಂಗಡ ಮಲ್ಲಯುದ್ಧವನ್ನು ಮಾಡಬೇಕೆನ್ನುವೆನು.

ನಾಯಕ— ಆಗಲಿ; ನಿನ್ನಂಥ ಶೂರನ ಯುದ್ಧಕ್ಕಾಗಿರುವ ಆಹ್ವಾನವನ್ನು ಹರ್ಷೋತ್ಸುಕವುಳ್ಳವನಾಗಿ ಸ್ವೀಕರಿಸುವೆನು.

(ಮಲ್ಲಯುದ್ಧವು ಸಾಗುವದು. ಒಬ್ಬರಿಗೊಬ್ಬರು ಶಾಬಾಸಿಕೆಗಳನ್ನು ಕೊಡುವರು. ಸ್ವಲ್ಪ ಹೊತ್ತಿನ ತರುವಾಯ)

ಚಾಂದಖಾನ—ಕನ್ನಡ ವೀರಾ! ನಿಮ್ಮ ನಾಡಿನ ರಾಯರ ವಂಶವನ್ನು ಈ ಐವತ್ತು ವರ್ಷಗಳಿಂದ ನಮ್ಮವರು ಎಷ್ಟು ಮಾತ್ರ ಕಿತ್ತಲೆತ್ನಿಸಿದರೂ, ನಿಮ್ಮಂಥ ವೀರಾಗ್ರಣಿಗಳಿರುವವರೆಗೂ ಚಂದ್ರಗಿರಿಯಲ್ಲಿ ಇನ್ನೂ ನಿಮ್ಮ ಚಂದ್ರನು ಪ್ರಕಾಶಿಸುತ್ತಲಿರುವನು. ವೀರಾ! ನಿನ್ನ ಭೂತದಯವನ್ನೂ, ಸೌಜನ್ಯವನ್ನೂ, ಶಾಂತವೃತ್ತಿಯನ್ನೂ ನೋಡಿದರೆ, ಭಾರತದ ಭಾಸ್ಕರನ ವಂಶದವರಾದ ಶ್ರೇಷ್ಠ ಕ್ಷತ್ರಿಯನ ಆರ್ಯ ಸಂಸ್ಕೃತಿಯಿಂದ ಯುಕ್ತವಾದ ಅಂತಃಕರಣವುಳ್ಳ ನಿನ್ನಂಥ ವೀರನ ಸತ್ಸಮಾಗಮದಿಂದ ನಾನಿಂದು ಧನ್ಯನಾದೆನು. ಮಿತ್ರಾ! ಪರಮೇಶ್ವರನ ದರಬಾರದಲ್ಲಿ ಹಿಂದೂ ಮುಸಲ್ಮಾನರೆಂಬ ಭೇದವು ಇಲ್ಲವೆಂದು ನಮ್ಮ ಮಹಮ್ಮದೀಯ ಧರ್ಮವು ಸಾರುವುದು. ಮತ್ತು ಈ ಭಾರತವೆಂದರೆ ಈಶ್ವರನ ಪ್ರತ್ಯಕ್ಷ ಅವತಾರ ಕ್ಷೇತ್ರವೂ ಪುಣ್ಯಭೂಮಿಯೂ ಇದೆ. ಆದಕಾರಣ ಇದೇ ಅವನ ದರಬಾರವಲ್ಲದೇ ಮತ್ತಿನ್ನಾವದು? ಸದಾ ಈಶ್ವರಾರಾಧನೆಯಲ್ಲಿ ಮಗ್ನರಾಗಿರುವ ಭಾರತದಲ್ಲಿಯ ಹಿರಿಯರನ್ನೂ ಕಿರಿಯರನ್ನೂ ಯಾವ ಪವಿತ್ರ ಇಸ್ಲಾಮ ಧರ್ಮದ ಅನುಯಾಯಿಯು ನಾಸ್ತಿಕರೆಂದು ಹೇಳಬಹುದು. ಇಂಥ ಪುಣ್ಯ ಸ್ಥಳದಲ್ಲಿ ನಾವೂ ನೀವೂ ಒಂದಾಗಿ, ನಮ್ಮ ನಮ್ಮ ಧರ್ಮಗಳಂತೆಯೇ ವರ್ತಿಸಿ, ಪರಸ್ಪರ ಉನ್ನತಿಗಾಗಿಯೂ ಭಾರತಭೂಮಿಯ ಪ್ರಗತಿಗಾಗಿಯೂ ಹೆಣಗಾಡಿದರೇನೇ ನಾವುಗಳೆಲ್ಲರೂ ಆ ಖುದಾಯತಾಲಾನ ಪ್ರೀತಿಗೆ ಪಾತ್ರರು. ಬಾ ವೀರಾ! ಇಂದಿನಿಂದ ಹಿಂದು ಮುಸಲ್ಮಾನರ ಐಕ್ಯದ ಮೂರ್ತಿಮಂತ ಆದರ್ಶಭೂತ ವ್ಯಕ್ತಿಗಳಾಗಿ, ನಾವು ಪರಸ್ಪರ ಹಿತಚಿಂತನದಲ್ಲಿ ನಮ್ಮ ದೇಹಗಳನ್ನು ಸವಿಸಿ, ಮುಂದಿನ

ಸಂತತಿಗೆ ಉದಾಹರಣೆಯನ್ನು ಹಾಕಿಕೊಡುವಾ. ಮಿತ್ರಾ! ಈ ನಾಶಹೊಂದುವ ದೇಹಕ್ಕೆ ಚಾಂದಖಾನನೆನ್ನುವರು. ಒಳ್ಳೇದು, ಬರುವೆನು. ಪ್ರೇಮವಿರಲಿ. ನಿನ್ನ ಮಹಮ್ಮ ದೀಯ ಬಂಧುವನ್ನು ಮರೆಯಬೇಡ (ಅಪ್ಪಿಕೊಳ್ಳುವನು).

ನಾಯಕ— ಸಹೃದಯಿಯಾದ ನನ್ನ ಮಹಮ್ಮದೀಯ ಬಂಧೋ! ಈಶ್ವರನ ಸಂಕೇತಕ್ಕನುಸರಿಸಿ, ನಿನ್ನಂಥ ಮಿತ್ರನ ಲಾಭವಾದುದಕ್ಕೆ ನಾನು ಪರಮೇಶ್ವರನನ್ನು ಕೊಂಡಾಡುವೆನು. ನಡೆ. ನಾನು ಸ್ವಲ್ಪ ಅತ್ತ ಬರುವೆನು.

೪ನೇ ನೋಟ

[ಸ್ಥಳ—ಬೆಳದಿಂಗಳದ ಸಮಯದಲ್ಲಿ ಎರಡು ಗಿಡಗಳಲ್ಲಿರುವ ಬೀದಿ.]
[ಕುಮುದಿನಿಯೂ ಮೀನಾಕ್ಷಿಯೂ ಬರುವರು.]

ಮೀನಾಕ್ಷಿ— ಇದೇನೇ! ಮಾತಿಗೊಮ್ಮೆ ಮುಗುಳನಗೆಯು? ಮನಸಿನ ಮನೋಹರವಾದ ಪ್ರದೇಶದಲ್ಲಿರುವ ನಿನ್ನ ಈ ಆನಂದ ಸಾಗರವು ಇಂದೊಳ್ಳೇ ಉಕ್ಕೇರಿದಂತೆ ಕಾಣುವುದು.

ಕುಮುದಿನಿ— ಏನು ಹೇಳಲೇ! ಇದರ ಪ್ರವಾಹದ ಸೆಳವು ನನ್ನ ಸರ್ವ ಅಂಗಖಂಡದಲ್ಲಿ ವ್ಯಾಪಿಸಿ, ಕೊನೆಗೆ ಅಲ್ಲಿಯೂ ಸಾಲದೇ ಹೋಗಿ, ಇದೋ! ನೋಡು, ಈ ನನ್ನ ಕಂಗಳೇ ಅದರ ಕಂದರಗಳಾಗಿವೆ.

ಮೀನಾಕ್ಷಿ— ಅವ್ವಯ್ಯಾ! ಪ್ರಳಯಕಾಲವೇ ಒದಗುವದೇನು?

ಕುಮುದಿನಿ— ಛೀ, ಸಖೀ! ಹೀಗೆ ಅಮಂಗಲ ನುಡಿಯಬೇಡ. ಈ ಸಾಗರದ ಪವಿತ್ರ ಭರತವು (ಕಣ್ಣಿನೆಡೆಗೆ ತೋರಿಸಿ) ಇಲ್ಲಿಂದ ಹೊರಬೀಳುತ್ತಲೆ, ಈ ಪಾಪಮಯ ಜಗದ ಸಂಸರ್ಗದಿಂದ ಮಲಿನವಾಗದೆ, ಮಾಯೆಯ ರೂಪವನ್ನು ತಾಳಿ, ಪ್ರಭು ಪಾಂಡುರಂಗನ ಪಾದಗಳ ಪ್ರಕ್ಷಾಲನೆ ಮಾಡಿ, ತರುವಾಯ ತೀರ್ಥರೂಪದಿಂದ ಈ ಮನಾನಂದ ಸಾಗರವು ಗಂಗೆ

ಗೋದಾವರಿಗಳಂತೆ, ಈ ಭೂಮಿಯ ಮೇಲೆ ಪುನಃ ಹರಿಯುತ್ತ ಬಂದು ಪತಿತರನ್ನು ಪಾವನಮಾಡುವದು, ಮುಮುಕ್ಷುಗಳಿಗೆ ಮೋಕ್ಷವನ್ನು ನೀಡುವುದು, ನೀರ ನೀರೆಯರಿಗೆ ಸಂಕಲ್ಪ ತೀರ್ಥವಾಗುವುದು.

ಮೀನಾಕ್ಷಿ— ಓಹೋ! ಹಾಗೇನು? ಒಳ್ಳೇದು; ಏನೇ! ಈ ಸಾಗರವು ಇಷ್ಟು ತುಂಬಿ, ಉಕ್ಕೇರಲಿಕ್ಕೇನು ಕಾರಣ?

ಕುಮುದಿನಿ— ಇದನ್ನೇನು ಹೇಳಬೇಕೇ? ಚಂದ್ರನು ಆಕರ್ಷಿಸಿದ್ದಕ್ಕಾಗಿ ......

ಮೀನಾಕ್ಷಿ— ಅಬ್ಬಬ್ಬ! ಏನೇ! ಇಂತಹ ಶಕ್ತಿಯಿಂದ ಆಕರ್ಷಿಸುವ ನಿನ್ನ ಚಂದ್ರನು (ಆಕಾಶದೆಡೆಗೆ ತೋರಿಸಿ) ಆ ಚಂದ್ರನಿಗಿಂತಲೂ ಮಿಗಿಲಾದವನೇನು?

ಕುಮುದಿನಿ— ನನಗೆ ದೇವಪುರುಷರ ಶಕ್ತಿಯನ್ನು ಪರೀಕ್ಷಿಸುವಷ್ಟು ಯೋಗ್ಯತೆ ಎಲ್ಲಿಂದ ಬರಬೇಕು. ಇವನಂತೆ ಅವನೂ ಆ ಸೂರ್ಯನಾರಾಯಣನ ಛಾಯೆಯಲ್ಲಿ ತಾನೂ ಹೊಳೆಯುವನು. ತನ್ನ ನೆರಳಿನಲ್ಲಿದ್ದವರನ್ನೂ ಪ್ರಕಾಶಿಸುವನು. ಆದರೆ ತಾರಾಮತಿಯೆಂಬ ಮೋಹಿನಿಯು ಅಷ್ಟೇ ಪ್ರತೀಕಾರವಾದ ಪ್ರೀತಿಯ ಶಕ್ತಿಯಿಂದ ಅವನ ಸರ್ವಸ್ವವನ್ನು ತಾನೊರ್ವಳೇ ಆಕರ್ಷಿಸದಿದ್ದರೆ ಇವನಂತೆ (ಆಕಾಶದೆಡೆಗೆ ತೋರಿಸಿ) ಅವನೂ ಈ ಎಲ್ಲ ಸೃಷ್ಟಿಯನ್ನು ಪ್ರಕಾಶಗೊಳಿಸಬಹುದಾಗಿತ್ತು.

ಮೀನಾಕ್ಷಿ— ಅವ್ವಯ್ಯಾ! ಆ ತಾರೆಯಾದರೂ ಎಷ್ಟು ಸ್ವಾರ್ಥಬುದ್ಧಿಯವಳೇ! ಅವನ ಎಲ್ಲ ತೇಜವನ್ನು ತಾನೊರ್ವಳೇ ಹರಣಮಾಡಿ ನಮ್ಮನ್ನು ಅಂಧಕಾರದಲ್ಲಿಡುವಳು. ಈ ಚಂದ್ರನೂ ನಿನ್ನ ಆ ಚಂದ್ರನೂ ಇಬ್ಬರೂ ಕೂಡಿ, ಎರಡೆರಡು ವಾರಗಳನ್ನು ಹಂಚಿಕೊಂಡು ಸರ್ವಕಾಲದಲ್ಲಿಯೂ ಬೆಳದಿಂಗಳದಿಂದ ನಮ್ಮನ್ನು ಆನಂದಗೊಳಿಸುತ್ತಿದ್ದರಲ್ಲ? ಇಂಥ

ಸ್ವಾರ್ಥಪರ ಮನುಷ್ಯರು ಈ ಜಗದಲ್ಲಿರುವರೆಂದೇ, ಪಾಪ! ಅದಕ್ಕೆ ನಾನಾ ಸಂಕಟಗಳಿಗೆ ಒಳಗಾಗಬೇಕಾಗುವುದು. ಆದ್ದರಿಂದ ಸ್ವಾರ್ಥ ಜನರಿಗೆ ಸೇರೆಯುಸ್ನೆಂದೂ ನೀಡ ಕೂಡದು. ನಿನ್ನಾ ತಾರೆಯು ಎಲ್ಲಿರುವಳೇ? ಅವಳನ್ನು ತೋರಿಸೆಂದು ತೋರಿಸು. ಅವಳನ್ನು ಹೀಗೆ ತಿವಿದೂ ತಿವಿದು ಕೇಳಿ, ಅವಳ ಹುಚ್ಚು ಬಿಡಿಸುವೆನು....

ಕುಮುದಿನಿ— ಸಖೀ! ನನ್ನನ್ನು ಸ್ವಲ್ಪಾದರೂ ಮಾತನಾಡಗೊಡುವದಿಲ್ಲ ವೇನೇ? ಹೀಗೆ ಮಾಡುವದರಲ್ಲಿ ಪಾಪ! ಆ ತಾರಾ ಮತಿಯ ತಪ್ಪು ತಿಲಮಾತ್ರವಿಲ್ಲ ಕಂಡಿಯಾ? ನೀವಿನ್ನೂ ಒಂದು ವೇಳೆ (ಆಕಾಶದಲ್ಲಿರುವ) ಈ ಚಂದ್ರನಿರದಿದ್ದರೆ ನಿದಾನ ಸಪ್ತ ಋಷಿಗಳ ಶುಕ್ರ ನಕ್ಷತ್ರದ ಅಥವಾ ಇತರ ಚುಕ್ಕಿಗಳ ಪ್ರಕಾಶದಲ್ಲಿ ನಿಮ್ಮ ಆಯುಷ್ಯವನ್ನು ಸಾಗಿಸ ಬಹುದು. ಆದರೆ ಆ ಬಡ ಪ್ರಾಣಿಗೆ ಮಾತ್ರ ತನ್ನ ಚಂದ್ರ ನಿರದಿದ್ದರೆ ಇಡೀ ಜಗತ್ತೇ ಶೂನ್ಯವಾಗಿ ಕಾಣುವುದು. ಆದಕಾರಣ ಮಿನಾನೇ! ನುಮ್ಮನಿರು ಅವನು ಅವಳಿಗಾಗಿಯೇ ಇರಲೊಲ್ಲನೇಕೇ?

ಮೀನಾಕ್ಷಿ— ಅಯ್ಯ, ಇರಲೊಲ್ಲನೇಕವ್ವಾ! ನನಗೇಕವನಗೊಡವೇ? ಓರ್ವಳಿಗಾಗಿಯೇ ತನ್ನ ಎಲ್ಲ ಪ್ರಕಾಶವನ್ನು ವೆಚ್ಚ ಮಾಡುವ ನಿನ್ನ ಆ ಪಕ್ಷಪಾತಿಯಾದ ಚಂದ್ರನ ನೆರಳು ಸಹ ನನಗೆ ಬೇಡ. ನಾನೇನು ಅವನಾ ತಾರೆಯಂತೆ ಸ್ವಾರ್ಥ ಬುದ್ಧಿಯವಳಲ್ಲ. ನಿನ್ನ ಆ ಚಂದ್ರನೂ ಅವನಾ ಮೋಹಿನಿಯೂ ಅದೇ ಸೂರ್ಯನಾರಾಯಣನ ಆಶ್ರಯದಲ್ಲಿ ಸರ್ವದಾ ಸುಖಿಯಾಗಿರಲಿ! ಅವನೆಲ್ಲಿರುವನೇ? ಒಮ್ಮೆ ಅವನ ಮುಖವನ್ನಾದರೂ ನೋಡ....

ಕುಮುದಿನಿ— ನೋಡುವಿಯಂತೆ; ಆದರೆ ಅಲ್ಲಿಂದ ನೀನು ನನ್ನನ್ನು ಹುಚ್ಚಿಯೆಂದು ಕರೆಯಬಾರದು......

ಮೀನಾಕ್ಷಿ— ಅದೇಕೇ? ಅವನೇನು ಮಂತ್ರವಾದಿಯೋ? ಇನ್ನೂ ಒಂದು ವೇಳೆ ನೀನೇ ಅವನನ್ನು ಹುಚ್ಚು ಹಿಡಿಸುವ ಸಂಭವವಿದೆ. ಅಬ್ಬಾ! ಒಳ್ಳೇ ಮೋಸಗಾರ್ತಿಯು ನೀನು....

ಕುಮುದಿನಿ— ನೋಡಿದಿಯಾ! ಆ ನಾಯಕನನ್ನು ನೆನಸಿದ ಕೂಡಲೇ ನನ್ನಲ್ಲಿಂಥ ಶಕ್ತಿಯು ಬಂದಿತು. ಇನ್ನು ಪ್ರತ್ಯಕ್ಷ ಆ ವ್ಯಕ್ತಿಯ ಸಹವಾಸವಾಗುವುದೇ ತಡ, ನಾನು ನಾನೆಂಬ ಶೂರರನ್ನು ಗೆದ್ದು, ರಾಜ್ಯಕ್ರಾಂತಿಯನ್ನು ಮಾಡಿ, ಲೋಕ ಸತ್ತ್ರೀಯ ರಾಜ್ಯವನ್ನು ಕೂಡ ನಾನು ಸ್ಥಾಪಿಸಬಲ್ಲೆನೆಂಬ ಆತ್ಮವಿಶ್ವಾಸವು ನನ್ನಲ್ಲಿ ಜಾಗೃತಿಯಾಗುತ್ತಲಿದೆ. ಆಹಾ! ಎಂಥ ಪ್ರತಾಪಶಾಲಿಗಳಾದ ವೀರರು ತಾವು, ಎಚ್ಚನಾಯಕರೇ!....

ಮೀನಾಕ್ಷಿ— ಏನೇ! ನಿಲ್ಲು; ಇಂದು ನಿನ್ನಿಂದ ಈ ಹೆಸರಿನ ಉಚ್ಚಾರವು ಹೀಗೆ ಪುನಃಪುನಃ ಏಕೆ ಆಗುವುದು. (ಸ್ವಗತ) ಎಲ್ಲಿರಬಹುದು; (ಸ್ವಲ್ಪ ಯೋಚಿಸಿ) ಮೋಹಿನೀ! ನಿನಗೆ ಜ್ಞಾಪಕವಿದೆಯೇ?

ಕುಮುದಿನಿ— ನನಗೆ ಜ್ಞಾಪಕವಿಲ್ಲ. ಇರಲಿ, ಸಖೀ! ಇಲ್ಲದ ಮಾತುಗಳಿಂದ ನನಗೆ ಸುಮ್ಮನೇ ಚಿಂತೆಯನ್ನುಂಟುಮಾಡಬೇಡ. ಮೊದಲೇ ನಾನು ಬಂದಿಖಾನೆಯ ಚಿಂತೆಯಿಂದ....

ಮೀನಾಕ್ಷಿ— ಅಲ್ಲಿಯೇ; ಅಲ್ಲಿಯೇ; ನಾನು ನಿನ್ನ ಮುಖದಿಂದ ಈ ಹೆಸರನ್ನು ಎಷ್ಟೋ ಸಲ ಕೇಳಿದ್ದೆನು. (ಸ್ವಲ್ಪ ಯೋಚಿಸಿ, ಅವಳನ್ನು ಲಲ್ಲಿಯಿಂದ ಬಡೆದು) ಆಹಾ, ಬಂಗಾಲೀ! ಈಗ ನಾನು ಹೇಳಲೇ? ಅಚ್ಚಗನ್ನಡದ ಶಬ್ದಗಳಲ್ಲಿ ಹೇಳಲೇ? ಅಲಲ ಚದುರೀ! ಇಷ್ಟೆಲ್ಲ ನಿನ್ನ ಖಗೋಲಶಾಸ್ತ್ರವು ನಿನ್ನ ಮನಸಿನ ಚಕೋರನಿಗಾಗಿಯಿತ್ತೇನು? (ಅವಳೆಡೆಗೆ ನೋಡಿ) ಏಕೇ? ಬಹಳ ನಾಚಿಕೊಳ್ಳುವಿ; ಆಹಾ, ಕಳ್ಳೀ! ಪ್ರೇಮಪಾಶದಲ್ಲಿ ಸಿಲುಕಿರುವಿಯೇನು? ಏನು? ಆ ಕಳ್ಳನನ್ನು

ಬರವಾಡಲೇನು? ಇಲ್ಲ. “ಎಲಾ ತುಡುಗಾ ಎಚ್ಚ! ನನ್ನ ಮೋಹಿನಿಯ ಮನವನ್ನು ಕದ್ದುಕೊಂಡಿರುವಿಯಾ.” (ಪುನಃ ಅವಳೆಡೆಗೆ ನೋಡಿ) ತಪ್ಪಾಯಿತವಾ್ಮ! ಗೌರವದಿಂದ ಬರವಾಡುವೆನು. ಆಯಿತೇ? ಬನ್ನಿ; ಎಚ್ಚನಾಯಕರೇ! ನನ್ನ ಮೋಹಿನಿಯ ಮನದನ್ನರಾದ ವೀರನಾಯಕರೇ! ಒಳ್ಳೇ ಮಾತಿನಿಂದ ಬನ್ನಿ....

ಕುಮುದಿನಿ— ಇದೇನೇ ಚೇಷ್ಟೆಗೆ ಪ್ರಾರಂಭಮಾಡಿದೆಯಲ್ಲ?

ಮೀನಾಕ್ಷಿ— ಹಾಗಾದರೆ ಅವನನ್ನು–ಅಲ್ಲ–ಅವರನ್ನು ಕರೆಯಬೇಡವೇ?

ಕುಮುದಿನಿ— ಬೇಡ. ಏನು ಬೇಡ.

ಮೀನಾಕ್ಷಿ— ಅಹುದು ನೀನನ್ನುವುದು ನಿಜವು. ಮಕರಂದವಿದ್ದಲ್ಲಿ ಮಧುಕರನು ತಾನೇ ಬರುವನು. (ತೆರೆಯೊಳಗೆ “ಮೀನಾಕ್ಷೀ, ಮೀನಾಕ್ಷೀ” ಎಂದು ಋಷಿಯು ಕರೆಯುವನು.) ಮೋಹಿನೀ! ತಾತನು ಕರೆಯುವನು. ಈಗಲೇ ಬರುವೆನು. ಅಥವ ನೀನೂ ನಡೆಯಲ್ಲಿ?

ಕುಮುದಿನಿ— ಸಖೀ! ಮೊದಲು ನೀನು ಹೋಗು. ನಾನೀಗಲೇ ಬರುವೆನು. (ಮೀನಾಕ್ಷಿಯು ಹೋಗುವಳು.) (ಸ್ವಗತ) ಆಹಾ! ಎಂತಹ ಶುಭ ಪ್ರಸಂಗವದು. ಅವರು ನನ್ನಿನಿಯರಾದ ನಾಯಕರೇ ಇರಬಹುದಲ್ಲವೆ? ಸಂದೇಹವೇನು? ಅವರೇ ಪ್ರತಾಪದುರ್ಗದ ನಾಯಕರು; ಮೋಹಿನಿಯ ಮನದನ್ನರು. ನೀರಾ! ತಿರುಗಿ ಬೇಗ ಬರುವ ವಚನವನ್ನು ಕೊಟ್ಟು ತೆರಳಿದಿರಿ. ಚೆನ್ನಾಗಿ ಜ್ಞಾಪಕದಲ್ಲಿರಲಿ; “ಪ್ರಿಯೇ! ಮರೆತೆನು” ಎಂದು ಹೇಳಿದರೆ ನಾನು ಕೇಳಲಿಕ್ಕಿಲ್ಲ ಕಂಡಿರಾ! ಅಯ್ಯೋ! ನಾನೆಷ್ಟು ಮೂರ್ಖಳು; ಅದೇ ಸಮಯದಲ್ಲಿ ನಾನಾರೆಂಬುದನ್ನು ಹೇಳಿಬಿಡಲಿಲ್ಲವಲ್ಲ! ಏನೇ ಆಗಲಿ; ಪ್ರಿಯಾ! ನನ್ನಿಂದ ತಪ್ಪಾಯಿತು. ನೀವು ವೀರರು; ಕೊಟ್ಟ ವಚನವನ್ನು ಪಾಲಿಸುವವರು. ಅಲ್ಲದೆ ಶ್ರೀ

ಸೂರ್ಯನಾರಾಯಣನೇ ಸಾಕ್ಷಿಯಾಗಿದ್ದನಲ್ಲವೇ? ಅಂ; ಏನು? ನೀಲವರ್ಣದಿಂದ ರಮಣೀಯವಾಗಿ ತೋರುವ ಅರಮನೆಯಲ್ಲಿ ತನ್ನ ವಲ್ಲಭನನ್ನು ಆಲಿಂಗಿಸಲು ಆತುರನಾಗಿದ್ದ ಪಶ್ಚಿಮ ದಿಕ್ ಸುಂದರಿಯೆಡೆಗೆ ಬಲು ಉತ್ಸುಕನಾಗಿ ಹೋಗುತ್ತಿದ್ದ ಖಗರಾಜನು ನಮ್ಮೆಡೆಗೆ ಲಕ್ಷ್ಯವೇ ಕೊಡಲಿಲ್ಲವೇನು? ಛೀ! ದೇವಪುರುಷರ ವಿಷಯವಾಗಿ ನಾನಿಂಥ ಕಲ್ಪನೆಯನ್ನು ಮಾಡಬೇಕೇ? ಅವನ ಅನುಗ್ರಹವಾಯಿತೆಂದೇ ನಾನಿಂದು ಪ್ರಿಯಕರನನ್ನು ಕಂಡೆನು. ಪುನಃ ಒಂದು ವಾರದೊಳಗಾಗಿಯೇ ಕಾಣುವೆನು. ಋಷಿತಾತನ ಸಮ್ಮತಿಯಿಂದ ಪ್ರತಾಪದುರ್ಗದ ನಾಯಕರ ಸಮ್ರಾಜ್ಞಿಯಾಗುವೆನು. ಮಾತ್ರ ಎಲೈ ಪದ್ಮನಾಭನೇ? ಇಂದಿನಂತಹ ಶುಭ ಸಮಯದಲ್ಲಿಯೇ ಯಾವ ಅನಿಷ್ಟವನ್ನು ಬರಗೊಡದೆ ನಮ್ಮಿರ್ವರಿಗೆ ಅಕ್ಷಯವಾದ ಸಹವಾಸ ಸುಖವನ್ನು ನೀಡು. (ಹೋಗುವಳು.)

೫ನೇ ನೋಟ

[ಪಂಪಾರಣ್ಯದಲ್ಲಿಯ ಅಧಿಕಾರಿಗಳ ಬಿಡಾರವು.]

[ಜಗರಾಯನೂ, ತಿಮ್ಮನಾಯಕನೂ, ಮಕರನಾಯಕನೂ ಬರುವರು.]

ಜಗರಾಯ— ರಾಜಾಜ್ಞೆಯ ಮೇರೆಗೆ ರಾಜತಂತ್ರಗಳನ್ನು ಪರೀಕ್ಷಿಸುವುದಕ್ಕಾಗಿ ಪ್ರವಾಸವನ್ನು ಕೈಕೊಂಡು ಇನ್ನೂ ಒಂದು ವಾರವೂ ಕಳೆದಿಲ್ಲ. ಆದರೆ ಇಷ್ಟರಲ್ಲಿಯೇ ಚಂದ್ರಗಿರಿಯಿಂದ ವೇಂಕಟಾಧಿಪತಿಗಳು ಮೃತ್ಯುಶಯ್ಯೆಯ ಮೇಲಿರುವರು. ನಾಳಿನ ದಿವಸವೇ ರಾಜಪುತ್ರರ ಪಟ್ಟಾಭಿಷೇಕದ ಸಮಾರಂಭವನ್ನು ನೆರವೇರಿಸಲು, ನಮ್ಮೆಲ್ಲರನ್ನು ಬರಹೇಳಲು ದೂತನನ್ನು ಕಳುಹಿಸಿರುವರು.

ತಿಮ್ಮನಾಯಕ—ಇದೆಂತಹ ಆಶ್ಚರ್ಯದ ಸುದ್ದಿಯು! ದೊರೆಗಳು ನಮ್ಮ ಕೈಬಿಟ್ಟುಹೋಗುವರೇ? ಅಯ್ಯೋ! ರಾಜ್ಯದ ಮೇಲೆ ಎಂಥ ಅನಿಷ್ಟವೊದಗುವುದಲ್ಲ!

ಜಗರಾಯ— ನಾಯಕರೇ! ತಾವು ಬರೀ ರಾಜನಿಷ್ಠೆಯ ಪ್ರೇಮದಿಂದ ದುಃಖಿಸುವಿರಿ. ಆದರೆ ನನ್ನ ದುಃಖಕ್ಕಂತೂ ಎಣೆಯಿಲ್ಲ. ಈ ಸುದ್ದಿಯನ್ನು ಕೇಳಿದಾಗಿನಿಂದ ನನ್ನ ಜೀವದಲ್ಲಿ ಜೀವವಿಲ್ಲ. ನನ್ನ ಸುಕುಮಾರಿಯಾದ ಬಾಯಮ್ಮ ಚಿಕ್ಕ ರಾಣಿಯ ದೀನ ಮುಖವೂ ಆವಳ ಹಸುರ ಹಣೆಯೂ ಭೀಕರ ಸ್ವರೂಪವೂ ನನ್ನ ಕರುಳುಗಳನ್ನು ಕತ್ತರಿಸುತ್ತಲಿವೆ.

ಮಕರನಾಯಕ—ಮಂತ್ರಿಗಳಿರಾ! ಶೋಕಿಸುತ್ತಾ ಕುಳಿತರೇನು ಫಲ! ರಾಜಾಜ್ಞೆಯ ಮೇರೆಗೆ ಬೇಗ ಹೊರಡುವಾ. ಆದರೆ ನಾನೀಗ ಒಂದು ಸೂಚನೆಯನ್ನು ಮಾಡುವೆನು.

ಜಗರಾಯ—ಅದಾವ ಸಂಗತಿಯು?

ಮಕರನಾಯಕ—ತಮ್ಮ ಮಗಳಾದ ಬಾಯಮ್ಮ ರಾಣಿಯವರನ್ನು ಅರಸರು ಅತಿಶಯವಾಗಿ ಪ್ರೀತಿಸುವುದೇನೋ ನಿಜವು. ಅದಕ್ಕಾಗಿಯೇ ಅವರು ಚಿಕ್ಕರಾಯನ ಜನ್ಮರಹಸ್ಯವನ್ನು ಅರಿತಿದ್ದರೂ ಕೇವಲ ರಾಣಿಯವರಿಗಾಗಿಯೇ ವ್ಯಕ್ತಗೊಳಿಸದೆ ಮನದಲ್ಲಿಯೇ ಮರುಗುತ್ತಲಿದ್ದರು. ಅಂತ್ಯಕಾಲದಲ್ಲಿ ಮಾತ್ರ ನಿರುಪಾಯವೆಂದು ತಮ್ಮ ಅಣ್ಣನ ಮಗನಾದ ೩ನೇ ರಂಗರಾಯನನ್ನು ಯುವನನ್ನು ಎಲ್ಲರೂ ಚಿಕ್ಕರಾಯರೆಂದೆನ್ನುವರೋ—ಪಟ್ಟಕ್ಕೇರಿಸುವ ನಿರ್ಧಾರವನ್ನು ಮಾಡಿರುವರಂತೆ. ನನಗೂ ಈ ಸಂಗತಿಯು ಗೊತ್ತಿದ್ದಿಲ್ಲ. ಇಂದೇ ಬೆಳಿಗ್ಗೆ ತಿಳಿಯಿತು.

ತಿಮ್ಮನಾಯಕ—ಇದೇನು? ನಾನು ಈ ಸುದ್ದಿಯನ್ನು ಹೊಸದಾಗಿಯೇ ಕೇಳುವೆನು. ಚಿಕ್ಕ ದೊರೆಯವರ ಜನ್ಮ ರಹಸ್ಯವಾದರೂ ಏನು?

ಮಕರನಾಯಕ—ಏನು? ತಿಮ್ಮನಾಯಕರೇ! ನಿಮಗೂ ಗೊತ್ತಿಲ್ಲವೇ? ಹಾಗಾದರೆ ಕೇಳಿ. ಚಿಕ್ಕರಾಣಿಯವರಿಗೆ ಮಕ್ಕಳಾಗದಂತೆ ತೋರಲು ಅವರು ನಿರುಪಾಯವಾಗಿ, ಓರ್ವಳ ಶಿಶುವನ್ನು ಗುಪ್ತರೀತಿಯಿಂದ ತರಿಸಿಕೊಂಡು ಅದನ್ನು ಲಾಲಿಸಿ, ಪಾಲಿಸಿ ಜೋಕೆಗೈದರು. ಆದರೆ ಅವರು ರಾಜಪಿಂಡದವರಲ್ಲವೆಂದು ೨ನೇ ರಂಗರಾಯನನ್ನು ದೊರೆಯವರು ಪಟ್ಟಕಟ್ಟಬೇಕೆನ್ನುವರು. ೨ನೇ ರಂಗರಾಯನ ಮಿತ್ರನಾದ ಎಚ್ಚನಾಯಕನು ನಮ್ಮ ಪ್ರತಿಸ್ಪರ್ಧಿಯಲ್ಲವೇ? ಇನ್ನು ಸಹಜವಾಗಿ ನಮ್ಮ ವೈರಿಯು ಪ್ರಬಲನಾಗುವನು. ನಮ್ಮ ಮೂವರ ಅಸ್ತಿತ್ವವೇ ಅಳಿಯುವುದು. ಇದು ಖಂಡಿತವು. ಆದರೆ ಮಂತ್ರಿಗಳೇ! ತಮ್ಮ ಪ್ರತಿಜ್ಞೆಯು..

ಜಗರಾಯ—(ತ್ವೇಷದಿಂದ) ಈ ಜಗರಾಯನು ತನ್ನ ಪ್ರತಿಜ್ಞೆಯಿಂದ ಎಂದಿಗೂ ಹಿಂಜರಿಯಲಿಕ್ಕಿಲ್ಲ. ಜಗತ್ತೆಲ್ಲ ಜಲಸಮಾಧಿಯಾದರೂ ಸೂರ್ಯ ಚಂದ್ರರು ತಮ್ಮ ನಿಯಮಿತ ಕ್ರಮಗಳನ್ನು ಒಂದುವೇಳೆ ತಪ್ಪಿದರೂ ಖಂಡಿತವಾದ ಬ್ರಹ್ಮಲಿಖಿತವು ಒಂದುವೇಳೆ ಸುಳ್ಳಾದರೂ ನಾನು ನನ್ನ ಮೊಮ್ಮಗನನ್ನು ಪಟ್ಟವನ್ನೇರಿಸದೇ ಎಂದೂ ಬಿಡೆನು. ನಾನಿನ್ನು ಕೈಕೊಂಡ ಕಾರ್ಯವನ್ನು ತಡೆಮಾಡಲು ಈಗ ಮೃತಹೊಂದುವ ದೊರೆಯವರ ಭೂತವೇ ಬರಲಿ; ಅಥವ ಪ್ರತ್ಯಕ್ಷ ಯಮನೇ ಬರಲಿ; ನನಗಾರ ಭಯವಿಲ್ಲ. ಹೀಗಿರಲು ಆ ಎಚ್ಚನ ಪಾಡೇನು? ಚಿಕ್ಕರಾಯನು ಪಟ್ಟವನ್ನೇರುತ್ತಲೇ ಈ ಜಗರಾಯನು ಸರ್ವಸ್ವಿಯವಾಗಿ ರಾಜ್ಯದ ಸೂತ್ರ ಚಾಲಕನಾಗುವನು. ಇದನ್ನು ನೀವು ಸೆರಗಿಗೆ ಗಂಟುಹಾಕಿಕೊಳ್ಳಿ.

ತಿಮ್ಮನಾಯಕ—ಹಾಗಾದರೆ ಎಚ್ಚನು ಇಲ್ಲಿಂದ ಪಲಾಯನಮಾಡುವನು.

ಮಕರನಾಯಕ—ಇಷ್ಟೇ ಅಲ್ಲ. ವಿಜಾಪುರ ಬಾದಷಹನ ಸಹಾಯದಿಂದ ಅವನ ಸ್ವಾಧೀನದಲ್ಲಿರುವ ಪ್ರತಾಪದುರ್ಗವನ್ನು

ಈ ಮಕರನಿಗೆ ಪಾರಿತೋಷಿಕವೆಂದು ಮಂತ್ರಿ ಪ್ರಭುಗಳು ಚಿಕ್ಕ ದೊರೆಯವರಿಂದ ಕೊಡಿಸಬೇಕು.

ಜಗರಾಯ—ಅವಶ್ಯವಾಗಿ; ಆದರೆ ಚಿಕ್ಕರಾಯರ ಪಟ್ಟಾಭಿಷೇಕವಾದ ಕೂಡಲೇ ೨ನೇ ರಂಗರಾಯನನ್ನೂ ಅವನ ಕುಟುಂಬ ವನ್ನೂ ಕಾರಾಗೃಹದಲ್ಲಿ ಕೊರಗಿಸಿ, ಕೊರಗಿಸಿ ಕೊಂದು ನನ್ನ ಮೊಮ್ಮಗನ ಆತಂಕವನ್ನು ಕಳೆಯಬೇಕು. ಯಾಕೇ? ಮಾಡಿರಿನ್ನು ಪ್ರತಿಜ್ಞೆಯನ್ನು. "ಜಯ ಅಂಬಿಕೇ!"

ತಿಮ್ಮ ನಾಯಕ—ಜಯ ಭುವನೇಶ್ವರೀ !!

ಮಕರನಾಯಕ—ಜಯ ಪಂಪಾಪತೀ !!!

ತಿಮ್ಮ ನಾಯಕ—(ತೆರೆಯಲ್ಲಿ ನೋಡಿ) ಓಹೋ ಅತ್ತ ನೋಡಿ! ಎಚ್ಚನು ತನ್ನ ಜನರೊಡನೆ ಇತ್ತ ಹೊರಟಿರುವನು. ಅವನೆಡೆಗೂ ರಾಜದೂತನನ್ನು ಅಟ್ಟಿರಬಹುದು.

ಎಚ್ಚ ನಾಯಕ—(ಪ್ರವೇಶಿಸಿ) ನಮಸ್ಕಾರ ಮಹನೀಯರೇ! ದೊರೆಗಳ ಕಾಯಿಲೆಯು ಹೆಚ್ಚಾಗಿದೆಯಂತೆ. ನಾಳೆ ರಾಜಸಭೆಯನ್ನು ನೆರೆಯಿಸಿ ಚಿಕ್ಕರಾಯನನ್ನು ರಾಜ್ಯಾಭಿಷೇಕ ಮಾಡ ಬೇಕೆಂದು ಸಂಕಲ್ಪವಾಗಿದೆ. ಇಂತಹ ಸಮಯದಲ್ಲಿ ನೀವಿ ಲ್ಲೇಕೆ ಸೇರಿರುವಿರಿ?

ಜಗರಾಜು— ನಾಯಕರೇ! ರಾಜತಂತ್ರಗಳನ್ನು ಪರೀಕ್ಷಿಸುವುದಕ್ಕಾಗಿ ನಾವು ಪ್ರವಾಸವನ್ನು ಕೈಕೊಂಡೆವು. ನಾವು ಹೊರಡು ವಾಗ್ಗೇನು ಅಂತಹ ಯಾವ ಬಗೆಯ ಚಿಂತೆಗೂ ಆಸ್ಪದ ವಿದ್ದಿಲ್ಲ. ನಮಗೂ ಇಂದೇ ತಿಳಿಯಿತು. ಆದರೆ ನಾಯ ಕರೇ! ತಮ್ಮ ದೃಷ್ಟಿಯಿಂದ ಯಾವ ಚಿಕ್ಕರಾಯರನ್ನು ಪಟ್ಟಕ್ಕೇರಿಸುವರೆಂಬುದನ್ನು ಹೇಳಬಲ್ಲಿರೋ?

ನಾಯಕ—ತಮ್ಮ ಮೊಮ್ಮಗನ ರಹಸ್ಯವನ್ನಂತೂ ಅರಸರು ಅರಿತಿರು ವರು. ಆದಕಾರಣ ಬಹುಶಃ ಸರ್ವರಿಗೂ ನ್ಯಾಯಸಮ್ಮತ ರಾದ ೨ನೇ ರಂಗರಾಯರೇ ಇರಬಹುದು.

ಜಗರಾಯ—ನಿಮ್ಮ ಅಭಿಪ್ರಾಯವೇನಿದೇ ?

ನಾಯಕ—ವಿಜಯನಗರ ಸಿಂಹಾಸನದ ಪೂರ್ವಪೀಠಿಕೆಯನ್ನು ಚೆನ್ನಾಗಿ ಪರೀಕ್ಷಿಸಿದರೆ ಇದುವರೆಗೂ ರಾಜವಂಶದವರೇ ಅದನ್ನಲಂಕರಿಸಿರುವರು. ಆದಕಾರಣ ಬಾಯಮ್ಮ ರಾಣಿಯವರ ಸಾಕಿದ ರಾಜಕುಮಾರನಿಗಿಂತಲೂ ರಂಗರಾಯರೇ ಆ ಸೊತ್ತಿಗೆಗೆ ಹೆಚ್ಚು ಬಾಧ್ಯತೆಯುಳ್ಳವಲ್ಲವೇ ?

ಜಗರಾಯ—ದೊರೆಗಳೂ ಪ್ರಧಾನಮಂಡಲಿಯವರೂ ನನ್ನ ಮೊಮ್ಮಗ ನನ್ನೇ ಗದ್ದಿಗೆಯಮೇಲೆ ಕುಳ್ಳಿರಿಸಿದರೆ ನಿಮ್ಮದೇನಾದರೂ ಆತಂಕವುಂಟೋ ?

ನಾಯಕ—ನೈಯಕ್ತಿಕ ಅಭಿಪ್ರಾಯವನ್ನು ಕೇಳಿದರೆ ನಾನು ಸರ್ವಥಾ ಒಪ್ಪಲಾರೆನು. ನಮ್ಮ ಪ್ರಭುಗಳೂ ಹೀಗೆ ಮಾಡಲಿಕ್ಕಿಲ್ಲೆಂದು ನನಗೆ ತುಂಬಾ ನಂಬಿಗೆಯಿದೆ.

ಜಗರಾಯ—ತಿಳಿಯಿರಿ. ಅವರು ಹಾಗೆಯೇ ಮಾಡಿದರೆ......

ಎಚ್ಚನಾಯಕ—ನಾನು ರಾಜಸಭೆಯಲ್ಲಿ ಗಟ್ಟಿಯಾಗಿ ವಿರೋಧಿಸುವೆನು. ಹೀಗೆ ಮಾಡುವುದರಲ್ಲಿ ನಾನು ಅರಸರ ಕ್ರೋಧಕ್ಕೆ ಪಾತ್ರನಾಗಿ ಅವರು ನನಗೆ ದೇಹದಂಡನೆಯ ಶಿಕ್ಷೆಯನ್ನು ಕೊಟ್ಟರೂ ಕ್ಷಾತ್ರಧರ್ಮಕ್ಕನುಸರಿಸಿ, ಕಠೋರ ರಾಜನೀತಿಗಾಗಿ ನಾನು ನನ್ನ ಶಿರವನ್ನು ಪ್ರಭುಗಳ ಪಾದಗಳಲ್ಲಿ ಅರ್ಪಿಸುವೆನು.

ಜಗರಾಯ—ನಾಯಕಾ! ನೀನೆಷ್ಟು ಯತ್ನಿಸಿದರೂ ನಾನೂ ನನ್ನ ಸರದಾರರೂ ನನ್ನ ಮೊಮ್ಮಗನನ್ನೇ ಪೀಠಕ್ಕೇರಿಸುವೆವು. ಸುಮ್ಮನೇ ವಿರೋಧಿಸಿ ಇಲ್ಲದ ಆತಂಕವನ್ನುಂಟುಮಾಡಬೇಡ.

ನಾಯಕ—ನಿಮ್ಮಂತೆಯೇ ನನಗೆ ಬೇಕಾದ ಪ್ರಯತ್ನವನ್ನು ನಾನೂ ಮಾಡಲಾರೆನೇನು ?

ಜಗರಾಯ—ಸುಮ್ಮನೇ ವಾದ ವಿವಾದವನ್ನು ಬೆಳೆಸಿ ಮಿತ್ರತ್ವವನ್ನು ಕಳೆದುಕೊಳ್ಳಬೇಡ.

ನಾಯಕ—ಅವಿವೇಕವನ್ನು ಬೋಧಿಸುವ ಮಿತ್ರನಿಗೆ ಶರಣುಹೋಗುವಾತನು ಪುರುಷನಲ್ಲ.

ಜಗರಾಯ—ನೋಡು. ವ್ಯರ್ಥವಾದ ಛಲವನ್ನು ಹಿಡಿಯಬೇಡ. ಇದು ಮೀರಿ ನೀನು ನಿನ್ನ ಹಟವನ್ನು ಸಾಧಿಸಿದರೆ ಈ ಜಗರಾಯನ ಮುನಿಸಿಗೆ ಬಲಿಯಾಗಿ ವ್ಯರ್ಥ ನಿನ್ನ ಆಯುಷ್ಯದಲ್ಲಿ ಮಣ್ಣು ಕಲಿಸಿಕೊಳ್ಳುವಿ. ನೋಡು, ವಿಚಾರಮಾಡು......

ಬಚ್ಚನಾಯಕ—ಹಾಗಾದರೆ ಮುಯ್ಯಕ್ಕೆ ಮುಯ್ಯವನ್ನು ತೀರಿಸುವುದೂ ನನ್ನ ಪವಿತ್ರ ಕರ್ತವ್ಯವು. 'ಶಠಂ ಪ್ರತಿ ಶಾಠ್ಯಂ' ಇದು ನಮ್ಮ ಕ್ಷತ್ರಿಯರ ಮಂತ್ರವು. ಆದಕಾರಣ ಇನ್ನು ಈ ಬಚ್ಚನಿಂದಲೂ ನಿಮಗೆ ಕಠೋರ ವಾಕ್ ಪ್ರಹಾರವೂ ನಿರ್ದಯ ಶಸ್ತ್ರ ಪ್ರಹಾರವೂ. ಹೀಗೆ ಮಾಡುವುದರಲ್ಲಿ ನಾನು ಬರೀ ವೈಯಕ್ತಿಕ ಲಾಭವನ್ನೇ ನೋಡುವುದಿಲ್ಲ. ಸಮಾಜ ಧಾರಣೆಗಾಗಿಯೂ ದುಷ್ಟರ ಪ್ರತಿಕಾರಕ್ಕಾಗಿಯೂ ಪ್ರಸಂಗ ವಿಶೇಷದಲ್ಲಿ ನಿಮ್ಮಂಥವರ ನಿಃಪಾತವನ್ನು ಮಾಡಬೇಕಾದರೂ ನಾನು ಹಿಂಜರಿಯುವುದಿಲ್ಲ. ಎಲಾ! ಯಾವ ಕನ್ನಡಿಗರ ಅನ್ನವನ್ನುಂಡು ನೀನು ಬಾಳುವಿಯೋ ಅವರ ಪವಿತ್ರ ಸಿಂಹಾಸನಕ್ಕೆ ಕಲಂಕವನ್ನು ಹಚ್ಚಬೇಕೆನ್ನುವಿಯಾ? ಕೃತಘ್ನಾ! ನೀತಿಭ್ರಷ್ಟಾ! ಇನ್ನು ನಿನ್ನ ಮಾರ್ಗವು ಬೇರೆ; ನನ್ನ ಮಾರ್ಗವು ಬೇರೆ. ನೋಡುವಾ ಯಾರು ಯಾರನ್ನು ಗೆಲ್ಲುವರು....(ಹೋಗುವನು. ತೆರೆ ಬೀಳುವುದು.)

ಮೊದಲನೇ ಅಂಕ ಸಮಾಪ್ತ.

೨ನೇ ಅಂಕ

೧ನೇ ನೋಟ

[ವೇಂಕಟದೊರೆಗಳವರು ನರಳುತ್ತ ಮಂಚದಮೇಲೆ ಮಲಗಿರುವರು; ಹತ್ತಿರ ಚಿಕ್ಕ ರಾಯರೂ, ರಂಗರಸರೂ ನಿಂತಿರುವರು. ಒಂದೆಡೆಯಲ್ಲಿ ಜಗರಾಯನೂ ಅವನ ಪಕ್ಷದವರೂ, ಮತ್ತೊಂದೆಡೆಯಲ್ಲಿ ಎಚ್ಚನಾಯಕನೂ ಅವನ ಪಕ್ಷದವರೂ ಇರುವರು.]

ವೇಂಕಟದೊರೆ—ಸುಮಂತರಾಯರೇ! ಇತರ ಪ್ರಧಾನ ಪ್ರಭೃತಿಗಳಿರಾ! ನಮ್ಮ ಸಿಂಹಾಸನಕ್ಕಾಗಿಯೂ ನಮಗಾಗಿಯೂ ನಿಮ್ಮಲ್ಲಿ ವ್ಯಕ್ತವಾಗುವ ಭಾವಭಕ್ತಿಗಳಿಗಾಗಿ ತುಂಬಾ ಕೃತಜ್ಞತೆಯಿಂದ, ಅಭಿನಂದಿಸುತ್ತೇವೆ. ನಮ್ಮ ನಾಡಿನ ಮುದ್ದು ಮಕ್ಕಳು, ಹರಿಭಕ್ತಿಯುಳ್ಳವರಾಗಿಯೂ, ರಾಜನಿಷ್ಠೆಯುಳ್ಳವರಾಗಿಯೂ, ಶೀಲವಂತರಾಗಿಯೂ, ಉದ್ಯೋಗದಕ್ಷರಾಗಿಯೂ, ನಮ್ಮ ಚಲುವ ಸಿರಿಗನ್ನಡ ಭೂಮಿಯಲ್ಲಿ ಸುಖಸಂಪತ್ತಿಯನ್ನು ವೃದ್ಧಿಗೊಳಿಸುವುದನ್ನು ಕಂಡು ನಮ್ಮ ಕಂಗಳಲ್ಲಿ, ಆನಂದಾಶ್ರುಗಳು ತುಂಬಿ ತುಳುಕುವುವು. ಕರ್ತವ್ಯನಿಷ್ಠೆಯಿಂದಲೂ, ಶುದ್ಧಾಂತಃಕರಣದಿಂದಲೂ,—ಎಷ್ಟೋ ಸಲ ದಾಳಿಗಾರರ ನಿಪಾತಕ್ಕಾಗಿ ರಣಹೋಮದಲ್ಲಿ ನಿಮ್ಮ ನಿಮ್ಮ ಸಹೋದರರ ಆಹುತಿಗಳನ್ನರ್ಪಿಸಿ ನಮ್ಮ ತಾಯ್ನಾಡಿನ ಯಶೋದುಂದುಭಿಯನ್ನು ಹರಡಿಸಿ ನಿಮಿತ್ತ ಮಾತ್ರಕ್ಕೆ ನಮ್ಮನ್ನು ಮುಂದೆ ಮಾಡಿ, ಸಮ್ರಾಜ್ಯ ಮಂದಿರವನ್ನು ಕೀರ್ತಿಯ ನಿಖರದಿಂದ ಅಲಂಕರಿಸಿದಿರಿ. ನಾವು ಮಾತ್ರ ಈ ಕಾಯಿಲೆಯೊಳಗಿಂದ ಬದುಕುವಂತೆ ತೋರುವದಿಲ್ಲ. ಆದುದರಿಂದ ನಿಮ್ಮೆಲ್ಲರ ಸಮ್ಮತಿಪಡೆದು ಈ ರಾಜ್ಯಭಾರವನ್ನು ರಂಗರಾಯನಿಗೆ ಒಪ್ಪಿಸಬೇಕೆಂದು ಹವಣಿಕೆಯುಂಟು. ರಾಜ್ಯತಂತ್ರಗಳನ್ನು ಚೆನ್ನಾಗಿ ನಿರ್ವಹಿಸಲು ಅವನಿನ್ನು ಮುಂದೆ

ಹೊಣೆಗಾರನಾದಾಗ ದೇವತೆಗಳಿಗೆ ಸಮಾನರಾದ ನೀವು ಪ್ರಜಗಳು ಅವನೊಡನೆ ಸಹಕಾರಿಗಳಾಗಿಯೂ, ಸಹಾನುಭೂತಿಪರರಾಗಿಯೂ, ಸಪ್ರೇಮಪೂರ್ವಕವಾಗಿಯೂ, ರಾಜನಿಷ್ಠೆಯಿಂದ ವರ್ತಿಸುವಿರೆಂದು ತುಂಬಾ ನಂಬಿಕೆಯುಂಟು.

ನಾಯಕ— (ಜಗರಾಯನು ಸುಮ್ಮನಿದ್ದುದನ್ನು ನೋಡಿ ಅರಸನನ್ನು ವಿನಯಪೂರ್ವಕ ವಂದಿಸಿ) 'ನಾವಿಷ್ಣುಃಪೃಥಿವೀಪತಿಃ' ಎಂಬ ಸ್ಮೃತಿವಾಕ್ಯದಂತೆ ಪ್ರಭೋ! ನಿಮ್ಮ ದರ್ಶನವೇ ನಮಗೆ ದೇವದರ್ಶನವು. ನಿಮ್ಮ ವಚನಗಳೇ ನಮಗೆ ವೇದವಾಕ್ಯಗಳು. ನಿಮ್ಮ ಸೇವೆಯೇ ನಮಗೆ ಶ್ರೇಯೋಮಾರ್ಗವು. ನಿಮ್ಮ ಸಾತ್ವಿಕ ಆಳ್ವಿಕೆಯು ಪ್ರಜೆಗಳ ಬಾಳ್ವಿಕೆಯಲ್ಲಿ ಆವ ತರದ ಆತಂಕವನ್ನೂ ಮಾಡಗೊಟ್ಟಿಲ್ಲ. ನಿಮ್ಮ ಪುಣ್ಯವಾನ್ ಪೂರ್ವಜರ ಹಾಗೂ ನಿಮ್ಮ ಚರಣಗಳಿಂದ ಪುನೀತವಾದ ಈ ನಾಡಿನಲ್ಲಿ ಬೆಳೆಯುವ ಕಾಳುಗಳೇ ನಮ್ಮ ಆಹಾರವು. ಮುಖ್ಯವಾನವ ಕೃಮಿ ಕೃಷಿ ಇವೆಲ್ಲವುಗಳಲ್ಲಿಯೂ ನಿಮ್ಮ ಚರಣ ಚಿತ್ರವೆ ನೆಲೆಗೊಂಡಿದೆ. ಅಲ್ಲ—ಅವುಗಳ ಆತ್ಮಸ್ಥಾನದಲ್ಲಿ ವಿರಾಜಿತವಾಗಿದೆ. ಅಖಿಲ ಭೂಮಂಡಲದಲ್ಲಿ ಇದೇ ಸಿಂಹಾಸನವು ನಮ್ಮ ಆಶ್ರಯಸ್ಥಾನವು. ಇದು ನಮ್ಮ ಕಷ್ಟಗಳ ನಿವಾರಣೆಯನ್ನು ಮಾಡುವುದು. ನಮ್ಮ ತೃಷ್ಣೆಯನ್ನು ಆಳಿಯುವದು. ಹೆಚ್ಚಿಗೇನು? ರಾಜವರೇಣ್ಯರೇ! ಈ ಸುವರ್ಣ ಸಿಂಹಾಸನವು ನಮಗೆ ಆ ಪುಂಡಲೀಕನ ಇಟ್ಟೀಕಲ್ಲು; ಇದನ್ನಲಂಕರಿಸುವವರು ನಮಗೆ ಪಂಢರೀದೇವರು.

ವೇಂಕಟದೊರೆ—ಅಹಹಾ! ನಿಮ್ಮ ಈ ಸೌಜನ್ಯವನ್ನು ನೋಡಿ ಆನಂದದಿಂದ ನಮ್ಮ ಕಂಠವು ಬಿಗಿದು ಬಂದು, ಶಬ್ದಗಳು ಹೊರಡವು. ಎಲೈ ಪ್ರಜಾರೂಪಿಯಾದ ದೇವತೆಗಳಿರಾ! ನಿಮ್ಮನ್ನಾಳುವ ಭಾಗ್ಯವು ಪರಮೇಶ್ವರನ ಅನುಗ್ರಹ

ದಿಂದಲೇ ನಮಗೆ ಪ್ರಾಪ್ತವಾಯಿತು. ನಾವುಗಳೆಲ್ಲರೂ ಹೀಗೆಯೇ ಪರಸ್ಪರ ಸಹಾಯಕರಾಗಿ ನಮ್ಮ ನಾಡನ್ನು ಪುನಃ ವೈಭವದ ಕಳಸಕ್ಕೇರಿಸುವಾ. ಯಾವುದೇ ನಾಡಿನ ಅಭಿವೃದ್ಧಿಯಾಗಬೇಕಾದರೆ ಅರಸನಿಂದ ತಿರುಕನವರೆಗೆ ಎಲ್ಲರ ರೋಮ ರೋಮಗಳಲ್ಲಿ ಅದರ ವಿಷಯವಾಗಿ ಸದಭಿಮಾನದ ಸೊಲ್ಲು ಹೊರಟರೇಯೇ ಸಾಧ್ಯವು. ಬಾ, ರಂಗಾ! ಇತ್ತಬಾ. ಇಗೋ! ನಮ್ಮ ಪೂಜ್ಯರಾದ ಪೂರ್ವಜರು ಬಹು ಪುರಾತನಕಾಲದಿಂದ ಪೂಜಿಸುತಲಿದ್ದ ಈ ಪಂಪಾಯುಧವನ್ನು ಪ್ರಜಾರೂಪಿಯಾದ ಪ್ರಭುರಾಯನ ಸಾಕ್ಷಿಯಿಂದ ಆಶೀರ್ವಾದಪೂರ್ವಕವಾಗಿ ಅರ್ಪಿಸುವೆನು.

ರಂಗರಾಯ—ಪ್ರಭೋ! ನನಗೆ ಅರಸೊತ್ತಿಗೆಯ ಆಸೆಯಿಲ್ಲ. ನಾನು ಏಕನಿಷ್ಠ ಪ್ರಜೆಯಾಗಿ ಈ ಸಿಂಹಾಸನದ ಸೇವೆಯನ್ನು ಮನೋವಾಕ್ಕಾಯಗಳಿಂದ ಮಾಡುವೆನು. ನನ್ನ ಚಿಕ್ಕ ಬಂಧುವಿಗೆ ರಾಜ್ಯತಂತ್ರಗಳನ್ನರ್ಪಿಸಿದರೆ ನನ್ನಿಂದಾವತರದ ಆತಂಕವಿಲ್ಲ.

ವೇಂಕಟದೊರೆ—ಹಿರಿಯರಾಜ್ಞೆಯನ್ನುಲ್ಲಂಘಿಸಬೇಡ. ಇಲ್ಲದ ಪ್ರಕ್ರಿಯನ್ನುಂಟುಮಾಡಬೇಡ. ನೀನು ಈಗ ನನ್ನ ಆಜ್ಞೆಯನ್ನು ಮೀರಿದರೆ ಪಾಪನಾರಹಿತನಾಗಿ ನಾನು ಮೋಕ್ಷವನ್ನು ಪಡೆಯುವುದೆಂತು? ಹಲವು ಮಾತುಗಳಿಂದೇನು? ಹೇಳುವುದರಿಂದ ಹಾಳು ಹರಟೆಗಳು ಮಾತ್ರ ಉದ್ಭವಿಸುವ ಸಂಭವವಿದೆ. ವೀರರವಂಶದವನು ನೀನು. ಈ ರೀತಿಯಾಗಿ ಉದಾಸೀನನಾಗುವುದುಚಿತವಲ್ಲ. ಇದರಿಂದ ನಿನಗಾವ ಭಯವಿಲ್ಲ. ನಿನ್ನ ಏಕನಿಷ್ಠ ಪ್ರಜೆಗಳು ಹಗಲಿರುಳು ನಿನ್ನನ್ನು ಕಾಪಾಡುವರು.

ಎಚ್ಚನಾಯಕ—ರಾಜಪುತ್ರರೇ! ಪ್ರಭು ವೇಂಕಟದೊರೆಯವರು—ಅಲ್ಲ—ದೇವರು ನಿಜಧಾಮಕ್ಕೆ ತೆರಳುವ ಸಮಯದಲ್ಲಿ ಅವರ ಅನುಗ್ರಹಕ್ಕೆ ಪಾತ್ರರಾಗುವ ಸುಭಾಗ್ಯವು ಕೇವಲ

ಪೂರ್ವ ಸಂಚಿತದಿಂದಲೇ ನಿಮಗೆ ದೊರಕಿದೆ. ರಾಜ್ಯಲಾಭದಿಂದ ಮುಂದೆ ನಾನಾ ಸಂಕಟಗಳಿಗೆ ಒಳಗಾಗುವ ಪ್ರಸಂಗವು ನಿಮಗೆ ಬಂದರೆ ನಿಮ್ಮನ್ನು ರಕ್ಷಿಸಲು ನಮ್ಮ ಜೀವಿತಗಳನ್ನು ಧಾರೆ ಎರೆಯಲು ಸಿದ್ಧರಾಗುವೆವು. ದೇವಾಧಿದೇವರೂ ಯಾವ ಪುಣ್ಯಭೂಮಿಯ ಗುಣಗಾಯನವನ್ನು ಪಾಡುವರೋ ಎಲ್ಲಿ ಪುನಃಪುನಃ ಜನ್ಮವನ್ನೆತ್ತುವರೋ ಆ ಭಾರತಭೂಮಿಯ ಒಂದು ಭಾಗವಾದ ಸಿರಿಗನ್ನಡ ಮಾತೆಯ ಭಾಗ್ಯಶಾಲಿ ಪುತ್ರರು ತಾವು. ಶ್ರೀ ಪಂಪಾಪತಿಯ ಪ್ರೇರಣೆಯಿಂದ ಯಾವ ಪುಣ್ಯಪುರುಷರು ಈ ಪ್ರಚಂಡ ಸಾಮ್ರಾಜ್ಯವನ್ನು ಸ್ಥಾಪಿಸಿರುವರೊ ಅಂತಹ ವೀರವಿಭೂತಿಗಳ ವಂಶದವರು ತಾವು. ಆದಕಾರಣ ಈ ಸಮಯದಲ್ಲಿ ಹಿಂಜರಿಯಬಾರದೆಂದು ಈ ಬಡವನು ಬೇಡುವನು—ಕೊಂಡಾಡಿ ಬೇಡಿಕೊಳ್ಳುವನು. ಇಷ್ಟೆ ಅಲ್ಲ ಭಾರತಭೂಮಿಗಾಗಿಯೂ, ಈ ಸುವರ್ಣ ಸಿಂಹಾಸನಕ್ಕಾಗಿಯೂ, ಸ್ವಬಾಂಧವರ ಸೇವೆಗಾಗಿಯೂ ಎಲ್ಲ ಆಯುಷ್ಯವನ್ನು ವೆಚ್ಚಮಾಡಲಿಚ್ಛಿಸುವ ನಾನು ಎಲ್ಲರ ಪರವಾಗಿ ನಮ್ಮ ರಾಯರ ಸೂಚನೆಗೆ ತುಂಬಾ ಬೆಂಬಲವಿದೆಯೆಂದು ಘಂಟಾಘೋಷವಾಗಿ ಸಾರುವೆನು. (ಇಷ್ಟರಲ್ಲಿ ಜಗರಾಯನೂ ಅವನ ಪಕ್ಷದವರೂ ಚಿಕ್ಕರಾಯನ ಸಹಿತ ಆವೇಶದಿಂದೆದ್ದು ಹೋಗುವರು. ಸಭೆಯಲ್ಲಿ ಗಲಭೆಯಾಗುವುದು. ದೊರೆಯವರು ಇದನ್ನು ನೋಡಿ ಉದ್ವೇಗದಿಂದ ತಾಳದೆ ಮೂರ್ಛಿತರಾಗುವುದನ್ನು ಕಂಡು ನಾಯಕನು ಅವರ ಬಳಿಗೆ ಹೋಗಿ) ದೊರೆಗಳೇ! ತಾವಿನ್ನು ಆವ ಪ್ರಕಾರದ ಚಿಂತೆಯನ್ನು ತಳ್ಳಿ. ಮನವನ್ನು ಶಾಂತಿ ಸುಖದಲ್ಲಿ ಸ್ಥಿರಗೊಳಿಸಿ. ಐಹಿಕ ವಿಚಾರಗಳ ಬಂಧನವನ್ನು ಕಡೆದುಬಿಡಿ. ಆ ಪರಮಕಾರುಣ್ಯಮೂರ್ತಿಯಲ್ಲಿ ನಿಮ್ಮ ಚಿತ್ತವನ್ನು ನಿಲ್ಲಿಸಿ. ಇನ್ನು ಈ ನಮ್ಮ ನೂತನ ರಾಯರನ್ನು ಮನ್ನಿಸದವರನ್ನು ಅಥವ ರಾಜನಿಷ್ಠೆಯನ್ನು ನಿರಾಕರಿಸಿದವರನ್ನು ಶಾಸನೆಗೈಯಲು

ನಮ್ಮ ಕರಗಳು ಬರೆಗಳೆಡೆಗೆ ತಾವೇ ಹರಿದುಹೋಗುವವು. ನಮ್ಮ ನೂತನ ದೊರೆಯುವರ ಆಜ್ಞೆಕೆಯಲ್ಲಿ ಆವ ಸ್ವಾನತೆ ಯನ್ನು ಬರಗೊಡದೆ ನಾವು ನಮ್ಮ ಜೀವಗಳ ಹಂಗು ತೊರೆದು ನಿಮ್ಮ ಕೀರ್ತಿಯನ್ನೂ ನಮ್ಮ ನಾಡಿನ ವೈಭವ ವನ್ನೂ ಬೆಳೆಸುವೆವು. ಒಳ್ಳೇದು ಸರದಾರರೇ! ಇನ್ನು ತಡಮಾಡಬೇಡಿ. ರಾಜ್ಯಾರೋಹಣೆಯ ಎಲ್ಲ ಏರ್ಪಾಟ ಗಳನ್ನು ಮಾಡಿ. ಅದುವರೆಗೆ ನಾನೂ ರಂಗರಸರೂ ರಾಯರನ್ನು ಸಮಾಧಾನಗೊಳಿಸುವೆವು.

---

೨ ನೇ ನೋಟ

[ಬೀದಿಯ ನೋಟ.]

[ಜಗರಾಯನು ಪ್ರವೇಶಿಸುವನು.]

ಜಗರಾಯ—(ಸ್ವಗತ) ಜಗತ್ತಿನಲ್ಲೆಲ್ಲ ಜಂಬಾಟವೇ ಜಂಬಾಟವು. ಸುಖದ ಸಂಸಾರವು ಸಹಜವಾಗಿ ಸಾಧ್ಯವಾಗುವಂತಿರಲಿ, ಇರ ದಿರಲಿ; ಎಲ್ಲರಂತೇ ಈ ಜಗರಾಯನು ಸುಖಕ್ಕಾಗಿ ಹಂಬ ಲಿಸುವವನೇ. (ತುಚ್ಛತನದಿಂದ ನಕ್ಕು) ಎಲಾ ಎಚ್ಚಾ! ಒಳ್ಳೇ ರಾಜನಿಷ್ಠೆಯ ಆವಿರ್ಭಾವವನ್ನು ತಂದು ಕೊನೆಗೆ ನಿನ್ನ ಕಪಟವನ್ನು ಸಾಧಿಸಿಕೊಂಡೆಯಾ! ಆದರೆ ನಾನೇನು ಕೈಗಳಲ್ಲಿ ಬಳೆಗಳನ್ನಿಟ್ಟಿಲ್ಲ, ಕಂಡೆಯಾ! ಏನು? ರಂಗನು ರಾಜನು, ಆ ಪ್ರತಾಪದುರ್ಗದ ಪುಂಡನು ಚಂದ್ರ ಗಿರಿಯ ಮಂತ್ರಿಯು; ಇದನ್ನೆಲ್ಲವನ್ನು ಈ ಜಗನು ಜೋಲುಮುಖದಿಂದ ನೋಡುತ್ತ ಜೀವಂತನಿರಬೇಕು! (ಸಿಟ್ಟಿನಿಂದ ತಲೆಯನ್ನು ತೂಗಾಡಿಸಿ) ಆಹಾ! ಎಷ್ಟು ಅಸಹ ನೀಯವಾದ ಕಲ್ಪನೆಯಿದು? ಆ ರಂಗನು ರಾಜಸಿಂಹ ದವನಂತೆ! ನನ್ನ ಮೊಮ್ಮಗನು ನೀಚ ಕುಲದವನಂತೆ. ಆದರೇನಾಯಿತೋ? ನನ್ನನ್ನು ವಿರೋಧಿಸುವಿಯಾ? ಆಹಾ!

ತಾಳಿಸು. ಮಸ್ತಕವು ಇಬ್ಭಾಗವಾಗುವುದೇನು! (ಖಿನ್ನನಾಗಿ) ಇನ್ನೇನು? ನನ್ನ ದೃಷ್ಟಿಯಲ್ಲಿ ಎಲ್ಲೆಲ್ಲಿಯೂ ಬಂಡೆಗಳಿಂದ ತುಂಬಿರುವ ಪ್ರದೇಶವು. ನನ್ನ ಆಯುಷ್ಯದ ನಾವೆಯು ಇಲ್ಲೆಲ್ಲಿಯಾದರೂ ಅಪ್ಪಳಿಸುವುದೇ ನಿಜವು. (ಸಿಟ್ಟಿನಿಂದ ತುಚ್ಛತನದಿಂದ ನಕ್ಕು) ಛೀ! ಹೇಡಿ ಜಗ್ಯಾ! ಹೆಂಗಸೇನೋ ನೀನು. ಈ ಪರಿಯಾಗಿ ಮೋರೆಗೆ ಸೆರಗಿಟ್ಟುಕೊಂಡು ಅಳುವಿಯಾ! ಜೋಡ! ನಿನ್ನಂಥ ಪುಕ್ಕರೇ ಪುಂಡರ ಪೀಡೆಗೆ ಪಾತ್ರರು. ಹಾಗಾದರೇನು? ಅಪ್ಪಳಿಸು. ನಿನಗೆ ಕಾಣುವ ಇದೇ ಬಂಡೆಯ ಮೇಲೆ ಮೊದಲು ನಿನ್ನ ಹೇಡಿತನವನ್ನು ಅಪ್ಪಳಿಸು. ಅಲ್ಲಿಂದೇನು? ಧ್ರುವನು ಬಂದುವೇಳೆ ತನ್ನ ಅಚಲವಾದ ಪದದಿಂದ ಇಳಿಯಬಹುದು. ಆದರೆ ಈ ಜಗನ ಮಂತ್ರಿಪದವನ್ನೂ ಅವನ ಮೊಮ್ಮಗನ ಅರಸೊತ್ತಿಗೆಯನ್ನೂ ಯಾವನೂ ಅಪಹರಿಸಲಾರನು. ಇನ್ನು ನಾನು ಕೈಕೊಂಡ ಕಾರ್ಯದಲ್ಲಿ ಪ್ರತಿಕೂಲವಾಗಿ ಪ್ರತ್ಯಕ್ಷ ಭೀಮನು ಬಂದರೂ ಅವನನ್ನೂ ಇದೇ ಬಂಡೆಯ ಮೇಲೆ ಅಪ್ಪಳಿಸುವೆನು. (**ಇಷ್ಟರಲ್ಲಿ ಶ್ಯಾಮಭಟ್ಟನು ಭಯಭರಿತನಾಗಿ ಬಂದು ಜಗರಾಯನ ಹಿಂದೆ ಅಡಗಲೆತ್ನಿಸುವನು.**) ಪ–ಪ–ಪ, ನೀನಾರು?

ಶ್ಯಾಮಭಟ್ಟ—(ನಡುಗುತ್ತ) ಅಂ–ಅಂ–ನಾನು ಹಾರುವನು.

ಜಗರಾಯ—ಹಾಗಾದರೆ ಒಳ್ಳೇ ಮಾತಿನಿಂದ ಹೀಗೆ ನನ್ನ ಮುಂದೆ ಬಾ.

ಶ್ಯಾಮಭಟ್ಟ—ಬ ऽ ऽ ಬರ ऽ ऽ ತಿ ऽ ऽ ನಿ. ಪ ऽ ऽ ನಗೆ ಜೀ ऽ ऽ ವ ದಾನ ನಿ ऽ ऽ ಡಿದರೆ ऽ ऽ······

ಜಗರಾಯ—ಸ್ವಲ್ಪ ತಡೆ, ಶಾಂತನಾಗು. ಧಿಟ್ಟನಾಗು, ತರುವಾಯ ನೀನೇನು ಹೇಳುವುದಿದೆಯೋ ಬೇಗ ಹೇಳು.

ಶ್ಯಾಮಭಟ್ಟ—ಏನು ಹೇಳಲಿ. ಸ್ವಾಮಿಾ! ನನ್ನಂಥ ಅಂಜುಬುರುಕನು ವ್ಯರ್ಥ ಸುಖಕ್ಕಾಗಿ ಕೈಲಾಗದೆ ಓಡಾಡುವನು. ನಿಜವಾಗಿ ಅವನು ದುಃಖದ ಕಂದರದಲ್ಲಿ ಬೀಳದಿರಲಾರನು.

ಜಗರಾಯ—ನಿನ್ನ ಸುಖವಾದರೂ ಯಾವ ಪ್ರಕಾರದದ್ದಾಗಿದೇ?

ಶ್ಯಾಮಭಟ್ಟ—ಸುಖವೆಂತಹುದೆಂದು ಕೇಳಿದರೆ ನಾನೇನು ಹೇಳಲಿ? ರಾಯಾ! ಬಿಸಿಲಿನಲ್ಲಿ ನೀರಡಿಸಿದ ದಾರಿಕಾರನಿಗೆ ಕಾಣುವ ಮೃಗಜಲದ ಸುಖವು. ವನದಲ್ಲಿರುವ ರಾಮನು ಸೀತೆಗಾಗಿ ಹವ್ಯಾಸಪಡಬೇಕಾದ ಮಾಯಾಮೃಗದ ಸುಖವು. ಹೆಂಡರು ಮಕ್ಕಳು ಎಂದು ಹೊಟ್ಟೆ ಹೊಟ್ಟೆ ಬಡಕೊಳ್ಳುವ ಶ್ಯಾಮಭಟ್ಟನ—ಅಲ್ಲ—ಹೇಡಿಯಂಭಟ್ಟನ ಸುಖವು. ಇದೇ ಸುಖವಯ್ಯಾ!

ಜಗರಾಯ— ಹಾಗಾದರೆ ನೀನೇನು ಸುಖವನ್ನು ಬಯಸುವುದಿಲ್ಲವೋ?

ಶ್ಯಾಮಭಟ್ಟ—ಅಯ್ಯಾ! ಸುಖವೆಂಬ ವಸ್ತುವನ್ನು ಬಯಸಿದರೆ ಅದು ತಾನೇ ಸಿಗುವುದಿಲ್ಲ. ಅದರಲ್ಲಿಯೂ ನನ್ನ—ನಿನ್ನ—ಅಲ್ಲ—(ನಾಲಿಗೆಯನ್ನು ಕಚ್ಚಿ) ತಪ್ಪಾಯಿತು. ನಿನ್ನ ಸ್ವಭಾವವು ನನಗೆ ಗೊತ್ತಿಲ್ಲ. ಕ್ಷಮಿಸು ಆದರೆ ನನ್ನಂಥವರು—ಛೇ! ಅಲ್ಲ, ಸಹಜ ಸ್ವಭಾವದ ಶೂರರೇ ಸುಖವನ್ನು ಸಾಧಿಸ ತಕ್ಕದ್ದು. ಇತರರು ಅದನ್ನು ಬಯಸಿದರೆ ನರಿಯು ಹುಲಿಯ ಬಣ್ಣವನ್ನು ಬಡಕೊಂಡ ಕಥೆಯು ನಿನಗೆ ಗೊತ್ತಿರ ಬಹುದು, ಅದರಂತೆ ಆಗುವುದು. ಆದರೆ ಗೃಹಸ್ಥಾ! ನಮ್ಮಂಥವರ ಅವಸ್ಥೆಯು........ಅಯ್ಯೋ! ಬರಿಯ ಸ್ಮರಣವಾದರೆ ಸ್ಮೃತಿಯು ತಾನೇ ಹಾರಿಹೋಗುವುದು. ಕಾಯವು ಕಂಪಾಯಮಾನವಾಗುವುದು.

ಜಗರಾಯ— ಗಾಬರಿಯಾಗಬೇಡ ಬ್ರಾಹ್ಮಣಾ! ನಾನಿರುವೆನು, ಹೇಳು. ಭಯಪಡಬೇಡ. ನಿನ್ನ ಸಂಕಟದ ನಿವಾರಣೆಯನ್ನು ಮಾಡುವೆನು.

ಶ್ಯಾಮಭಟ್ಟ—ಚಂದ್ರಗಿರಿಯಲ್ಲಿ ನಮ್ಮರಸರು ತೀರಿಹೋದರು. ಅವರ ಪ್ರತ್ಯಕ್ಷ ಮಗನಿರಲೂ ಅವರ ಗದ್ದಿಗೆಯ ಮೇಲೆ ಹಲವು ಸ್ವಾರ್ಥಿಗಳಾದ ದುರ್ಜನರು ತಮ್ಮ ಜೋಳಿಯಲ್ಲಿ ಬೆಲ್ಲವನ್ನು

ಹಾಕಿಕೊಳ್ಳುವುದಕ್ಕಾಗಿ ೩ ನೇ ರಂಗರಾಯನನ್ನು ಕುಳ್ಳಿಸಿರುವರಂತೆ. ಆದರೆ ಈ ಜಗತ್ತಿನ ಹಡಗವು ಬರೀ ದುರ್ಜನರಿಂದಲೇ ತುಂಬಿರುತ್ತಿದ್ದರೆ ಎಂದೋ ಅದು ಕಾಲ ಸಮುದ್ರದ ತಳದಲ್ಲಿ ಸೇರುತ್ತಿತ್ತು. ಆದಕಾರಣ ನ್ಯಾಯ ಪ್ರೇಮಿಗಳಾದ ಮಂತ್ರಿಗಳು ಚಿಕ್ಕರಾಯರಿಗೆ ಬೆಂಬಲವನ್ನೀಯಲು ತಮ್ಮ ಇತರ ಸರದಾರರಗಳೊಡನೆ ನಾಳಿನ ದಿವಸವೇ ಗುಪ್ತ ರೀತಿಯಿಂದ ಭಳ್ಳನೇ ಬಂಡವನ್ನೆಬ್ಬಿಸಿ ರಂಗರಾಯನನ್ನು ಬಂಧನದಲ್ಲಿಟ್ಟು ಚಿಕ್ಕರಾಯರನ್ನು ಪಟ್ಟಕ್ಕೇರಿಸುವರಂತೆ. ಅದಕ್ಕಾಗಿಯೇ ತಿಮ್ಮನಾಯಕನೆಂಬ ಓರ್ವ ಸರದಾರನು ನನ್ನೆಡೆಗೆ ಬಂದು ಈ ಕಾರ್ಯವನ್ನು ಧಾರ್ಮಿಕ ವಿಧಿಯಿಂದ ಸಾಗಿಸಲು ಮಂತ್ರಿಗಳ ಪರವಾಗಿ ನನಗೆ ಸೂಚಿಸಿರುವನು. ಆದರೆ ಸ್ವಾಮೀ! ನಾನೀಗ ಗುಪ್ತ ರೀತಿಯಿಂದ ಹೊರಟಿರಲು (ಸುತ್ತಲೂ ನೋಡಿ, ಅಂಜಿ) ಆ-ಆ-ಪಾಠಶಾಲೆಯ ಪ್ರೇಮಾನಂದನಿರುವನಲ್ಲ? ಅವನು ಒಳ್ಳೇ ನನ್ನನ್ನು ಬೆನ್ನಟ್ಟಿರುವನು.

ಜಗರಾಯ— ಇಷ್ಟೇ ಅಲ್ಲ! ಬಿಡು. ಆ ಬಡ ಹಾರುವನ ಭಯವೇಕಿಷ್ಟು?

ಶ್ಯಾಮಭಟ್ಟ—(ನಾಲಿಗೆ ಕಚ್ಚಿ) ಅಯ್ಯೋ! ಅವನೊಳ್ಳೇ ಬಡ ಹಾರುವನು. ಹಾಗಲ್ಲ ಸ್ವಾಮೀ! ಅವನೂ ಹಾರುವನು. ನಾನೂ ಹಾರುವನು. ಆದರೆ ನಮ್ಮಿರ್ವರಲ್ಲಿ ಬಹಳ ಭೇದವಿದೆ.

ಜಗರಾಯ— ಅದಾವುದು?

ಶ್ಯಾಮಭಟ್ಟ—ಹೊಟ್ಟೆಗಾಗಿ ಹುಟ್ಟಿದ ಹಾರುವನು ನಾನು. ಆದರೆ ಬರೀ ಹೆಸರಿಗೆ ಭಿಕ್ಷುಕನ ವೇಷವನ್ನು ತಾಳಿ ಬ್ರಹ್ಮಕಾರ್ಯವನ್ನು ಕೈಕೊಂಡಂಥ ಬ್ರಾಹ್ಮಣನು ಆತನು. ಆತನ ಮುಖದಲ್ಲಿ ಶ್ರೀಮದ್ ಭಗವದ್ಗೀತೆಯೂ, ಕೈಯಲ್ಲಿ ಖಡ್ಗವು, ಭಾಷಣದಲ್ಲಿ ಬೃಹಸ್ಪತಿಯೂ, ಕೃತಿಯಲ್ಲಿ ಪರಶುರಾಮನು. ಇಂಥವನವನು. ಅವನನ್ನೇನು ಪಂಡಿತನೆನ್ನಬೇಕೋ ಪುಂಡ

ನೆಸ್ನಬೇಕೋ ತಿಳಿಯದು. ಮಾತಿಗೊಮ್ಮೆ ನನ್ನ ಮೇಲೆ ಶಸ್ತ್ರವನ್ನೆತ್ತುವನು. ಮಹನೀಯರೇ! ಇಂದು ನಾನು ಸತ್ತವನೇ! ಏನೋ ನನ್ನ ಹಡದವ್ವಳು ನನ್ನನ್ನು ಮೇಲಿಂದ ಮೇಲೆ "ಶ್ಯಾಮಾ" ಅಗಸಿಬೊಡ್ಡೆಗಲ್ಲಾಗು, ಕಲ್ಲುಕಣಿ ಯಾಗು; ಕಬ್ಬಿಣಮಣಿಯಾಗು ಎಂದು ಹರಿಸಿದ್ದುದ ಕ್ಕಾಗಿಯೇ ಈ ಪರಿಯಾಗಿ ಪರಕೀಯರಿಂದಲೂ, ಸ್ವಕೀಯ ರಿಂದಲೂ ಇಷ್ಟು ಪೆಟ್ಟುಗಳನ್ನು ತಿಂದರೂ ಇಂದು ಪುನಃ ಮುಗಿಲನ್ನು ಕಂಡೆನು, ಶಿವ! ಶಿವ! (ತಲೆಯನ್ನು ಹಿಡಿದುಕೊಂಡು ಕೂಡ್ರುವನು.)

ಜಗರಾಯ— ಬ್ರಾಹ್ಮಣರೇ! ಹೆದರಬೇಡಿರಿ, ಚಂದ್ರಗಿರಿಯ ಪ್ರಧಾನನು ನಾನೇ! ತಿಮ್ಮನಾಯಕನನ್ನು ನಿಮ್ಮೆಡೆಗೆ ನಾನು ಕಳು ಹಿದ್ದೆನು, ಇಲ್ಲಿ ಎಲ್ಲ ಕಡೆಯಲ್ಲಿಯೂ ನಮ್ಮ ಜನರೇ ಇರುವರು, ಇಲ್ಲೇನು ನಿಮ್ಮ ಪ್ರೇಮಾನಂದನು ಬರು ವಂತಿಲ್ಲ, ಆದಕಾರಣ ನೀವು ಭಯಪಡದೆ ಚಂದ್ರಗಿರಿಗೆ ಸಾವಕಾಶವಾಗಿ ಬನ್ನಿ. ನಾನಿನ್ನು ನಾಳೆ ಬೆಳಿಗ್ಗೆ ಆಗುವ ಕ್ರಾಂತಿಯ ಸಿದ್ಧತೆಯನ್ನು ಮಾಡಬೇಕಾಗಿದೆ. ನಮ್ಮ ಇಷ್ಟಕಾರ್ಯವು ಕೈಗೂಡುವದೇ ತಡ, ನಿಮಗೆ ದೊಡ್ಡ ಜಹಗೀರಿಯನ್ನು ಕೊಡುವೆವು. ಒಳ್ಳೇದು ಬನ್ನಿ. ನಾನಿನ್ನು ಹೊರಡುವೆನು (ಹೋಗುವನು).

ಶ್ಯಾಮಭಟ್ಟ—ಛೀ! ನೀಚಾ! ಪ್ರತ್ಯಕ್ಷ ಪರಮೇಶ್ವರನಿಗೆ ಪೂಜ್ಯರಾದ ಭೃಗುಮುನಿಗಳಂಥವರು ನಮ್ಮ ಪೂರ್ವಜರು. ನಿನ್ನ ಈ ಕ್ಷುಲ್ಲಕ ದಾನವನ್ನು ಹೀಗೆ ಒಂದೇ ಒದೆಯಿಂದ ಪಾತಾಳ ಕ್ಕಟ್ಟುವೆವು. (ಆನಂದದಿಂದ) ಗುರುವೇ! ನಿಮ್ಮ ಅಪ್ಪಣೆ ಯಂತೆ ನಾನಿನ್ನು ಚಂದ್ರಗಿರಿಗೆ ಹೋಗಿ ಕಳ್ಳರಂತೆ ಕಳ್ಳನಾಗಿ ಎಲ್ಲ ಕಪಟಗಳನ್ನು ತಿಳಿದುಕೊಂಡು ಪುನಃ ನಿನ್ನ ಸೇವೆಯಲ್ಲಿ ಸಿದ್ಧನಾಗುವೆನು. ಆದರೆ ಇದರಲ್ಲೇನು ಸಂದೇಹವಿಲ್ಲ. ಗುರುವೇ ಇಂತಹ ಕಾರ್ಯಗಳನ್ನು ಮಾಡುವುದರಲ್ಲಿ

ನಿಮಗಿಂತಲೂ ಶ್ಯಾಮನೇ ಮಿಗಿಲಾದವನು. ಸದ್ಗುರುವೇ ! ಶಿಷ್ಯನ ಮೇಲೆ ದಯವಿರಲಿ (ಹೋಗುವನು).

---

೩ ನೇ ನೋಟ

[ಋಷಿಯಾಶ್ರಮದ ಮುಂದಿನ ಭಾಗದಲ್ಲಿ.]

[ಕುಮುದಿನಿಯು ಮೀನಾಕ್ಷಿಯ ಭುಜಗಳಮೇಲೆ ತಲೆಯನ್ನಿಟ್ಟು ಕುಳಿತಿರುವಳು.]

ಕುಮುದಿನಿ— ಮೀನಾಕ್ಷೀ! ಕೊಳೆತು ಕಂದಿದ ವೃಕ್ಷವು ಹಸುರಾದ ವನದಲ್ಲಿರಕೂಡದು. ಅದು ತಾನೂ ಕುಗ್ಗುವುದಲ್ಲದೆ ತನ್ನ ಬಳಿಯಲ್ಲಿರುವ ಇತರ ವೃಕ್ಷಗಳನ್ನೂ ಕುಗ್ಗಿಸುವುದು. ಅದರಂತೆ ನಾನು ದುರ್ದೈವಿಯು. ಮಾತಾಪಿತೃಗಳ ವಿಯೋಗದಿಂದ ಬಳಲುವಾಗ, ಕೇವಲ ಪೂರ್ವಜನ್ಮದ ಋಣವನ್ನು ತೀರಿಸುವುದಕ್ಕಾಗಿಯೇ ಏನೋ ಋಷಿಮುನಿಗಳು ಅನಾಥಳಾದ ನನ್ನನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಕಾಪಾಡುತ್ತಲಿರುವರು. ಆದರೆ ಈ ಪವಿತ್ರ ಆಶ್ರಮದಲ್ಲಿ ಈ ಚಾಂಡಾಲಿಯು ಪ್ರವೇಶವಾದ ದಿನದಿಂದ ಉಡುವು ಹೊಕ್ಕಹಾಗೆ ದಿನೇ ದಿನೇ ಹೊಸ ಸಂಕಟಗಳು ತಾತನನ್ನು ಕಾಡುವವಲ್ಲವೇ?

ಮೀನಾಕ್ಷಿ— ಮೋಹಿನೀ! ಹೋಗಲಿ ಬಿಡು. ನಿನ್ನ ಪೂರ್ವಜರ ಪುಣ್ಯ ದಿಂದಲೂ, ಮುನಿಗಳ ಮಹಾತಪೋಬಲದಿಂದಲೂ, ನರರಲ್ಲಿ ಮಿಗಿಲಾದ ನಾಯಕರ ಪ್ರೇಮ ಪ್ರಭಾವದಿಂದಲೂ ಚಾಂದ ಖಾನಸಂಥ ವಿಧರ್ಮಿಯನು ತನ್ನ ಬಾಂಧವರ ನೀಚ ಕೃತಿಯನ್ನು ನಿಷೇಧಿಸಿದನು. ತಾನು ಸ್ವತಃ ಸಂಕಟಕ್ಕೆ ಒಳಗಾಗಿ ಅತಿ ಘೋರತರವಾದ ಈ ಎರಡನೇ ಸಲದ ಸೆರೆಯಿಂದ ನಿನ್ನನ್ನು ಬಿಡಿಸಿದನು. ಬರೀ ಇಷ್ಟೇ ಅಲ್ಲ. ಗಂಗೆಯನ್ನು ಅಳಿದ ನಿನ್ನ ಹೆತ್ತವಳ ಹೆಸರನ್ನು ಕಾಯ್ದನು. ಸಡಿಲಾಗುತ್ತಿರುವ ನಮ್ಮ ರಾಯರ ಸಿಂಹಾಸನವನ್ನು

ಪುನಃ ದೃಢವಾಗಿ ನಿಲ್ಲಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಅದರ ಅಡಿಗಲ್ಲುಗಳಾದ ನರವೀರರ ಜೊತೆಯಲ್ಲಿ ತಮ್ಮ ದೇಹವನ್ನಿರಿಸಿದ ವೀರ ನರಸಿಂಗರಾಯರ ಕುಲದ ಕೀರ್ತಿಯನ್ನು ಕಾಯ್ದನು. ಅವರು ತಮ್ಮ ಅವಸಾನಕಾಲದಲ್ಲಿ ತಮ್ಮ ಹೃದಯದಲ್ಲಿ ಜಾಳಿಟ್ಟ ನಿನ್ನನ್ನು ಯಾವ ತಪಸ್ವಿಯ ಉಡಿಯಲ್ಲಿ ಹಾಕಿದ್ದರೋ ಆ ಮಹರ್ಷಿಯ ಮಾನವನ್ನು ಕಾಯ್ದನು. ಯಾವ ವಿಶಾಸಾಕ್ಷಿಯು ಮೊದಲಿನ ನಿನ್ನ ಸೆರೆಯನ್ನು ತನ್ನ ಪ್ರಾಣಗಳನ್ನೊತ್ತಿಟ್ಟು ನಿನ್ನನ್ನು ಬಿಡಿಸಿದ್ದಳೋ ಅಂಥವಳು ನಿರುಪಾಯವೆಂದು ಈ ಸಲ ನಿರಾಶೆಯಿಂದ ಮೃತ್ಯುಮುಖದಲ್ಲಿ ಅಡಗುವಷ್ಟರಲ್ಲಿ ಅದೇ ವಿಭೂತಿಯು ಅವಳಿಗೆ ಪ್ರಾಣದಾನವನ್ನು ನೀಡಿದನು. ದೇವರು ಆ ಚಾಂದಖಾನನನ್ನು ಸದಾ ಸುಖ ಸಂಪತ್ತುಗಳಿಂದ ಅನುಗ್ರಹಿಸಲಿ.

ಕುಮುದಿನಿ— ಅಹುದು ಸಖೀ! ಆ ಸೆರೆಮನೆಯಲ್ಲಿಯ ಒಂದೊಂದು ಸಂಗತಿಯು ನೆನಪಾದರೆ ಮೈಯು ಜುಮ್ಮೆನ್ನುವುದು. ಆಹಾ! ಕುಮಾರಿಯ ಶರೀರದ ವಿಡಂಬನೆಗಾಗಿ ಎಂತಹ ಕ್ರೂರ ಕಾರಸ್ಥಾನವದು? ಪರದೇಶಿಯಾದವಳ ಪಾವಿತ್ರ್ಯದ ಘಾತಕ್ಕಾಗಿ ಎಂಥ ಅಮಾನುಷವಾದ ಕೃತ್ಯಗಳವು!! ಸಖೀ! ಆರ್ಯಸ್ತ್ರೀಯರಿಗೆ ಇದಕ್ಕೂ ಘೋರತರವಾದ ಸಂಕಟವಾವುದು? ನಮ್ಮ ಧ್ಯೇಯವೇ ಪಾತಿವ್ರತ್ಯವು. ಅವರಿಗೆ ರಾಜ್ಯವೂ ಬೇಡ, ವೈಭವವೂ ಬೇಡ, ಸ್ವರ್ಗವೂ ಬೇಡ. ಸಖೀ! ಇದಕ್ಕಾಗಿಯೇ ಅಲ್ಲವೇ? ನನ್ನ ತಾಯಿಯು ಸತಿಯ ದಿವ್ಯ ಪದವಿಯನ್ನು ಪಡೆದಳು. ಆಹಾ! ವಿಶಾಸೇ! ಆ ಸೆರೆಮನೆಯಲ್ಲಿ—ಆ ಕ್ರೂರನು ನನ್ನೆದುರಿನಲ್ಲಿದ್ದ ಸಮಯದಲ್ಲಿ ಧರಣೀಮಾತೆಯು ತನ್ನಲ್ಲಿ ನನಗೆ ನೆಲೆಯನ್ನೇಕೆ ನೀಡಲೊಲ್ಲಳು ಅಥವ ಅಗ್ನಿನಾರಾಯಣನು ಪ್ರಕಟನಾಗಿ ನನ್ನ ಆಹುತಿಯನ್ನೇಕೆ ಸೇವಿಸಲೊಲ್ಲನು ಎಂದು ಮನಸ್ಸಿ

ಸಲ್ಲಿಯೇ ಕುದಿಯುತ್ತಿದ್ದೆನು. ಬೇಡ, ಸಖೀ! ಆ ವಿಚಾರವೇ ಬೇಡ. (ಮತ್ತೂ ಅವಳ ಭುಜಗಳಮೇಲೆ ತಲೆಯನ್ನಿಟ್ಟು ದುಃಖಿಸುವಳು.)

ಮೀನಾಕ್ಷಿ— (ಸ್ವಗತ) ಅಪ್ಪಯ್ಯಾ! ಇವಳು ಪುನಃ ಶೋಕಿಸಲಾರಂಭಿಸಿದಳು. ತಾತನು ಇವಳನ್ನು ಇಂಥ ಸ್ಥಿತಿಯಲ್ಲಿ ಕಂಡರೆ, ಅವರ ಮನಸ್ಸಿಗೆಷ್ಟು ವ್ಯಥೆಯಾಗುವುದಲ್ಲ! (ಸ್ವಲ್ಪ ಯೋಚಿಸಿ) ಆದರೆ ಮೋಹಿಸೀ! ಅಂಥ ಕಠಿಣ ಸಮಯದಲ್ಲಿ ಚಾಂದಖಾನನು ಬಂದು, "ಅಮ್ಮಾ ನಾನು ನಾಯಕರ ಮಹಮ್ಮದೀಯ ತಮ್ಮನು. ನೀವು ಅವರ ಬಳಗದವರೆಂದಮೇಲೆ ನಿಮ್ಮನ್ನು ಬಿಡುಗಡೆಮಾಡುವುದು ನನ್ನ ಪವಿತ್ರ ಕರ್ತವ್ಯವು" ಎಂದು ನುಡಿಯಲು, ನಿನ್ನ ಆನಂದವು ಯಾವ ಪರಿಯಾಗಿತ್ತು?

ಕುಮುದಿನಿ— (ಆನಂದದಿಂದ) ದೇವಿಯ ಮಂದಿರದಲ್ಲಿ ಧರ್ಮದ ಹೆಸರಿನಿಂದ ಕುರಿಯ ಕುತ್ತಿಗೆಯ ಮೇಲೆ ಕತ್ತಿಯನ್ನಾಡಿಸಲು ದುರುಳರು ಉದ್ಯುಕ್ತರಾದ ವೇಳೆಯಲ್ಲಿ ಪ್ರತ್ಯಕ್ಷ ದೇವಿಯೇ ಆಗಲಿ, ಅಥವ ದೇವಿಯ ಅರ್ಚಕರೇ ಆಗಲಿ; ಈ ಕ್ರೂರ ಕಾರ್ಯವನ್ನು ನಿಷೇಧಿಸಿ ಆ ಬಡ ಪ್ರಾಣಿಯನ್ನು ಕಾಪಾಡಿದರೆ ಅದಕ್ಕೆ ಯಾವ ಪ್ರಕಾರದ ಆನಂದ—ಅಲ್ಲ—ಪರಮಾನಂದವಾಗಬೇಕೋ ಅದೇ ಹರ್ಷವು ನನಗೆ ಆ ನರವೀರ ಶಿರೋಮಣಿಯಾದ ಚಾಂದಖಾನನನ್ನು ನೋಡಿದಾಗಲೇ ಆಯಿತು. ಅದರಲ್ಲಿಯೂ (ನಕ್ಕು) ಸಖೀ! ನಾಯಕರ ನಾಮೋಚ್ಚರಣೆಯಾದ ಕೂಡಲೇ ನನ್ನಲ್ಲಿ ನವಜೀವನವುಂಟಾಗಿ ಒಂದು ಪ್ರಕಾರದ ಆತ್ಮಬಲವು ತಾನೇ ಬಂದಿತು.

ಮೀನಾಕ್ಷಿ—ಹೂಂ, ಹಾಗೇನು? ಆದರೆ ಏನೇ ಮೋಹಿಸೀ! ಕ್ಷಿತಿಜದ ಕೆಳಗಡಗಿದ ನಿನ್ನ ಚಂದ್ರನು ಇನ್ನೂ ಪ್ರಕಟವಾಗಲಿಲ್ಲವಲ್ಲ? ಮತ್ತಾವ ತಾರೆಯೂ ತನ್ನ ಮೋಹಿಸೀ ಮಂತ್ರದಿಂದ ಅವ

ನನ್ನು ಒಲಿಸಿಕೊಂಡಳೋ ಅಥವ ನೀನೇ ಮತ್ತಾವನನ್ನಾದರೂ ನೋಡಿ ಮರುಳಾಗಿರಬಹುದೇಳು.

ಕುಮುದಿನಿ— ಒಂದೊಂದು ವೇಳೆಯಲ್ಲಿ ನಿನ್ನ ಬುದ್ಧಿಯು ಅಲೆಯಲಿಕ್ಕೆ ಹೋಗುವುದೇನೇ? ಸೂರ್ಯವಂಶದಲ್ಲಿ ಜನ್ಮವನ್ನೆತ್ತಿ, ಆರ್ಯ ಸಂಸ್ಕೃತಿಯ ನೆರಳಿನಲ್ಲಿ ಬೆಳೆದು, ಕನ್ನಡ ಸಮ್ರಾಟರಾದ ರಾಯರ ಉಪ್ಪನ್ನು ಉಂಡು ಈ ಕ್ಷತ್ರಿಯ ಕುಮಾರಿಯು ತನ್ನ ಮನಸ್ಸಿನಲ್ಲಿ ತಪ್ಪಿಯಾದರೂ ಅನ್ಯ ಮನುಷ್ಯನಿಗೆ ಸ್ಥಾನಕೊಡುವಳೇ? ಛೀ! ಹುಚ್ಚೀ! ಸರ್ವಥಾ ಅಶಕ್ಯವು; ಯಾವನನ್ನು ನನ್ನ ಮನಸಿನ ಮಂದಿರದಲ್ಲಿ ಹಗಲಿರುಳು ಪೂಜಿಸುವೆನೋ ಅವನಿಗಾಗಿದ್ದ ಪ್ರೇಮವೇ ಶುದ್ಧವಾದದ್ದು. ಸಖೀ! ಇದರಿಂದಾಗುವ ಹರ್ಷವೇ ನಿಜವಾದದ್ದು. ಇದೇ ಆನಂದ ನಾಮವೇ ನನ್ನನ್ನು ವಿಜಾಪುರದ ತುರಂಗದಲ್ಲಿ ಕಾಯಿತು. ಮತ್ತು ಇಂದು ಈ ಪರ್ಣಕುಟಿರವು ಸ್ವರ್ಗಸಮವಾಗಿ ತೋರುವುದು. ನೋಡೇ! ನನ್ನ ಎಡಗಣ್ಣು ಅದರುತ್ತಿರುವುದು.

ಮೀನಾಕ್ಷಿ—ನಿನ್ನಲ್ಲಿಂಥ ಶುದ್ಧ ಪ್ರೇಮದ ಲೋಹಚುಂಬುಕವಿರಲು, ಅದಾವ ಉಕ್ಕಿನ ಹೃದಯವು ನಿನ್ನಿಂದ ಅಂತರದಲ್ಲಿರಬಹುದು? ಇಗೋ! ಬಂದನು—ಯಾವನೋ ಅತ್ತ ಬರುತ್ತಲಿರುವನು. ನೋಡತ್ತ. (ನಾಯಕನು ಬರುವನು.)

ನಾಯಕ—(ಸ್ವಗತ) ಚಂದ್ರಗಿರಿಗೆ ಹೋಗುವಾಗ್ಗೆ, ಇಲ್ಲಿಯೇ ಓರ್ವ ಋಷಿಕನ್ಯೆಯನ್ನು ಕಂಡಿದ್ದೆನು. ಋಷಿಯಾಶ್ರಮವಾದರೂ ಇಲ್ಲಿಯೇ ಹತ್ತಿರದಲ್ಲಿರಬಹುದು. ಆದಕಾರಣ ತಪಸ್ವಿಗಳ ದರ್ಶನಪಡೆದು ಮುಂದೆ ಹೊರಡುವಾ. (ಕುಮುದಿನಿಯನ್ನೂ ಮೀನಾಕ್ಷಿಯನ್ನೂ ನೋಡಿ) ಇಗೋ! ಇದೇ ಆಶ್ರಮವು.... ಅಂ—ಆ ಚಂಪೆಯಾದರೂ ತನ್ನ ಸಖಿಯೊಡನೆ ಇಲ್ಲಿಯೇ ಇರುವಳು. (ಅವರ ಬಳಿಗೆ ಹೋಗಿ) ಮುನಿಗಳೆಲ್ಲಿರುವರು? ಅಪ್ಪಣೆಯಾದರೆ ನಾನು ಒಳಗೆ ಹೋಗುವೆನು. ಸ್ವಲ್ಪ ಕೇಳಿ

ಕೊಂಡು ಬನ್ನಿ. (ಅಧೋಮುಖನಾಗಿ ನಿಲ್ಲುವನು. ಮೀನೆಯು ಚಂಪೆಗೆ ಕೈಸೊನ್ನೆಯಿಂದ ಸೂಚಿಸಿ ಕೇಳುವಳು. ಅವಳು ಹೌದೆಂದು ತಲೆ ಹಾಕುವಳು.)

ಮೀನಾಕ್ಷಿ— ಮಹನಿಯರೇ! ಸ್ವಲ್ಪ ಇಲ್ಲಿಯೇ ನಿಲ್ಲಿ. ಮುನಿಗಳು ಉದ್ಯಾನದಲ್ಲಿರುವರು. ಅವರನ್ನೀಗಲೇ ಕರೆದುತರುವೆನು. (ಸ್ವಗತ) ತಾತನ ಮುಂದೆ ಈ ದುಷ್ಯಂತ-ಶಕುಂತಲೆ ದಂಪತಿಗಳ ಶುಭವಾರ್ತೆಯನ್ನು ಯಾವಾಗ ಹೇಳಲಿ. (ಕುಮುದಿನಿಗೆ) ತಂಗೀ! ಸನ್ಮಾನೀಯರಾದ ಅತಿಥಿಗಳಿಗೆ ಆಸನವನ್ನು ಕೊಡು. (ಹೋಗುವಳು. ಕುಮುದಿನಿಯು ಒಳಗೆ ಹೋಗುವಳು.)

ನಾಯಕ— (ಸ್ವಗತ) ಅಂದು ನನ್ನ ಮನಸ್ಸನ್ನು ಚಂಚಲವಾಗಿ ಮಾಡಿದ ಚಂಪೆಯಂತೂ ಇವಳೇ! ನನ್ನ ಮೋಹಿಸಿಯನ್ನಂತೂ ನಾನಿಂದು ಕಾಣುವುದಿಲ್ಲವೇ? ಛೀ! ಇವಳ ರೂಪವಂತೂ ಅವಳಿಗಿಂತಲೂ ಮಿಗಿಲಾದದ್ದು. ಆಹಾಹಾ! ಎಂತಹ ಲಾವಣ್ಯವಿದು! ಇದೇನು? ಬ್ರಾಹ್ಮಣ ಕುಮಾರಿಯ ವಿಷಯವಾಗಿ ನಾನು ಹೀಗೆ....ಊಂ, ಹುಂ; ಶಕ್ಯವೇ ಇಲ್ಲ—ಇವಳು ಕ್ಷತ್ರಿಯ ಕನ್ಯೆಯೇ ಇರಬೇಕು. (ಕುಮುದಿನಿಯು ಪೀಠವನ್ನು ತರುವಳು.)

ಕುಮುದಿನಿ— (ಅದನ್ನು ಹಾಸಿ) ಹೀಗೆ ಇದನ್ನಲಂಕರಿಸಬೇಕು ನಾಯಕರೇ!

ನಾಯಕ— ಅಂ; ನನ್ನ ಹೆಸರು ತಮಗೆ ಹೇಗೆ ತಿಳಿಯಿತು?

ಕುಮುದಿನಿ— (ಲಜ್ಜೆಯಿಂದ ಸುಮ್ಮನಿರುವಳು.)

ನಾಯಕ— ನೀವು ನನ್ನನ್ನು ನಾಯಕನೆಂದು ಹೇಗೆ ಸಂಬೋಧಿಸಿದಿರಿ?

ಕುಮುದಿನಿ—ನಮ್ಮಲ್ಲಿ ವೀರಪುರುಷರಿಗೆ ನಾಯಕರೆಂದೆನ್ನುವರು.

ನಾಯಕ— (ಅವಳನ್ನು ದಿಟ್ಟಿಸಿ ನೋಡಿ) (ಸ್ವಗತ) ಇವಳ ಹೋಲಿಕೆಯಂತೂ ಸರಿಯೇ ಸರಿ; ಮತ್ತು ಇವಳ ಪ್ರತಿಯೊಂದು ಮಧುರ ಶಬ್ದವು ನನ್ನ ಹೃದಯದಲ್ಲಿ ಮನೆ ಮಾಡಲೆತ್ನಿಸುವುದು.

ನಾನು ಆರ್ಯಕ್ಷತ್ರಿಯನು. ನನ್ನ ಪ್ರಿಯ ಮೋಹಿನಿಯ ವಿನಾ ಬೇರೆ ಯಾವಳ ಮೋಹಕ್ಕೆ ನಾನು ಒಳಗಾಗುವುದು ಶಕ್ಯವೇ? ಇಲ್ಲ. ಇವಳು ನಿಜವಾಗಿ ವೀರಸರಸಿಂಹನ ಪುತ್ರಿಯಾದ ಮೋಹಿನಿಯೇ! ಇವಳು ಅಂದೇ ಆ ಮಲ್ಲಿಗೆಯ ಕೆಳಗೆ ನನ್ನನ್ನು ಗುರುತಿಸಿದ ಹಾಗೆ ತೋರುವುದು. ಕೇವಲ ಇವಳಿಗಾಗಿಯೇ ಚಂದ್ರಗಿರಿಯಲ್ಲಿರುವ ಮಹತ್ಕಾರ್ಯವನ್ನು ಇದ್ದಕ್ಕಿದಹಾಗೆ ಬಿಟ್ಟು ಇಲ್ಲಿಗೆ ಬಂದರೆ, ಇವಳು ಹೀಗೆ ಚೇಷ್ಟೆಮಾಡುವಳೇನು? ಒಳ್ಳೇದಿರಲಿ. ನಾನೂ ಇವಳ ಮಾರ್ಗವನ್ನೇ ಅವಲಂಬಿಸುವೆನು. (ಪ್ರಕಾಶ) ಮೋಹಿನೀ!....

ಕುಮುದಿನಿ—ಇದೇನು ನನ್ನ ಹೆಸರು ತಮಗೆ ಹೇಗೆ ಗೊತ್ತು?

ನಾಯಕ— ಇಲ್ಲ ನನಗೆ ಗೊತ್ತಿಲ್ಲ.

ಕುಮುದಿನಿ—ಹಾಗಾದರೆ ನನ್ನನ್ನು ಮೋಹಿನಿಯೆಂದೇಕೆ ಕರೆದಿರಿ?

ನಾಯಕ— ಪುರುಷರನ್ನು ಮೋಹಪಾಶದಲ್ಲಿ ಬಿಗಿಯುವ ನಿನ್ನ ಅತುಲವಾದ ಸೌಂದರ್ಯವನ್ನು ಕಂಡು....

ಕುಮುದಿನಿ—(ಕೂಡಲೇ ನಾಯಕನನ್ನು ಆಲಂಗಿಸಿ) ನಾಥನೇ! ಇನ್ನು ಮಾತ್ರ ನಾನು ತಡೆಯೆನು. ಕ್ರೂರಕಾಲವು ನಮ್ಮಿರ್ವರನ್ನು ವಿರಹಾಗ್ನಿಯಲ್ಲಿ ಸುಟ್ಟು ಸುಣ್ಣಮಾಡಿತು. ಇಂದಿನ ಈ ವಿಯೋಗ ನಿವಾರಣೆಯೆಂದರೆ ನನ್ನ ಪುನರ್ಜನ್ಮವೇ ಸರಿ. ಆದರೆ....

ನಾಯಕ— ಏನು ನಿಜವಾಗಿ ನೀನು ಮೋಹಿನಿಯೇ!

ಕುಮುದಿನಿ— ಅಹುದು ನಾಥನೇ! ಮೋಹಿನಿಯು ಮಹದ್ಭಾಗ್ಯವು. ಮೀನಾಕ್ಷಿಯೆಂಬ ನನ್ನ ಗೆಳತಿಯ ಶೂರ ಸಾಹಸದಿಂದೊಮ್ಮೆ, ತಮ್ಮ ಪ್ರೇಮಪ್ರಭಾವದಿಂದೊಮ್ಮೆ ಹೀಗೆ ಎರಡು ಸಲ ತುರಂಗದಿಂದ ಪಾರಾಗಿ, ಇಂದು ನನ್ನ ಹೃದಯೇಶ್ವರನ ಪ್ರೇಮಾಶ್ರಯವನ್ನು ಪಡೆದೆನು. ಇನ್ನು ಈ

ಭೀಮನ ಬಾಹುಪಾಶದೊಳಗಿಂದ ನನ್ನನ್ನು ಇನ್ನಾವ ಕೀಚಕನು ಎಳೆಯಬಲ್ಲನು? (ಹಿಂದೆ ಋಷಿಯೂ ಮೀನಾಕ್ಷಿಯೂ ಬಂದು ಅಡಗಿ ನಿಲ್ಲುವರು.)

ಮೀನಾಕ್ಷಿ— ಹಂ; ತಾತಾ! ನಾನು ಹೇಳಿದ್ದೇ ನಿಜವು. ವೀರನರಸಿಂಗರಾಯರ ನಿಯೋಜಿತರಾದ ಅಳಿಯಂದಿರು ಇವರೇ! ತಾವು ಮತ್ತಾವ ವಿಚಾರವನ್ನೇ ಮಾಡಬೇಡಿ.

ಋಷಿ— ನೀನಿದನ್ನೇನು ಹೇಳಬೇಕಾಗಿಲ್ಲ. ನನ್ನ ಚಂಪೆಯನ್ನು ನಾನು ಚೆನ್ನಾಗಿ ಬಲ್ಲೆನು. ಆಹಾ! ಪರಮೇಶ್ವರಾ! ಈ ಮಧುರ ಮಿಲನವನ್ನು ನೋಡಿ ನಾನಿಂದು ಧನ್ಯನಾದೆನು. ಇಂದೇ ನಾನು ನನ್ನ ಕರ್ತವ್ಯ ಭಾರದಿಂದ ಮುಕ್ತನಾಗುವೆನು.

ನಾಯಕ— (ಕುಮುದಿನಿಗೆ) ಆಹಾ ಪಾಂಡುರಂಗಾ! ನಿನ್ನ ದಿವ್ಯ ಮಹಿಮೆಯ ಅನುಭವವು ನನಗಿಂದು ಬಂದಿತು. ನಿನ್ನನುಗ್ರಹವಾದಮೇಲೆ ವೈರಿಯು ಕೈವಾರಿಯಾಗುವನು. ಮೃತವು ಅಮೃತವಾಗುವುದು. ಅಂತೆಯೇ ಅಂದು ನನ್ನ ಶತ್ರುವು ಮಿತ್ರನಾದನು. ಇಂದು ಮಾಯೆಯಾದ ಮೋಹಿನಿಯು ಪ್ರಕಟಳಾದಳು. ಮೋಹಿನೀ! ಇನ್ನೆಷ್ಟು ಕಾಲ ನಾವು ವಿರಹತಾಪವನ್ನು ಸಹಿಸಬೇಕು?

ಕುಮುದಿನಿ— ಯಾವ ಸೀತಾಪತಿಯು ಈ ಶುಭ ಪ್ರಸಂಗವನ್ನುಂಟು ಮಾಡಿರುವನೊ ಅವನೇ ನನ್ನ ತಾತನನ್ನು ಪ್ರೇರಿಸಿ, ಎಂದೆಂದಿಗೂ ಎಂಗಡವಾಗದಂತಹ ಸಹವಾಸವನ್ನು ನಮ್ಮಿರ್ವರಿಗೆ ಇಂದೇ ನೀಡುವನೆಂದು ನಂಬಿಗೆಯಿದೆ. ಅದಕ್ಕಾಗಿ ಪ್ರಿಯನೇ! ತಾತನು ಬರುವ ವೇಳೆಯಾಗಿದೆ. ಸ್ವಲ್ಪ ಸರಿದು ನಿಲ್ಲಿ.

ನಾಯಕ— ಪ್ರಿಯೇ! ಅದು ಮಾತ್ರ ನನ್ನಿಂದಾಗದು.

ಕುಮುದಿನಿ—ಹುಂ; ಪ್ರಾಣನಾಥರೇ! ಹೀಗೆ ವಿಕಾರವಶರಾಗಬೇಡಿರಿ. ಶ್ರೀಹರಿಯ ಕೃಪೆಯಿಂದಲೇ ಈ ಸುದಿನದ ಲಾಭವಾಗಿದೆ.

ನಿಮ್ಮಂಥ ವೀರಯುವಕರು ಹೀಗೆ ಸಂಯಮನಹೀನರಾದರೆ ಈ ಪರಕೀಯರ ಕಠೋರವಾದ ಸುಲಿಗೆಯಿಂದ ನದೆ ಬಡೆಯಲ್ಪಟ್ಟ ನಮ್ಮ ಕನ್ನಡ ನಾಡನ್ನೂ ಮಾತೃಪದ ಭಗಿನಿಪದ ಪತ್ನಿಪದ ಇಂಥ ಪವಿತ್ರ ಸ್ಥಾನಗಳಲ್ಲಿರುವ ನಮ್ಮ ನಾರಿ ವರ್ಗವನ್ನೂ ಉದ್ಧರಿಸುವವರಾರು ? ಜಾಗ್ರತೆ. ಪ್ರಿಯಾ! ಸ್ವಲ್ಪ ಆತ್ಮಸಂಯಮನವನ್ನು ಆಚರಿಸಬೇಕೆಂದು ಬಿನ್ನಹ.

ನಾಯಕ— ಅಹಹಾ! ಪ್ರಥಮದರ್ಶನದಲ್ಲಿಯೇ ಸ್ವಸ್ತ್ರೀಯು ಗುರುವಿನ ಸ್ಥಾನದಲ್ಲಿರುವಳೆಂಬುದನ್ನು ತೋರಿಸಿದೆಯಾ! ಈಗಾಗಲೇ ಉಪದೇಶಕ್ಕೆ ಪ್ರಾರಂಭಮಾಡಿದೆಯೇನು? ಮೋಹಿನೀ! ಮನೋಹಾರಿಣೀ!

ಋಷಿ— (ಮುಂದೆ ತಟ್ಟನೇ ಬಂದು) ಯಾರವರು? ಚಂಪೇ! ಇವರಾರು? ಮೋಹಿನೀ ಮನೋಹಾರಿಣೀ ಎಂಬ ಸ್ತ್ರೀಯರು ಇಲ್ಲೆಲ್ಲಿರುವರು?

ಮೀನಾಕ್ಷಿ—ಏನೇ! ನೀನೇ ಮೋಹಿನಿಯ ರೂಪವನ್ನು ತಾಳಿದೆಯೇನು?

[ಕುಮುದಿನಿಯು ಸಿಟ್ಟಿನ ಆವಿರ್ಭಾವದಿಂದ ಅವಳನ್ನು ಹೊಡೆಯಹೋಗುವಳು.]

ಋಷಿ— ಇರಲಿ ಯುವಕಾ! ಹೀಗೆ ಖತಿಗೊಂಡು ನಿಲ್ಲಬೇಡ. ಎಲ್ಲ ಸಂಗತಿಯು ನನಗರಿಕೆಯಾಗಿದೆ. ನಾನಾವ ದಿವಸಕ್ಕಾಗಿ ಅನುದಿನವೂ ರವಿಯನ್ನು ಪ್ರಾರ್ಥಿಸುತ್ತಿದ್ದೆನೋ ಆ ದಿನವು ಇಂದು ತಾನೇ ಉದಯಿಸಿತು. ಆ ರವಿಯು ತನ್ನ ಕುಲದ ಓರ್ವ ವೀರನನ್ನು ಇಂದು ಇಲ್ಲಿಗೆ ತಾನೇ ಕಳುಹಿಸಿರುವನು. ಈ ವಾರದ ಹಿಂದೆಯೇ ನಿನ್ನ ಆಗಮನದ ವಾರ್ತೆಯನ್ನು ನನಗೆ ಮೀನೆಯು ಹೇಳಿದ್ದಳು. ಆದರೆ ಪ್ರತ್ಯಕ್ಷವಾಗಿ ನಿನ್ನನ್ನು ಕಾಣುವ ಪ್ರಸಂಗವು ಬಂದಿದ್ದಿಲ್ಲ. ಇಂದು ಮಾತ್ರ ದೇವರಿಗೆ ಧನ್ಯವಾದಗಳನ್ನರ್ಪಿಸುತ್ತ ಈ ನರಸಿಂಗರಾಯನ ಕನ್ಯಾರತ್ನವನ್ನು ಪೂರ್ವಸಂಕಲ್ಪದಂತೆ ನಿನಗೊಪ್ಪಿಸುವೆನು. ನಾಯಕಾ! ಏನೋ ಋಣಾನುಬಂಧದಿಂದ ಈ

ಸುಕುಮಾರಿಯನ್ನು ವಿಧರ್ಮಿಯರ ದಾಳಿಯಿಂದ ಬಹು ಜೋಕೆಯಿಂದ ಜೋಪಾನಮಾಡಿದೆನು. ಈಗ ಈ ರತ್ನವನ್ನು ನಿನ್ನ ಸ್ವಾಧೀನಮಾಡುವೆನು. ಇವಳನ್ನೀಗ ಪ್ರತಾಪದುರ್ಗಕ್ಕೆ ನಿನ್ನೊಡನೆ ಕರೆದೊಯ್ದು ಈ ವಾರದ ನಂತರ ಉತ್ತಮವಾದ ಸುಮುಹೂರ್ತದಲ್ಲಿ ಇವಳನ್ನು ವರಿಸು. ನಾನು ಮಾತ್ರ ಬರಲಾರೆನು. ಒಳ್ಳೇದು; ವೀರಾ! ಚಂದ್ರಗಿರಿಗೇಕೆಂದು ಹೋಗಿದ್ದೇ?

ನಾಯಕ— ವೇಂಕಟದೊರೆಯವರು ಪರಲೋಕವಾಸಿಗಳಾದರು. ಅವರ ಅಣ್ಣನ ಮಕ್ಕಳಾದ ೩ ನೇ ರಂಗರಾಯರ ರಾಜ್ಯಾರೋಹಣೆಯ ಸಮಾರಂಭವು ಸಾಂಗವಾಯಿತು. ಅದಕ್ಕಾಗಿ ರಾಜಾಜ್ಞೆಯನ್ನು ಪಾಲಿಸುವುದಕ್ಕಾಗಿ ಹೋಗಿದ್ದೆನು.

ಋಷಿ— ಎಲ್ಲ ರಾಜ್ಯತಂತ್ರಗಳ ವ್ಯವಸ್ಥೆಯನ್ನು ಚೆನ್ನಾಗಿ ಸರಿಪಡಿಸಿ ಬಂದೆಯಾ?

ನಾಯಕ— ಇಲ್ಲ. ಹೊರಡುವುದರಲ್ಲಿ ಕೊಂಚ ಅವಸರವಾಯಿತೆಂದು ಹೇಳಲಿಕ್ಕೇನು ಅಡ್ಡಿಯಿಲ್ಲ.

ಋಷಿ— ಅದೇಕೇ?

ಮೀನಾಕ್ಷಿ— ಆಶ್ರಮದಲ್ಲಿರುವ ತಾರಾಮತಿಗಾಗಿ ಚಂದ್ರಗಿರಿಯಲ್ಲಿದ್ದ ಚಂದ್ರನು....

(ಕುಮುದಿನಿಯು ಅವಳ ಬಾಯಿಯನ್ನು ಮುಚ್ಚುವಳು.)

ಋಷಿ— ಅದೆಲ್ಲ ಇರಲಿ; ತರುಣನೇ! ನೀನು ಹೀಗೆ ಮಾಡುವುದರಲ್ಲಿ ಸ್ವಲ್ಪ ಅವಿಚಾರವನ್ನು ಮಾಡಿದೆಯೆಂದು ತೋರುವುದು. ಒಳ್ಳೇದು; ಇನ್ನು ಮುಂದಾದರೂ ಜಾಗ್ರತೆ. ಅಥವ ನಾನು ಹೇಳುವುದೇಕೇ? ನನ್ನ ಚಂಪೆಯು ನಿನಗೆಂದೂ ಈತರದ ಅವಿಚಾರಕ್ಕೆ ಒಳಗಾಗಗೊಡುವುದಿಲ್ಲ. ನಾಯಕಾ! ಸಂಗಡ ನಿನ್ನ ಪತ್ನಿಯ ದಾಸಿ—ಅಲ್ಲ—ಜೀವದ ಜೊತೆಗಾರಳಾದ ಮೀನಾಕ್ಷಿಯೂ ಬರುವಳು. ನಡೆಯಿರಿ. ದೇವಾ

ಲಯಕ್ಕೆ ಹೋಗುವಾ, ದೇವರ ದರ್ಶನಾನಂತರ ನೀವು ಹೊರಡಿರಿ. ನಾಯಕಾ! ನಿನ್ನ ಜನರೆಲ್ಲಿರುವರು?

ನಾಯಕ— ಅಲ್ಲಿಯೇ ಗುಡಿಯ ಬಳಿಯಲ್ಲಿ.

ಋಷಿ— ಹಾಗಾದರೆ ನಡೆಯಿರಿ. ಅದಕ್ಕೂ ಮೊದಲು ಚಂಪೇ! ನಿನ್ನ ತೊಟ್ಟಿಲದೊಳಗಿನ ಹೆಸರು ಮೋಹಿನಿಯೆಂದೂ ನಾನಿಟ್ಟಿರುವ ಹೆಸರು ಚಂಪೆಯೆಂದೂ ಇದ್ದರೂ ಇನ್ನು ನಿನ್ನ ಅತ್ತೆಯ ಮನೆಯ ಹೆಸರು ಕುಮುದಿನಿಯೆಂದಿರಬೇಕೆಂದು ನನ್ನ ಇಚ್ಛೆ. ನೀನು ಭಕ್ತಿಪುರಸ್ಸರವಾಗಿ ಪ್ರತಿದಿನವೂ ಶ್ರೀ ಶಂಕರನ ಕುಮುದಪುಷ್ಪಗಳಿಂದ ಸೇವೆಯನ್ನು ಮಾಡಿದ್ದಕ್ಕಾಗಿ ನಿನ್ನ ಈ ನೂತನ ನಾಮವು ಸಲ್ಲುವುದಿಲ್ಲವೇ? ನಾಯಕರೇ! ಇವಳ ಹೆಸರನ್ನು 'ಕುಮುದಿನಿ' ಎಂದು ಇಡುವೆನು. (ಎಲ್ಲರೂ ಹೋಗುವರು.)

---

೪ ನೇ ನೋಟ

[ಅರಮನೆಯ ಪರದೆ.]

[ರಂಗರಸರೂ ತಿರುಮಲರಾಯರೂ ಮಾತನಾಡುತ್ತ ಬರುವರು.]

ತಿರುಮಲರಾಯ—ಒಡೆಯರೇ! ಹಾವಿಗೆ ಹಾಲನ್ನೆರೆದರೆ ಅದು ವಿಷವನ್ನು ಕಾರದೆ ಬಿಟ್ಟೀತೇ? ತಾವೇನೋ ಉದಾರ ಅಂತಃಕರಣದಿಂದ ಪುಂಡತನವನ್ನು ಒಡ್ಡಿದ ಜಗರಾಯನನ್ನು ಕ್ಷಮಿಸಿರುವಿರಷ್ಟೆ. ಆದರೆ ಈ ಶಂಖಲಿಖಿತರು ಮಹಾಕ್ರೂರ ಕಪಟಿಗಳು.

ರಂಗರಸರು— ತಿರುಮಲರಾಯಾ! ನೀನು ಹೇಳುವುದು ನಿಜವು. ಆದರೆ ಇದೋ ನೋಡು ಜಗರಾಯನು ಮನಃಪೂರ್ವಕವಾಗಿ ಪಶ್ಚಾತ್ತಾಪಪಟ್ಟು ಶರಣಾಗತನಾಗಲು ಈ ಪತ್ರವನ್ನು ಬರೆದಿರುವನು. ಅವನಿಗೆ ಅಭಯವನ್ನೀಯುವುದು ನಮ್ಮ ಕ್ಷತ್ರಿಯರ ಕರ್ತವ್ಯವಲ್ಲವೇ?

ತಿರುಮಲರಾಯ—ದೊರೆಯುವರ ದೊಡ್ಡಮನಸ್ಸಿಗೆ ಇಂಥ ಮದವೇರಿದ ಶ್ವಾನಗಳ ಮನೋವೃತ್ತಿಯು ಹೇಗೆತಾನೇ ತಿಳಿಯಬೇಕು. ಜಾರಿಣಿಯ ದುಷ್ಟ ಹೇತುವೂ ಕಪಟಜನರ ಕುಠಾರತನವೂ ಒಂದೇ ಪ್ರಕಾರದದ್ದಾಗಿರುತ್ತವೆ. ನಾನಂತೂ ಈ ಪತ್ರದ ಮೇಲೆ ವಿಶ್ವಾಸವನ್ನಿಡುವುದಿಲ್ಲ....

ರಂಗರಸರು—ನಾವು ಸತ್ಯವನ್ನು ಪಾಲಿಸಿದರೆ ಸಾಕು. ಉಳಿದವರು ಬೇಕಾದ ಹಾಗೆ ವರ್ತಿಸಲಿ. ಸುಜನ ಪರಿಪಾಲಕನಾದ ಆ ಶ್ರೀ ಕೃಷ್ಣನು ನಮ್ಮನ್ನು ಕಾಪಾಡಲಾರನೇ ?

ತಿರುಮಲರಾಯ—ಪ್ರಭೋ ! ಈ ರಾಜಕಾರಣದಲ್ಲಿ ಅನ್ಯರ ಕಪಟವನ್ನು ತಿಳಿದುಕೊಳ್ಳಲು ಅವರ ಮಾರ್ಗವನ್ನೇ ಅವಲಂಬಿಸಬೇಕಾಗುವುದು. ಆ ಶ್ರೀ ಕೃಷ್ಣನು ಪೂತನೆಯ ಪಾಪವಾಸನೆಯನ್ನರಿತು ಅವಳಿಗಿಂತಲೂ ಕಪಟಿಯಾಗಿ ಅವಳ ಪಂಚಪ್ರಾಣಗಳನ್ನು ಹೀರಲಿಲ್ಲವೇ ? ಆ ದುಷ್ಟ ವೃತ್ರಾಸುರನನ್ನು ಅವನು ತಾನೇ ಕಳ್ಳನಾಗಿ ಸಂಹಾರ ಮಾಡಲಿಲ್ಲವೇ ? ರಾಜನೇ ! ಈ ರಾಜಕಾರಣದಲ್ಲಿ ಸುಳ್ಳಿಗೆ ಸುಳ್ಳು, ಕಳವಿಗೆ ಕಳವು ಆದರೇಯೇ ತರುಣೋಪಾಯವು. ಇಲ್ಲದಿದ್ದರೆ ಅರಸರಿಗಂತೂ ಅನಿಷ್ಟವು ಕಟ್ಟಿಟ್ಟದ್ದು ; ಅವನ ರಾಜ್ಯಕ್ಕೂ ಅನಿವಾರ ಹಾನಿಯು. ಇಂತಹ ಸಮಯದಲ್ಲಿ ಅರಸರು ಕೈಕೊಳ್ಳುವ ಕಾರ್ಯವು ಕಪಟವಲ್ಲದೆ ಧೂರ್ತತನವು, ದೂರದೃಷ್ಟಿಯು. (ಇಷ್ಟರಲ್ಲಿ ಶ್ಯಾಮಭಟ್ಟನು ರಾಣಿಯೊಡನೆ ಓಡುತ್ತ ಬರುವನು.)

ಶ್ಯಾಮಭಟ್ಟ—ರಾಜಾಧಿರಾಜನೇ ! ಘಾತವಾಯಿತು. ಜಗರಾಯನು ಅಂತಃಪುರವನ್ನು ಪ್ರವೇಶಿಸಲೆತ್ನಿಸಿರುವನು. ಅಷ್ಟರಲ್ಲಿ ನಾನು ಇವರೊಡನೆ ಹೊರಬಿದ್ದು ನಿಮ್ಮೆಡೆಗೆ ನಡೆದ ಸಂಗತಿಯನ್ನು ಅರಿಕೆಮಾಡಲು ಬಂದಿರುವೆನು. ರಾಜಪುತ್ರರಾದ ವೀರ ನರಸರಾಜರೋರ್ವರೇ ಅವನನ್ನು ತಡೆದು ಹಿಡಿದಿರು-

ವರು. ಆ ದುಷ್ಟ ಜಗರಾಯನು ನಿಮ್ಮೆಡೆಗೆಯೇ ಹೊರಟಿರುವನು.

ರಂಗರಸರು— (ತ್ವೇಷದಿಂದ) ಬರಲಿ ; ಪ್ರತ್ಯಕ್ಷ ಕಾಲನು ಬಂದರೂ ನಾನು ಹೆದರುವುದಿಲ್ಲ. ತಿರುಮಲರಾಯಾ! ಮುಖ್ಯ ಮಂತ್ರಿಗಳಾದ ನರಸರಾಯರೂ ಮುಖ್ಯ ಸೇನಾಪತಿಗಳಾದ ಅರುಣಾಚಲ ರಾಯರೂ ಕೊನೆಗೆ ಜಗರಾಯನನ್ನೇ ಹಿಂಬಾಲಿಸಿದಂತೆ ತೋರುವುದು. ಆದಕಾರಣ ನನಗೆ ಅನಿಷ್ಟಸಂಭವಿಸುವುದು ಖಂಡಿತವಾಗಿದೆ. ನೀವು ಮಾತ್ರ ಬೇಗ ಎಚ್ಚನಾಯಕರಿಗೆ ಈ ಸಂಗತಿಯನ್ನು ತಿಳುಹಿಸಿರಿ, ನಿಲ್ಲಬೇಡಿರಿ. ಒಂದರಕ್ಷಣ ವಾದರೂ ತಡಮಾಡಬೇಡಿರಿ. (ಅವನು ಹೋಗುವನು.) ಪ್ರಿಯೇ! ಚಿನ್ನವೇಂಕಟನೂ ನಾಗಲಾಂಬಿಕೆಯೂ ಎಲ್ಲಿರುವರು ?

ರಾಣಿ— (ದುಃಖದಿಂದ) ಚಿನ್ನನೆಲ್ಲಿಯೋ ಆಡುತ್ತಿದ್ದನು. ನಾಗಲಾಂಬಿಕೆಯು ತೊಟ್ಟಿಲದಲ್ಲಿದ್ದಳು. ನಾಥಾ ! ಅಕಲ್ಪಿತವಾದ ಪ್ರಸಂಗದಿಂದ ಎದೆ ಒಡೆದು ನೀರಾಗಿದೆ, ಕಾಪಾಡಿರಿ. (ಅವನ ಬಾಹುವಶಳಾಗುವಳು.)

ರಂಗರಸರು— ಪ್ರಿಯೇ ! ಸ್ವಲ್ಪ ಶಾಂತಳಾಗು, ಕ್ಷತ್ರಿಯ ಕುಮಾರಿಯೂ ವೀರಪತ್ನಿಯೂ ಆದ ನೀನು ಹೀಗೆ ಹೆದರುವುದುಚಿತವೇ ?

ರಾಣಿ— ಹಾಗಲ್ಲ ಪ್ರಿಯನೇ ! ನಿಮ್ಮ ಸನ್ನಿಧಾನದಲ್ಲಿ ಬರುತ್ತಲೇ ನನ್ನ ಭಯವು ಹೇಳದೆ ಓಡಿತು. ಬೇಕಾದರೆ ತನ್ನಿ. ನಿಮ್ಮ ಆಯುಧವನ್ನು ತನ್ನಿ. ಕನ್ನಡ ಸ್ತ್ರೀಯರು ವೀರಸುತಾ: ವೀರಪ್ರಸು : ಇರುವರೆಂಬುದನ್ನು ಜಗತ್ತಿನ ನಿದರ್ಶನಕ್ಕೆ ಚೆನ್ನಾಗಿ ತಂದುಕೊಡುವೆನು.

ರಂಗರಸರು— ಆದರೆ ಪ್ರಿಯೇ ! ನಿನ್ನ ಕೈಯಲ್ಲಿ ಕಠಾರಿಯನ್ನು ಕೊಟ್ಟು ನಾನು ಪುರುಷ ಧರ್ಮದಿಂದ ಚ್ಯುತನಾಗಲೋ ? ಯಾವನು ತನ್ನ ಹೆಂಡರು ಮಕ್ಕಳನ್ನು ಪುಂಡಜನರಿಂದ ಸಂರಕ್ಷಿಸ ಬಲ್ಲನೋ ಅವನೇ ಪುರುಷನಲ್ಲವೇ ? ಹೀಗಿರಲು ನಾನಿರುವ

ತನಕ ನಿನಗೆ ಭಯವೇಕೇ ? (ಇಷ್ಟರಲ್ಲಿ ವೀರನರಸಿಂಹನನ್ನು ಕಟ್ಟಿ ಕೊಂಡು ಜಗರಾಯನೂ ಮಕರನಾಯಕನೂ ಬರುವರು. ರಂಗರಾಯನು ಒರೆಯೊಳಗಿಂದ ಕಟ್ಯಾರಿಯನ್ನು ಹಿರಿಯುವಷ್ಟರಲ್ಲಿ ಜಗನ ಜನರು ಅವನನ್ನು ಭಾಲೆಗಳಿಂದ ತಡೆದು ಹಿಡಿಯುವರು.) ಅಂತಃಪುರವನ್ನು ಹೊಕ್ಕು ನಾರಿಯರ ಮೇಲೆ ದಾಳಿ ಮಾಡುವ ಷಂಢಗಳಿರಾ! ಥೂ ನಿಮ್ಮ ಬಾಳ್ವೆಯ ಮೇಲೆ ಥೂ, ನೀವು ನಿಜವಾಗಿ ಶೂರ ರಾದರೆ ನನ್ನ ಸಂಗಡ ಯುದ್ಧಕ್ಕೆ ಸಿದ್ಧರಾಗಿರಿ.

ಜಗರಾಯ— (ತುಚ್ಛತನದಿಂದ ನಕ್ಕು) ಅನಾಯಾಸವಾಗಿ ಕಾರ್ಯವನ್ನು ಸಾಧಿಸುವ ಸಂಧಿಯು ತಾನೇ ಪ್ರಾಪ್ತವಾಗಿರಲು ರಕ್ತ ಪಾತಕ್ಕೆ ಏಕೆಂದು ಕಾರಣನಾಗಲೋ? (ಶ್ಯಾಮಭಟ್ಟನಿಗೆ) ಎಲಾ, ಏ ಭಟ್ಯಾ! ಈ ಜಗರಾಯನನ್ನು ಮೋಸಗೊಳಿಸಿ ನೀನು ಈ ಜಗತ್ತಿನಲ್ಲಾದರೂ ಜೀವಂತನಿರಬಹುದೇನು ? (ತನ್ನ ಜನರಿಗೆ) ನೋಡುವಿರೇನು ? ಇವನ ಹೆಡಮುರಿಗೆಯನ್ನು ಕಟ್ಟಿರಿ.

ಶ್ಯಾಮಭಟ್ಟ—ಹಂ, ಚಾಂಡಾಲರೇ! ಒಂದು ಹೆಜ್ಜೆಯನ್ನಿಟ್ಟರೆ ನಿಮ್ಮ ಕಾಲುಗಳನ್ನು ತುಂಡು ತುಂಡಾಗಿ ಮಾಡುವೆನು. (ಜಗ ರಾಯನಿಗೆ) ಏ ದುಷ್ಟಾ! ಅಸುರಾ! ನಮ್ಮ ರಾಯರ ಸಿಂಹಾ ಸನಕ್ಕೆ ಶುದ್ಧ ಕ್ಷತ್ರಿಯ ರಾಜಪಿಂಡದವರ ಹೊರತು ಮತ್ತಿ ನ್ನಾರು ಬಾಧ್ಯಸ್ಥರು? ಆ ನಿನ್ನ ಚಿಕ್ಕರಾಯನ ಸಂಬಂಧ ವೇನೋ ?

ಜಗರಾಯ— ಹುಂ; ನೋಡುವಿರೇನು ? ಮೊದಲು ಇವನ ಬಾಯಿಯನ್ನು ಮುಚ್ಚಿರಿ. (ಅವನನ್ನು ಹಿಡಿಯುವಷ್ಟರಲ್ಲಿ)

ಚಿನ್ನವೇಂಕಟ—(ಪ್ರವೇಶಿಸಿ) ಹಂ; ಭಂಡರೇ ! ನಿಲ್ಲಿರಿ. ಇವರನ್ನೇನು ಮಾಡು ವಿರಿ? (ತನ್ನ ಆಯುಧವನ್ನು ತೋರಿಸಿ) ನೀಚರೇ! ನ್ಯಾಯವಿಲ್ಲದ ಸಂಧಿಯನ್ನು ಸಾಧಿಸಿ ನೀವಿಂಥ ಘೋರ ಕೃತ್ಯವನ್ನು ಮಾಡಲು ಬಂದಿರುವಿರೋ ? ಮೊದಲು ನಿಮ್ಮನ್ನು ಈ ನನ್ನ ಕತ್ತಿಗೆ ಬಲಿಗಳನ್ನರ್ಪಿಸುವೆನು.

ಜಗರಾಯ— (ನಕ್ಕು) ಮೂರ್ತಿಯು ಸಣ್ಣದಿದ್ದರೂ ಕೀರ್ತಿಯೇನು ಚಿಕ್ಕದಿಲ್ಲ. ಎಲಾ ನೀನು ಹಸುಗೂಸು. ಈ ವಿಚಾರಗಳೆಲ್ಲ ನಿನಗೇಕೇ? ಸುಮ್ಮನಿರು.

ಚಿನ್ನವೇಂಕಟ—ಸುಮ್ಮನಿರು. ಎಲಾ ಕಿಸುಬಾಯಿಯವನೇ! ವ್ಯರ್ಥ ನನ್ನ ಕೋಪಕ್ಕೆ ಪಾತ್ರನಾಗಬೇಡ. ಇದನ್ನೇನು ಬಲ್ಲಿರುವೇ? ಹೂಂ; ನಾನು ಹಸುಗೂಸಂತೆ, ಆದರೆ ಏನೋ? ಬಚ್ಚುಬಾಯಿಯವನೇ! ನಿನಗೇಕೆ ಈ ಹವ್ಯಾಸವು? ಒಳ್ಳೇ ಮಾತಿನಿಂದ ನೀವಿಲ್ಲಿಂದ ಹೋಗುವಿರೋ ನನ್ನ ಖಡ್ಗಕ್ಕೆ ಆಹುತಿಯಾಗುವಿರೋ?

ಜಗರಾಯ— ಅಬ್ಬಬ್ಬ! ಎಂಥ ಕೆಂಪಡರಿದ ಕಣ್ಣುಗಳಿವು! ಅಹುದಪ್ಪಾ! ನೀನೊಳ್ಳೇ ಶೂರನು....

ಚಿನ್ನವೇಂಕಟ—ಹೇಡೀ! ಇಗೋ, ಈ ಕ್ಷಣದಲ್ಲಿಯೇ ಅಣಗಿಸಿನುಡಿಯುವ ನಿನ್ನ ನಾಲಗೆಯನ್ನು ಕತ್ತರಿಸುವೆನು. ನಾನು ಹಸುಗೂಸಂತೆ. (ಅವನ ಮೇಲೆ ಹೋಗಲು ರಾಣಿಯು ಅವನನ್ನು ಹಿಡಿಯುವಳು.) ಬಿಡು, ತಾಯೇ! ಕನ್ನಡಿಗನಾಗಿ, ರಾಯರ ಬಿರುದಾವಳಿಯನ್ನು ಧರಿಸಿ, ನಾನಿಂಥ ಕೀಟಕಗಳ ಕಿಡಿಗೇಡಿತನವನ್ನು ನೋಡಲಾರೆನು. ಬಾಲ್ಯದಲ್ಲಿಯೇ ಸಿಂಹದ ಶಿಶುವನ್ನು ಬಾಹುಗಳಲ್ಲಿ ಹಿಡಿದು ತನ್ನ ವಜ್ರಮುಷ್ಟಿಯಿಂದ ಅದರ ಹಲ್ಲುಗಳನ್ನು ಉದರಿಸಿದ ಚಕ್ರವರ್ತಿ ಭರತನ ಭಾರತೀಯನು ನಾನು. ಈಗ ಇವರನ್ನು ಹೀಗೆ ನನ್ನ ಖಡ್ಗದ ಒಂದೇ ಹೊಡತದಿಂದ ಇವರ ಶಿರಗಳ ಚಂಡಾಟವನ್ನಾಡುವೆನು.

ಮಕರನಾಯಕ—ಹಾಗಾದರೆ ನೀನೇನು ಯುದ್ಧವನ್ನು ಹೂಡುವವನೇನು?

ಚಿನ್ನವೇಂಕಟ—ವೀರನಾಡುವ ಮಾತುಗಳೇ ಸ್ವಲ್ಪ. ಅವು ಕೂಡ ಖಂಡತುಂಡು.

ಮಕರನಾಯಕ—ಹಾಗಾದರೆ ತಡವೇಕೇ? (ತನ್ನ ಜನರಿಗೆ) ನೋಡುವಿರೇನು? ಈ ನೆಗ್ಗ್ಗಸ ಮುಳ್ಳನ್ನು ಮುರಿಯಿರಿ. (ಯುದ್ಧವು ಸಾಗುವುದು. ಇಬ್ಬರನ್ನು ಕೆಳಗೆ ಕೆಡಹಿ ಚಿನ್ನನು ತಾನೂ ಗಾಯವಾಗಿ ಬೀಳುವನು.)

ಜಗರಾಮ— (ತನ್ನ ಜನರಿಗೆ) ಇನ್ನು ತಡವೇಕೇ? ಬಂದಿಖಾನೆಯ ಗುಪ್ತ ಮಾರ್ಗದಲ್ಲಿ ಯಾರನ್ನೂ ಒಳಗೊಡದ ವ್ಯವಸ್ಥೆಯನ್ನು ಮಾಡಿರಿ. ತರುವಾಯ ನನಗೆ ಸೂಚಿಸಿರಿ.

ರಾಣಿ— (ಬಾಲಕನ ಬಳಿಗೆ ಹೋಗಿ ಮುದ್ದಿಟ್ಟು) ಅಯ್ಯೋ? ನನ್ನ ಕಂದಾ! ನಿನ್ನ ರಕ್ತಕಾಗಿಯೇ ಇವರು ಈ ಪರಿಯಾಗಿ ನೀರಡಿಸಿದ್ದರೇನು?

ಚಿನ್ನವೆಂಕಟ—ಅಹುದೇನು ದುರುಳರೇ! ನನ್ನ ರಕ್ತಕಾಗಿಯೇ ನೀವು ನೀರಡಿಸಿದ್ದಿರೋ? (ರಂಗನಿಗೆ) ಇದೇನು ತಾತಾ! ನೀವೂ ದುಃಖಿಸುವಿರೋ? ಅಪ್ಪಾ? ಇದಕ್ಕಿಂತಲೂ ದೇಹದ ಸಾರ್ಥಕ್ಯವು ಬೇರೆ ಯಾವುದು? ಕ್ಷತ್ರಿಯನು ಮರಣಕ್ಕೆ ಅಂಜುವುದಿಲ್ಲ. ಅವನ ಶಿರವು ಆವಾಗಲೂ ಅವನ ಹಸ್ತದಲ್ಲಿಯೇ ಇರುವುದೆಂದು ನೀವೆಷ್ಟುಸಲ ನನಗೆ ಉಪದೇಶಿಸಿಲ್ಲವೇ?

ರಾಣಿ— ನೋಡಿರಿ. ದುಷ್ಟರೇ! ಈ ನನ್ನ ಮುದ್ದು ಮಗನ ತ್ಯಾಗಬುದ್ಧಿಯನ್ನು ನೋಡಿರಿ. ಅಯ್ಯೋ! ದೇವರೇ! ನೀನೆಲ್ಲಿರುವೇ? ಛೀ; ನಿನ್ನ ಅಸ್ತಿತ್ವವೇ ಇಲ್ಲವೇನು?

ಚಿನ್ನವೆಂಕಟ—ಮಾತೇ! ದೇವರನ್ನು ದೂಷಿಸಬೇಡ. ತಂದೆಯ ಸೇವೆಗಾಗಿಯೂ ನಿನ್ನ ಪಾವಿತ್ರ್ಯಕ್ಕಾಗಿಯೂ ನನ್ನ ದೇಹವು ವೆಚ್ಚವಾದರೆ....

ರಾಣಿ— ಅಹುದು ಸುಕುಮಾರನೇ? ಇದೆಲ್ಲವೂ ನಿಜವು. ಆದರೆ ಈ ನಿನ್ನ ಎಳೆಯ ಸುಂದರ ದೇಹವನ್ನು ನೋಡಿದರೆ....

ಚಿನ್ನವೆಂಕಟ—ಹುಂ; ಜನನೀ! ಏಳೇಳು ಜನ್ಮಗಳಲ್ಲಿಯೂ ನಾನು ನಿನ್ನನ್ನು ಬಿಟ್ಟಿರಲಾರೆನು. ಅಂತ್ಯ ಸಮಯದಲ್ಲಿ ಮನುಷ್ಯನು ಆವ ವಾಸನೆಯನ್ನು ಧರಿಸುವನೋ ಅವನು ಪುನಃ

ಅದಕ್ಕಾಗಿಯೇ ಜನ್ಮವನ್ನೆತ್ತುವನೆಂದು ನನಗೆ ನೀನೆಷ್ಟು ಸಲ ಹೇಳಿಲ್ಲ. ಆದಕಾರಣ ನಾನಿನ್ನು ಒದುಕಿದರಂತೂ ಸರಿಯೇ ಸರಿ. ಇಲ್ಲದಿದ್ದರೆ ನಾನಿದೇ ಭರತಖಂಡದಲ್ಲಿ, ಇದೇ ಸಿರಿಗನ್ನಡ ನಾಡಿನಲ್ಲಿ, ಇದೇ ಮಾತೆಯ ಉದರದಲ್ಲಿ ಹುಟ್ಟಬೇಕೆಂಬ ವಾಸನೆಯಿಂದ ಪರಮೇಶ್ವರನ ನ್ಯಾಯ ಮಂದಿರಕ್ಕೆ ತೆರಳುವೆನು. ಶಾಂತಿಯನ್ನು ತಾಳು; ಶೋಕಿಸಬೇಡ.

ಜಗರಾಯ— (ಸ್ವಗತ) ಇವರ ಈ ವಾತ್ಸಲ್ಯವೂ ನನಗೆ ಸಹನವಾಗದು. ಬೇಗ ಇವರನ್ನು ಸೆರೆಮನೆಯಲ್ಲಿ ಸೇರಿಸಬೇಕು. (ಅಷ್ಟರಲ್ಲಿ ಅವನ ಸೇವಕರು ಬಂದು ಸೂಚಿಸುವರು.) ಹುಂ; ಹಾಗಾದರೆ ಬೇಗ ಒಬ್ಬೊಬ್ಬರನ್ನು ಎಳೆಯಿರಿ. (ಎಲ್ಲರೂ ಹೋಗುವರು.)

---

೫ ನೇ ನೋಟ

[ಎಚ್ಚನಾಯಕನ ಮನೆ.]

[ನಾಯಕನೂ ಕುಮುದಿನಿಯೂ ಪ್ರೇಮಾನಂದನೂ ಕೆಲವು ಸರದಾರರೂ ಕುಳಿತಿರುವರು ! ಗಾಯನ ಸಮಾರಂಭವು ಮುಗಿದ ಬಳಿಕ.]

ಪ್ರೇಮಾನಂದ—ನಾಯಕರೇ! ನಿಯಮಿಸಿದಂತೆ ನಿಮ್ಮ ಲಗ್ನ ಸಮಾರಂಭವು ಬಹು ಸಡಗರದಿಂದ ಸಾಂಗವಾಯಿತು. ಇಂದಿನಿಂದ ನೀವು ಎಲ್ಲ ಲೋಕೋಪಯೋಗಿ ಕಾರ್ಯಗಳಿಗೆ ಸಹಾಯಕವಾಗುವ ಗೃಹಸ್ಥಾಶ್ರಮದಲ್ಲಿ ಪ್ರವೇಶಮಾಡಿರುವಿರಿ. ನಾನೇನು ನಿಮಗೆ ವಿಶೇಷವಾಗಿ ಹೇಳಬೇಕಾಗಿಲ್ಲ. ನಿಮ್ಮ ಪತ್ನಿಯಾದರೂ ಸಾಮಾನ್ಯ ಸ್ತ್ರೀಯಲ್ಲ. ಇವಳ ಸಹಾಯದಿಂದ ಗೃಹಸ್ಥಾಶ್ರಮಧರ್ಮವನ್ನು ಚೆನ್ನಾಗಿ ಪಾಲಿಸಿ ಸತ್ಯಕ್ಕಾಗಿಯೂ, ದೇಶಕ್ಕಾಗಿಯೂ, ಧರ್ಮಕ್ಕಾಗಿಯೂ ದುಷ್ಕರ ನಿರ್ಮೂಲನೆ ಮಾಡಿ, ಈ ಪುರುಷ ಜನ್ಮವನ್ನು ಸಾರ್ಥಕಗೊಳಿಸಿರಿ. ಪರೋಪಕಾರದಲ್ಲಿ ನಿಮ್ಮ ದೇಹವನ್ನು

ಸವಿಸಿ ಕೀರ್ತಿಯನ್ನು ಪಡೆಯಿರಿ. ಆದರೆ ಅದರಲ್ಲಿಯೂ ಪಾತ್ರಾಪಾತ್ರತೆಯ ವಿಚಾರವನ್ನು ಮಾಡಿರಿ. ದುಷ್ಟರಿಗೆ ಹಿತಗೈಯುವುದರಿಂದ ಭಯಂಕರ ಕೇಡು ಸಂಭವಿಸುವುದು. ಕೊನೆಗೆ ನಾಯಕರೇ! ಸ್ವಾರ್ಥವೆಂದರೆ ನರಕ; ಪರಮಾರ್ಥವೆಂದರೆ ಸ್ವರ್ಗ; ಇಷ್ಟೇ ನನ್ನ ಹೇಳುವಿಕೆ. ಇನ್ನು ನನಗೆ ಅಪ್ಪಣೆಯಾಗಬೇಕೆಂದು ಬಿನ್ನಹ.

ನಾಯಕ—(ಕೈಜೋಡಿಸಿ) ಆಚಾರ್ಯರೇ! ಸೇವಕನ ಲಗ್ನ ಸಮಾರಂಭಕ್ಕೆ ಬಂದು ನಿಮ್ಮ ಚರಣಕಮಲಗಳ ದರ್ಶನದಿಂದ ನನ್ನನ್ನೂ ನನ್ನ ಪ್ರಜೆಗಳನ್ನೂ ಆನಂದಗೊಳಿಸಿದಿರಿ. ತಾವಿಷ್ಟು ಆತುರದಿಂದ ಈ ಸ್ಥಳವನ್ನು ಬಿಡಬಾರದೆಂದು ಎಲ್ಲರ ಪರವಾಗಿ ನಿಮ್ಮನ್ನು ಪ್ರಾರ್ಥಿಸುವೆನು.

ಪ್ರೇಮಾನಂದ—ಸುಮ್ಮನೆ ಆಗ್ರಹವನ್ನು ಮಾಡಿ ನನ್ನಿಂದ ನಿಮ್ಮ ವಿಸಂತಿಯ ವಂಚನೆಯನ್ನು ಮಾಡಿಸಬೇಡಿರಿ. ನಿಲ್ಲಲು ನನಗೆ ಅವಕಾಶವಿಲ್ಲ. ಈಗ ನಮ್ಮ ಪರಿಸ್ಥಿತಿಯು ಬಹಳ ಕಠಿಣವಾಗಿದೆ. ಧರ್ಮಗ್ಲಾನಿಯು ದಿನೇ ದಿನೇ ಹೆಚ್ಚುತ್ತಲಿದೆ. ಇಂತಹ ಶಿಥಿಲವಾದ ಸ್ಥಿತಿಯಲ್ಲಿ ಇಲ್ಲದ ಸಂಘಗಳೂ ಮತಗಳೂ ತಡೆಯಿಲ್ಲದೆ ಹಬ್ಬುತ್ತಲಿವೆ. ನಮ್ಮ ಅಜ್ಞಾನದಲ್ಲಿರುವ ಬಂಧುಗಳು ದಿನೇ ದಿನೇ ವಿಧರ್ಮಿಯರ ಹಿಡತದಲ್ಲಿ ಸಿಗುತ್ತಲಿರುವರು. ಈ ಪರಿಸ್ಥಿತಿಯಲ್ಲಿ ಬ್ರಾಹ್ಮಣರಾದ ನಮಗೆ ಯಾವ ವಿಲಾಸಗಳಲ್ಲಿಯೂ ತಡೆಯುವಂತಿಲ್ಲ. ನನಗಂತೂ ಆದಷ್ಟು ಬೇಗ ಸುಸಂಘಟಿತವಾದ ಕಾರ್ಯವನ್ನು ಕೈಕೊಂಡು ನಮ್ಮ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡಬೇಕಾಗಿದೆ. ಒಳ್ಳೇದು; ನಾನಿನ್ನು ಬರುವೆನು. (ಕುಮುದಿನಿಯು ನಮಸ್ಕರಿಸುವಳು) ತಾಯೇ! "ಅಷ್ಟಪುತ್ರ ಸೌಭಾಗ್ಯವತೀಭವ"! ಅಮ್ಮಾ! ರಾಷ್ಟ್ರದ ಪಾವಿತ್ರ್ಯವೂ ಕಲ್ಯಾಣವೂ ನಿಮ್ಮ ಪಾವಿತ್ರ್ಯದ ಮೆ [illegible] ್ಯದ ಪ್ರಭಾವವು

ಅಗ್ನಿಗಿಂತಲೂ ಸೂರ್ಯನಿಗಿಂತಲೂ ಶ್ರೇಷ್ಠವಾದದ್ದು. ಶೀಲವೇ ನಿಮ್ಮ ಧನವು. ಆದಕಾರಣ ಸದ್ಧರ್ಮಾಚರಣೆಯಿಂದ ನಡೆದು, ಅಖಿಲ ಭಾರತವನ್ನು ಉದ್ಧರಿಸು. (ಇಷ್ಟರಲ್ಲಿ ದೂತನು ಬರುವನು.)

ದೂತ— ನಾಯಕರೇ! ಚಂದ್ರಗಿರಿಯಿಂದ ಇಬ್ಬರು ಸರದಾರರು ವೈಮರೆತು ಕುದುರೆಗಳನ್ನೋಡಿಸುತ್ತ ಬರುವರು.

ನಾಯಕ— (ಆಶ್ಚರ್ಯದಿಂದ) ಏನು? ಚಂದ್ರಗಿರಿಯಿಂದ! ಅರಸರಿಂದ ಉಡುಗೊರೆಗಳನ್ನು ಮುದ್ದುರಂಗರಾಯನು ನಿನ್ನೇ ತಂದಿರುವನಲ್ಲ? ಈಗೇಕೆ ಪುನಃ ಇವರು ಬರುವರು? (ಚಿಂತೆಯಿಂದ ಪ್ರೇಮಾನಂದನಿಗೆ) ಸ್ವಾಮಿಗಳೇ! ಪ್ರಭುಗಳಿಗೆ ಆಪತ್ತು ಒದಗಿರಬಹುದೇನು? ಹೀಗೆಯೇ ಏನಾದರಿರಬಹುದು. ಯಾಕಂದರೆ ನನ್ನ ಮನಸ್ಸಿನಲ್ಲಿ ಯಾವಾಗಲೂ ಇದು ಕಟಿಯುತ್ತಿತ್ತು. ಅಯ್ಯೋ! ನಾನು ಪಾಪಿಯು; ವಿಷಯ ಸುಖಕ್ಕೋಸ್ಕರವಾಗಿ ಪೂರ್ಣವಿಚಾರಮಾಡದೆ ಅಲ್ಲಿಂದ ಹೊರಟೆನಲ್ಲ! (ಇಷ್ಟರಲ್ಲಿ ತಿರುಮಲರಾಯನು ಬಂದು ಒಂದೂ ಮಾತನಾಡದೆ ಕಣ್ಣೀರುದರಿಸುತ್ತ ನಿಲ್ಲುವನು.)

ನಾಯಕ— ತಿರುಮಲರಾಯಾ! ನೀನು ಹೀಗೆ ಹತಾಶನಾಗಿ ನಿಲ್ಲುವುದು ನಿನ್ನ ವೀರ ವೃತ್ತಿಗೆ ಸಲ್ಲುವುದಿಲ್ಲ. ಏನು? ನಮ್ಮರಸರನ್ನು ಹಗೆಯುವ ಜಗರಾಯನು ತನ್ನ ಕುನಿಸಿನಿಂದ ಏನಾದರೂ ಪುಂಡತನವನ್ನು ಎಬ್ಬಿಸಿರುವನೋ? ಹಿಂಜರಿಯಬೇಡ; ಬೇಗ ಹೇಳು. ಹಾಗಿದ್ದ ಪಕ್ಷದಲ್ಲಿ ನಾನು ನಿಮ್ಮನ್ನು ದೂಷಿಸುವುದಿಲ್ಲ. ಎಲ್ಲರಿಗಿಂತಲೂ ನಾನೇ ಪಾಪಿಯು. ಹೇಳು, ಬೇಗ ಹೇಳು.

ತಿರುಮಲರಾಯ—ಮಹಾರಾಜರೇ! ಅರಮನೆಯಿಂದ ನೀವು ಹೊರಗಾಗುತ್ತಲೇ ಜಗರಾಯನ ಪುಂಡತನವು ಹೆಚ್ಚಾಗಿ ಕೊನೆಗೆ ಅವನು ಕಪಟತನದಿಂದ ಪ್ರಭುಗಳನ್ನು ವಶಪಡಿಸಿಕೊಂಡು ತನ್ನ ಕಾರಸ್ಥಾನವನ್ನು ಸಾಧಿಸಿದನು.

ನಾಯಕ— (ಆವೇಶದಿಂದ) ಧಿಃಕ್ಕಾರ, ಎಚ್ಚಾ! ನಿನ್ನ ಜನ್ಮಕ್ಕೆ ಶತಶಃ ಧಿಃಕ್ಕಾರ!! ರಾಜನಿಷ್ಠೆಯ ಗರ್ವವನ್ನು ತಾಳುವ ನೀನು ವಿಷಯಸುಖದಲ್ಲಿ ಮೈಮರೆತು ರಾಜಸೇವೆಯ, ಹೊಸ ದಾಗಿದ್ದ ರಾಜ್ಯವ್ಯವಸ್ಥೆಯ ಮಹತ್ತ್ವವು ಮತ್ತು ಪವಿತ್ರ ತಮ ಕರ್ತವ್ಯದಿಂದ ಪರಾಙ್ಮುಖನಾದೆಯಾ! ಏನೋ ಕನ್ನಡಿಗರ ಪೂರ್ವ ಪುಣ್ಯದಿಂದಲೇ ರಾಹು ಕೇತುಗಳ ಹಾವಳಿಗೊಳಗಾಗದೆ ನಮ್ಮ ಚಂದ್ರನು ಇನ್ನೂ ತನ್ನ ಗಿರಿಯಲ್ಲಿ ಎಂಥ ಸಂದುಕಟ್ಟಿನಾವಸ್ಥೆಯಲ್ಲಿ ನಮ್ಮ್ರನ್ನಾಳಿ ಬಾಳುತ್ತಿರುವನು. ಇಂತಹ ಸಮಯದಲ್ಲಿ ಅವನ ಸ್ವಾಸ್ಥ್ಯ ಕ್ಕಾಗಿ ಹೆಣಗಾಡದೆ ಎಂತಹ ರಾಷ್ಟ್ರಘಾತಕ್ಕೆ ಕಾರಣ ನಾದೆಯಾ!! ಆಹಾ! ತಾಳೆನು; ಧರಣೀಮಾತೇ! ಧರ್ಮ, ನೀತಿ, ದೇಶ, ಕಾಲ, ಪರಿಸ್ಥಿತಿ ಇವುಗಳನ್ನು ಸ್ವಾರ್ಥ ಸುಖಕ್ಕಾಗಿ ಕಾಲಲ್ಲಿ ತುಳಿದ ಈ ದೇಶದ್ರೋಹಿಯನ್ನು ನಿನ್ನ ಪಾದಗಳಲ್ಲಿ ತುಳಿದೂ ತುಳಿದು ಪಾತಾಳಕ್ಕೊತ್ತಿಬಿಡು. ಆಹಾ! ವಿಷಯದ ಸೆರೆಯಾಳಾದವನು ಪರಕೀಯರ ಲತ್ತಾಪ್ರಹಾರಕ್ಕೆ ಹೇಗೆತಾನೇ ಪಾತ್ರನಾಗಲಾರನು. ಭೂಮಾತೇ! ಇಂತಹ ಸಂಯಮಹೀನನ ಭಾರದಿಂದ ಹಗುರಾಗು. (ಸಂತಪ್ತನಾಗಿ ನಿಲ್ಲುವನು. ಎಲ್ಲರೂ 'ತಡೆಯಿರಿ ತಡೆಯಿರಿ' ಎಂದು ಸಮಾಧಾನಪಡಿಸುವರು, ಆಗ ಮುದ್ದುರಂಗರಾಯನು ಎದ್ದು ಮೆಲ್ಲನೇ ನಾಯಕನ ಬಳಿಯಲ್ಲಿ ನಿಲ್ಲುವನು. ಇದನ್ನು ಕುಮುದಿನಿಯು ನೋಡುವಳು.)

ನಾಯಕ— ತಡೆಯಲಿ! ಇನ್ನೇನೆಂದು ತಡೆಯಲಿ? ಸಜ್ಜನರೇ! ತಡೆಯ ಬೇಕಾದ ವೇಳೆಯಲ್ಲಿ ಮಡದಿಯ ವಿಷಯದಲ್ಲಿ ತೊಡಗಿ ಕಡೆಗೆ ಇಡೀ ಕನ್ನಡಿಗರಿಗೆ ಕೆಡುಕನ್ನುಂಟುಮಾಡಿದ ಈ ಜಡಜೀವನವನ್ನು ತಡೆಯಬೇಕೇ?

ಮುದ್ದುರಂಗರಾಯ—(ತನ್ನ ಜನರಿಗೆ ಕಣ್ಣುಸನ್ನೆಯಿಂದ ಸೂಚಿಸಿ) ನಾಯಕರೇ! ಇಂತಹ ಉತ್ಸವ ಸಮಾರಂಭದಲ್ಲಿ ಹೀಗೆ ಖಿನ್ನರಾಗ.....

ನಾಯಕ— ಇದಕ್ಕೆ ನೀವು ಶೋಕವೆನ್ನುವಿರೋ? ಸಹೃದಯಿಯಾದವನೇ ಶೋಕಿಸಬಲ್ಲನು. ನನಗೇನು ಹೃದಯವಿದೆಯೋ? ಕಣ್ಣೀರಿಡುತ್ತಿರುವ ಕನ್ನಡ ತಾಯಿಯ ಗೋಳಿನಿಂದೇನಾಗದವನಿಗೆ ಹೃದಯವೆಲ್ಲಿರುವುದು? ಇದ್ದರೂ ಅದು ಅವನ ಹೃದಯವಲ್ಲ, ಶುದ್ಧ ಕಲ್ಲಿನ ಬಂಡೆಯು. ತಿರುಮಲರಾಯಾ! ಈ ಅಧಮನೆಡೆಗೆ ನೀನಾವ ಆಸೆಯಿಂದ ಬಂದೆಯೋ? ಶಿವ, ಶಿವ; ಎಚ್ಚಾ! ಏನಿದು ನಿನ್ನ ದುಃಸ್ಥಿತಿಯು! ಎಂತಹ ಅಧರ್ಮವಿದು!! ಎಷ್ಟು ಭಯಂಕರ ದ್ರೋಹವಿದು!!! ಹಾಯ್! ನರಕಗಾಮಿ! ಕನ್ನಡಿಗರ ಉಜ್ವಲ ಕೀರ್ತಿಗೆ ಕಲಂಕವನ್ನು ಹಚ್ಚುವಿಯಲ್ಲ? (ತಲೆಯನ್ನು ಬಗ್ಗಿಸಿ ನಿಲ್ಲುವನು. ಎಲ್ಲರೂ ಅವನನ್ನು ಸಮಾಧಾನಗೊಳಿಸಲು ಮಗ್ನರಾಗುವರು. ಈ ಸಂಧಿಯನ್ನು ಸಾಧಿಸಿ ಮುದ್ದುರಂಗರಾಯನು ತನ್ನ ಜನರಿಗೆ ಒರೆಗಳೊಳಗಿಂದ ಕಠಾರಿಗಳನ್ನು ಹಿರಿಯಲು ಕೈಸನ್ನೆಯಿಂದ ಸೂಚಿಸಿ ಖಡ್ಗವನ್ನು ತೆಗೆಯುವನು. ಕುಮುದಿನಿಯು ಇದನ್ನು ನೋಡಿ ತನ್ನ ಉಡಿಯೊಳಗಿಂದ ಕಟ್ಯಾರಿಯನ್ನು ತೆಗೆದು ಅವನ ಬಳಿಯಲ್ಲಿ ಹೋಗಿ ನಿಲ್ಲುವಳು.)

ನಾಯಕ— ಮಿತ್ರರೇ! ಸರಿಯಿರಿ; ಜನಾರ್ದನನ್ನು ಮನ್ನಿಸದ ಮನುಷ್ಯನೂ, ಪತಿಯನ್ನು ಪೂಜಿಸದ ಪತ್ನಿಯೂ, ರಾಜನನ್ನು ರಕ್ಷಿಸದ ಪ್ರಜೆಯೂ ಇದ್ದರೂ ಸತ್ತಹಾಗೇ! ಆದಕಾರಣ ಶವ ಸಮಾನವಾದ ಈ ದೇಹವನ್ನು ಸ್ಪರ್ಶಿಸಬೇಡಿರಿ. (ಇಷ್ಟರಲ್ಲಿ ಮುದ್ದುರಂಗನು ನಾಯಕನ ಕುತ್ತಿಗೆಯ ಮೇಲೆ ಖಡ್ಗವನ್ನೆತ್ತಲು ಹಿಂದಿನಿಂದ ಕುಮುದಿನಿಯು ಅವನ ಬೆನ್ನಿನಲ್ಲಿ ಜಂಬೆಯನ್ನು ಚುಚ್ಚುವಳು. ಇದನ್ನು ನೋಡಿ ಅವನ ಜನರು ಓಡುವರು.)

ಕುಮುದಿನಿ— (ಕೈಜೋಡಿಸಿ) ಹೃದಯೇಶ್ವರರೇ! ವೀರಶಿಖಾಮಣಿಗಳೇ! ಅಭಾಗಿಯಾದ ನನಗಾಗಿಯೇ ನಮ್ಮ ರಾಯರಿಗೂ ನಿಮಗೂ ನಮ್ಮ ನಾಡಿಗೂ ಇಂತಹ ಘೋರತರ ಪ್ರಸಂಗವೊದಗಿದೆ. ನನ್ನಿಂದಲೇ ಈ ಮಂಗಲ ಕಾರ್ಯಕ್ಕೆ ರಕ್ತಪಾತದ ಸ್ವರೂಪವು ಬಂದಿದೆ. ಇಂತಹ ಸಮಯದಲ್ಲಿ ನಾರಿಯ ಮರ್ಯಾದೆ

ಯನ್ನು ವಿಶಾರಿವಮಾತುಗಳನ್ನಾಡಲಿಚ್ಛಿಸುವೆನು. ಅದಕ್ಕಾಗಿ ಕ್ಷಮಿಸಿ. ಇಂತಹ ಆಪತ್ತುಗಳೊದಗಿದ ಸಮಯಗಳಲ್ಲಿ ನಮ್ಮ ಕರ್ನಾಟಕ ಸ್ತ್ರೀರತ್ನಗಳೇನು ಕಡಿಮೆ ಶೌರ್ಯ ವನ್ನು ತೋರಿಸಿಲ್ಲ. ಚಕ್ರವರ್ತಿ ಪುಲಕೇಶಿಯ ಸೊಸೆಯಾದ ವಿಜಯಾದೇವಿಯವರೂ, ಇತರ ಸಾಮ್ರಾಜ್ಞಿಗಳಾದ ವೈರಳಾದೇವಿ, ಅಕ್ಕಾದೇವಿ ಈ ನಮ್ಮ ಕನ್ನಡಮಾತೆಯ ಮುದ್ದು ಮಹಿಳೆಯರು ಖ್ಯಾತಿಯನ್ನು ಹೊಂದಿದ್ದನ್ನು ನೀವು ಬಲ್ಲಿರಷ್ಟೆ. ಅವರಂತೇ ವೀರಾಗ್ರೇಸರರಾದ ನಾಯಕರ ಪಾಣಿಗ್ರಹಣವನ್ನು ಮಾಡಿದ ಈ ಕುಮುದಿನಿಯು ನಮ್ಮ ದೊರೆಯವರ ಮೇಲಿನ ದಾಳಿಯನ್ನು ನದೆಬಡೆಯಲು, ಈ ಶರೀರವನ್ನು ಸವಿಸಿ ತಕ್ಕ ಪ್ರಾಯಶ್ಚಿತ್ತವನ್ನು ಗೈಯು ವುದರ ವಿನಾ ಆವಪ್ರಕಾರದ ಸಂಸಾರಸುಖಕ್ಕೆ ಒಳಗಾಗುವು ದಿಲ್ಲೆಂಬ ಪ್ರತಿಜ್ಞೆಯನ್ನು ಮಾಡುವಳು. ಹೂಂ; ತಡ ವೇಕೇ? ವೀರರೇ! ಬೇಗ ಖಡ್ಗಪಾಣಿಗಳಾಗಿರಿ.

ನಾಯಕ— (ಅವಳನ್ನಪ್ಪಿಕೊಂಡು) ಆಹಾ! ಪುರುಷನಿಗೆ ಪತ್ನಿಯು ಪರಮೇಶ್ವರದತ್ತ ಮೈತ್ರಿಯೆಂಬ ತತ್ವವು ಸತ್ಯವು. ಪ್ರಿಯೇ! ನಿನ್ನ ಒಂದೊಂದು ಮಂಜುಳ ಶಬ್ದವು ನನ್ನ ಮೃತಪ್ರಾಯ ವಾದ ಪಂಚಪ್ರಾಣಗಳಲ್ಲಿ ಸಂಜೀವನಿಯಂತೆ ನವಜೀವನ ವನ್ನುಂಟುಮಾಡಿತು. ಇಂತಹ ಗೃಹಲಕ್ಷ್ಮಿಯು ಸನ್ನಿಧಾನ ದಲ್ಲಿರಲು, ನಾನಿನ್ನು ಕೈಕೊಳ್ಳುವ ಕಾರ್ಯದಲ್ಲಿ ಯಾವ ಎಡತಡೆಗಳು ಬಂದರೂ, ಅವುಗಳನ್ನು ಕಾಲಲ್ಲಿ ಒದ್ದು, ಜಯವಂತನಾಗುವೆನೆಂಬ ಆತ್ಮವಿಶ್ವಾಸವು ನನ್ನಲ್ಲಿ ತಾನೇ ಉತ್ಪನ್ನವಾಗುತ್ತಲಿದೆ. (ತನ್ನ ಆಯುಧಕ್ಕೆ ಉದ್ದೇಶಿಸಿ) ಎಲೈ ವೀರ ವರವೇ! ನಮ್ಮ ರಾಯರ ರಕ್ಷಣೆಗಾಗಿ ಯಾವ ತ್ಕಾಲದಲ್ಲಿಯೂ ನೀನು ನಿನ್ನ ವಿದ್ಯುತ್ ಶಕ್ತಿಯಿಂದ ಶತ್ರುಗಳ ಕಂಗಳನ್ನು ಕುಕ್ಕಿಸಿರುವೆ. ನಿನ್ನ ತೀಕ್ಷ್ಣವಾದ ಅಲಗಿನಿಂದ ಅವರನ್ನು ರಕ್ತಸಾಗರದಲ್ಲಿ ಮುಳುಗಿಸಿರುವೆ.

ಈಗಲೂ ಮಾತ್ರ ನಿನ್ನ ವರದಹಸ್ತವು ನನ್ನ ಮೇಲೆ ಪೂರ್ಣವಾಗಿರಲೆಂದು ನಿನ್ನನ್ನು ಪ್ರಾರ್ಥಿಸುವೆನು.

ಪ್ರೇಮಾನಂದ—ಆಹಾ "ಅರ್ಧಂ ಭಾರ್ಯಾ ಮನುಷ್ಯಸ್ಯ ಶ್ರೇಷ್ಠತಮ ಸಖಾ" ಈ ವೇದ ವಾಕ್ಯದ ಸತ್ಯತ್ವವು ನನಗಿಂದು ಪ್ರತ್ಯಕ್ಷವಾಗಿ ನಿದರ್ಶನಕ್ಕೆ ಬಂದಿತು. ನಾಯಕರೇ! ಜಗರಾಯನೇ ಬಹುಶಃ ಈ ಮುದ್ದುರಂಗನನ್ನು ನಿಮ್ಮ ನಾಶಕ್ಕಾಗಿ ಕಳುಹಿಸಿರಬಹುದು. ಆದರೆ ನಿಜವಾಗಿ ನೀವು ಧನ್ಯರು. ಇಂತಹ ಶೂರ ಸ್ತ್ರೀಯು ನಿಮ್ಮ ಸಹಧರ್ಮಿಣಿಯಾಗಿರುವಳು. ಅಹುದು; ಮಿತ್ರುತ್ವವಾಗಬೇಕಾದರೆ ಎರಡೂ ವ್ಯಕ್ತಿಗಳು ಸರಿಸಮಾನಶೀಲರೇ ಇರಬೇಕು. (ಕುಮುದಿನಿಗೆ) ಜಗದಂಬೇ! ನಿನ್ನ ದರ್ಶನದಿಂದ ನಮ್ಮಲ್ಲಿಯೂ ಇಂದು ಅದ್ವಿತೀಯ ಸ್ಫೂರ್ತಿಯುಂಟಾಗಿದೆ. ಇನ್ನು ನಾನೂ ನಮ್ಮ ವಿಸ್ಕಳಿತವಾದ ಜನಾಂಗದಲ್ಲಿ ಜಾಗೃತಿಯನ್ನುಂಟುಮಾಡಲು ಒಳ್ಳೇ ಹುರುಪಿನಿಂದ ಮುಂದರಿಯುವೆನು.

ಕುಮುದಿನಿ— ಮಹನಿಯರೇ! ನಾನು ಇಷ್ಟು ಸ್ತುತಿಗೆ ಪಾತ್ರಳಲ್ಲ. ನಿಮ್ಮಂಥ ದೇವಬ್ರಾಹ್ಮಣರ ಆಶೀರ್ವಾದವೊಂದಿರಬೇಕು. ನಿಮ್ಮ ಪ್ರೇರಣೆಯಿಂದ ನಾವು ಹೆಚ್ಚು ಕಾರ್ಯದಕ್ಷರಾಗಿ ನಮ್ಮ ದೇಹಗಳನ್ನು ಸಾರ್ಥಕಗೊಳಿಸುವೆವು.

ದೂತ— (ಪ್ರವೇಶಿಸಿ) ನಾಯಕರೇ! ಶತ್ರುಪಕ್ಷದವರು ನಮ್ಮ ದುರ್ಗವನ್ನು ಮುತ್ತಿರುವರು.

ಪ್ರೇಮಾನಂದ—ನಾಯಕರೇ! ಜಾಗೃತೆ. ಮೊದಲು ಈ ನರಿಗಳನ್ನು ಓಡಿಸುವಾ. ತಿರುಮಲರಾಯಾ! ನಾಯಕರ ಸಹಾಯಕ್ಕಾಗಿ ನಾವುಗಳೆಲ್ಲರೂ ಟೊಂಕಕಟ್ಟುವಾ, ನಡೆಯಿರಿ. (ಎಲ್ಲರೂ ಹೋಗುವರು.)

ಎರಡನೇ ಅಂಕ ಸಮಾಪ್ತ.

೩ ನೇ ಅಂಕ

೧ ನೇ ನೋಟ

[ಬಂದಿಖಾನೆಯಲ್ಲಿ ರಂಗರಾಯನು ಕುಟುಂಬ ಸಹಿತನಾಗಿರುವನು.
ರಾಣಿಯು ತನ್ನ ಕೂಸನ್ನಾಡಿಸುತ್ತಿರುವಳು.]

ರಾಣಿ— (ರಾಗ: ಶಂಕರಾಭರಣ ; ತ್ರಿಪುಟತಾಳ : ಜೋಜೋ ಶ್ರೀ ಕೃಷ್ಣಪರಮಾನಂದ.)

ಜೋಜೋ ಜೋಜೋ ನಾಗಲಾಂಬಿಕೆ
ಜೋಜೋ ಜೋಜೋ ರಾಜಕುಮಾರಿ ॥ ಜೋಜೋ
॥ ಪಲ್ಲ ॥

ತುರಂಗದೊಳೆಂತು ತೊಟ್ಟಿಲ ತರಲಿ।
ಅರಳಿದ ಹೃದಯದೋಳ್ ತೂಗುವೆ ನಿನ್ನ ॥
ಕರವೆರಡು ನಿಲಿಸುವೆ ಆಕಾಶದಲ್ಲಿ।
ನರಹರಿಯೆ ಗತಿಯೆಂದು ಪಾಡುವೆ ನಿನ್ನ ॥೧॥

ಜಗದೀಶ ಪಾದಗಳಾಧಾರ ನಿನಗೆ।
ಖಗರಾಜ ಪ್ರಭು ನಿನ್ನ ಕಾವಲುಗಾರ ॥
ಮಗು ನಿನಗೆ ಭಯವಿಲ್ಲ ಚಿಂತಿಸಬೇಡ।
ನಗು ತುಂಬ ಮುಖದಿಂದ ಆಡಿನ್ನು ಕಂದ ॥೨॥

ದುಃಖಾಗ್ನಿಯಿಂದ ಪಾಲು ಒಣಗಿವೆ।
ಬಿಕ್ಕುಗಳಿಂದ ಬಾಯಾರಿ ಹೋಗುವಿ ॥
ಉಕ್ಕುತ ಬರುತಿರುವ ಕಣ್ಣೀರ ಕುಡಿದು।
ಅಕ್ಕವ್ವ ನೀನಿನ್ನು ತೃಷ್ಣೆಯ ತಾಳು ॥೩॥

ನನ್ನಶ್ರುಗಳಮೃತಪಾನದಿ ನೀನು।
ಚೆನ್ನಾಗಿ ಸುಖದ ನಿದ್ರೆಯ ಮಾಡು ॥
ನಿನ್ನಾ ಶಾಂತಿಯ ಸ್ವಪ್ನದೊಳಗೆ।
ಪನ್ನಗಶಯನನು ನಮಗಾಗಿ ಬೇಡು ॥ ಜೋಜೋ ॥೪॥

ಅಯ್ಯೋ! ನಮ್ಮಗಳಿಗೆಲ್ಲ ಎಂತಹ ದುಃಸ್ಥಿತಿಯು ಪ್ರಾಪ್ತವಾಯಿತಲ್ಲ! ಕನ್ನಡಿಗರರಸು ಮನೆತನದವರು ಸೆರೆ ಮನೆಯಾಳಾದರೇ!! ಹೊಟ್ಟೆಗೆ ಸರಿಯಾಗಿ ಆಹಾರವಿಲ್ಲದೆ ನೋಡಿರಿ! ನನ್ನ ಕಂದವ್ವನ ಮುಖವು ಎಷ್ಟು ಬಾಡಿ ಹೋಗಿದೆ. ಇವಳ ಕುಣಿದಾಟಕ್ಕೆ ಅರಮನೆಯೂ ಸಾಲು ತ್ತಿದ್ದಿಲ್ಲ. ಆದರೆ ಇಂದು ಸೆರೆಮನೆಯಲ್ಲಿ ಇವಳ ಎಲ್ಲ ಶಕ್ತಿಯು ಎಲ್ಲಿ ಅಡಗಿದೇ? ಅಯ್ಯೋ! ನಾನಿದನ್ನೆಲ್ಲ ನೋಡಿ ಎಷ್ಟೆಂದು ದುಃಖಿಸಲಿ!

ಶ್ಯಾಮಭಟ್ಟ—ಮಹಾರಾಣಿಯವರೇ! ಹೀಗೆ ಅಶುಭವನ್ನು ನುಡಿಯ ಬಾರದು. ಭಯಕೃತ್ ಭಯನಿವಾರಕನು ಎಲ್ಲವನ್ನು ಬಲ್ಲವನು. ದೇವಾಸುದೇವತೆಗಳೂ ಅಲ್ಪ ಸ್ವಲ್ಪ ಪ್ರಮಾಣ ದಲ್ಲಿ ಇಂತಹ ಸಂಕಟಗಳನ್ನು ಅನುಭವಿಸುವರು. ಅಮ್ಮಾ! ನೀವು ಕನ್ನಡ ಲಕ್ಷ್ಮಿಯು. ನೀವೇ ಹೀಗೆ ಎದೆಗುಂದ ಬೇಕೇ? ಸರಿಯಲ್ಲ. ಸ್ವಲ್ಪ ತಾಳ್ಮೆಯನ್ನು ಹೊಂದಿರಿ. ಈ ಪರಿಯಾಗಿ ನೀವೇ ನಿರಾಶೆಯಿಂದ ಕುಳಿತರೆ ನಮ್ಮಂಥವರ ಪಾಡೇನು? ರಾಜಾಧಿರಾಜರೇ! ನೀವೂ ಭ್ರುಮಿಷ್ಠರಂತೆ ಚಿಂತೆಯಿಂದ ಗ್ರಸ್ತರಾಗುವಿರೋ! ಎಲ್ಲ ಕನ್ನಡಿಗರ ಸಂಸಾರ ಸಾರಥಿಗಳು ಈ ಪರಿಯಾಗಿ ಹತಾಶರಾದಮೇಲೆ ದಿಕ್ಕುಪಾಲಾಗಿ ಬಟ್ಟಬೈಲಲ್ಲಿ ಬಳಲುತ್ತಿರುವ ನಾವುಗಳು ಎಷ್ಟೆಂದು ಎದೆಗುಂದಬೇಕು! ಪ್ರಭುಗಳೇ! ನಿರಾಶೆ ಯನ್ನು ಬಿಡಿರಿ. ಹೊಸ ಹುರುಪಿನಿಂದ ನಮ್ಮನ್ನು ಜಾಗ್ರತೆಗೊಳಿಸಿರಿ.

ರಂಗರಸರು— ಶಾಸ್ತ್ರಿಗಳೇ! ಅದಕ್ಕೆ ನಾನೆಷ್ಟು ಸ್ವತಂತ್ರನು. ಪೂರ್ವ ಜನ್ಮದಲ್ಲಿ ಗಳಿಸಿಟ್ಟ ಕರ್ಮಗಳನ್ನು ಭೋಗಿಸದೆ ಗತ್ಯಂತರ ವಿಲ್ಲವಲ್ಲ? ಪಾಲಿಗೆ ಬಂದದ್ದು ಪಂಚಾಮೃತವು. ಭಾರ್ಯೇ! ಈ ಲೋಕದಲ್ಲಿ ಮಾನವರಿಗೆ ಸರ್ವಕಾಲದಲ್ಲಿಯೂ ಸುಖ ವಿಲ್ಲ. ಇದಂತೂ ಸಾಮಾನ್ಯ ನಿಯಮವು. ಆದರೆ ಇಂದಿನ

ಈ ನಮ್ಮ ಸಂಕಟಗಳು ನಮ್ಮನ್ನು ಅಂತ್ಯಕಾಲದವರೆಗೂ ಅಂಟಿರುವವೆಂದು ತಿಳಿದರೂ ಎಲ್ಲಿಯವರೆಗೆ (ಚಿನ್ನನೆಡೆಗೆ) ಈ ಬಾಲಚಂದ್ರನೂ, ನಮ್ಮ ಎಚ್ಚ ನಾಯಕನಂಥ....

ಜಗರಾಯ—(ಪ್ರವೇಶಿಸಿ) ಎಚ್ಚನಾಯಕನಂಥ! (ತುಚ್ಛತನದಿಂದ) ಹುಲಿಯು ಗವಿಯಲ್ಲಿ ಸಿಲುಕಿಯೂ, ರಂಗಾ! ಮುಕ್ತಿಗಾಗಿ ಹಂಬಲಿಸುವಿಯಲ್ಲ; ಎಷ್ಟು ಅಜ್ಞಾನವಿದು! ಎಲೋ! ನನ್ನ ಮೊಮ್ಮಗನು ಬರೀಹೆಸರಿಗೆ ಅರಸನು. ಆದರೆ ವಸ್ತುತಃ ಚಂದ್ರಗಿರಿಯ ಇಂದ್ರನು ನಾನಿರುವೆನು. ಎಲ್ಲ ಸರದಾರರು ನನ್ನ ಸೇವೆಯಲ್ಲಿ ತತ್ಪರರಿರುವರು. ಚಂದ್ರಗಿರಿಯ ಬಂಗಾರವೆಲ್ಲವೂ ನನ್ನ ಬಂಡಾರ ಖಾನೆಯಲ್ಲಿ ತುಂಬಿತು. ಇನ್ನು ಆ ನಿನ್ನ ನಾಯಕನೆಡೆಗೆ—ಅಲ್ಲಲ್ಲ ಬೇಡನ ನಾಯಿಯಹಾಗೆ ಆವಾಗಲೂ ಬೊಗಳುವ—ನಾಯಿಯೆಡೆಗೆ ಒಬ್ಬ ಬೇಟೆಗಾರನನ್ನು ಕಳುಹಿಸಿರುವೆನು. ಅವನೀಗಲೇ ಅದನ್ನು ನಿನ್ನೆದುರಿಗೇ ಎಳೆದು ತರುವನು. ಆಮೇಲೇನು? ಎಷ್ಟಾದರೂ ಸಾಕಿದವರ ಬಾಲ ಬಡೆಯುವ ಆ ನಾಯಿಯಿಂದಲೇ ನಿನ್ನು ಬೇಟೆಯನ್ನಾಡುವೆನು....

ವೀರನರಸಿಂಹ—ಹೇಡಿ! ದುಷ್ಟರ ಶಾಸನದ, ಪ್ರಾಣಿಗಳ ಪಾಲನೆಯ ಪವಿತ್ರ ವ್ರತವನ್ನು ಕೈಕೊಂಡಿರುವ ಆ ವೀರಶಿರೋಮಣಿಯು ನಿನ್ನಂಥ ವೃತ್ತಿಹೀನ, ದರಿದ್ರ, ಜಗಚ್ಛತ್ರು, ಪಾಪಾತ್ಮನ ಕಪಟ ಕಾರಸ್ಥಾನಕ್ಕೆ ಕೈಭಾರವನ್ನೀಯುವನೆಂಬ ಆಶೆಯನ್ನು ಸ್ವಪ್ನದಲ್ಲಿಯೂ ಮಾಡಬೇಡ.

ಜಗರಾಯ— ರಂಗಾ! ನಿನ್ನ ಮಗನ ಬೊಗಳಾಟವನ್ನು ನಿಲ್ಲಿಸು. ಇಲ್ಲದಿದ್ದರೆ ನಾಳಿನ ಮರಣವು ಇಂದೇ ಬಂತೆಂದು ತಿಳಿ....

ರಂಗರಸರು— ಎಲಾ ಮುದಿಗೂಬಿಯೇ! ಮೊದಲು ನಿನ್ನ ಬೊಗಳಾಟವನ್ನು ನಿಲ್ಲಿಸು. ಮರಣದ ಭಯವಾರಿಗೋಸ್ಕರ? ಧರ್ಮಭೂಮಿಯಾದ, ಪಿತೃಭೂಮಿಯಾದ, ಭಾರತದ ಪವಿತ್ರ

ಹೋಮದಲ್ಲಿ ತನ್ನ ಜೀವಸ ಸರ್ವಸ್ವವನ್ನು ಅರ್ಪಣೆ ಮಾಡಿದ ಆರ್ಯಪುತ್ರನಿಗೆ ಮರಣದ ಭಯವನ್ನು ತೋರಿಸುವಿಯಾ? ಸ್ವಬಾಂಧವರ ಸೇವೆಗಾಗಿ ಸ್ವಾರ್ಥವನ್ನು ಅಳಿದ ಮಹಾತಪಸ್ವಿಗಳಾದ ಮಾಧವಾಚಾರ್ಯರ ವರದ ಹಸ್ತವಿದ್ದ ಮನೆತನದಲ್ಲಿ ಜನ್ಮಿಸಿದವನಿಗೆ, ಕರ್ಮಯೋಗದಲ್ಲಿ ಕೊಲ್ಲುತ್ತ ಕಾಲವಶರಾಗುವ ವೀರ ಕನ್ನಡಿಗರ ವಂಶದಲ್ಲಿ ಹುಟ್ಟಿದವನಿಗೆ ಮರಣದ ಭಯವನ್ನು ತೋರಿಸುವಿಯಾ! ಈ ಭಯವಾರಿಗೇ? ನಿನ್ನಂಥ ಬಚ್ಚುಬಾಯಿಯ ಮುದುಕಿಗೆ ಇದನ್ನು ತೋರಿಸು. ಎಲಾ! ದಾಳಿಗಾರರನ್ನು ಗೆದ್ದರೇಯೇ ಬಾಳಬೇಕು ಇಲ್ಲದಿದ್ದರೆ ಕಾಲಶಾಂತಿಯನ್ನು ತಾಳಬೇಕು ಎಂಬ ನನ್ನ ತಂದೆಯ ಮಂತ್ರೋಪದೇಶವನ್ನು ಸದಾ ಪಠಿಸುತ್ತಲಿರುವ ನನಗೇಕೆಂದು ಇದನ್ನು ತೋರಿಸುವೇ? (ನಕ್ಕು) ನಿನ್ನ ಮಾತುಗಳನ್ನು ಕೇಳಿದರೆನಗೆ ನಗೆ ಬರುವದು (ಎಲ್ಲರೂ ನಗುವರು. ಚಿನ್ನವೇಂಕಟನು ಬಿದ್ದು ಬಿದ್ದು ನಗುವನು.)

ಜಗರಾಯ—ಎಲಾ ಹುಡುಗಾ! ನೀನೂ ನಗುವಿಯಾ! ನಾನೇನು ನಿನಗೆ ದೂರಿನವನಲ್ಲ! ನಿನಗೆ ಹಿರಿಯನಿರುವೆನು. ನನ್ನನ್ನು ಅಪಹಾಸ್ಯಮಾಡಿ ವ್ಯರ್ಥ ನನ್ನ ಕೋಪಕ್ಕೆ ಪಾತ್ರನಾಗಬೇಡ.

ಚಿನ್ನವೇಂಕಟ—ಅಹುದು ಮುತ್ತಯ್ಯ! ಯಾವ ಸಿಂಹನ ಸ್ಮಿತವದನದಿಂದ ನಿನ್ನ ಸರ್ವಾಂಗವೂ ಈಗ ದಹಿಸುತ್ತಲಿದೆಯೋ, ಅದೇ ಸಿಂಹನ ಶಿಶುವು ನಾನು. ಅಲ್ಲದೆ ಜಗರಾಯಾ! ಎಲ್ಲಿ ಧರ್ಮಾಧರ್ಮದ ಪ್ರಶ್ನೆಯುದ್ಭವಿಸುವದೋ ಅಲ್ಲಿ ಗುರು ಹಿರಿಯರೆಂಬ ಭೇದಭಾವವನ್ನಿಡಬಾರದೆಂದು ನಾನು ತಿಳಿಯುವೆನು. ಲವಕುಶರು ಧರ್ಮರಕ್ಷಣಾರ್ಥವಾಗಿಯೇ ಪ್ರತ್ಯಕ್ಷ ತಮ್ಮ ಜನಕನೊಡನೆ ಕಾದಾಡಲಿಲ್ಲವೇ? ಆ ವೀರ ಬಭ್ರುವಾಹನನು ಧರ್ಮಕ್ಕಾಗಿಯೇ ಅಲ್ಲವೇ ತನ್ನ

ತಂದೆಯೊಡನೆ ಯುದ್ಧವನ್ನು ಮಾಡಿದ್ದು? ನೀನು ಇವೆಲ್ಲವು ಗಳನ್ನು ತಿಳಿದವನೇನೋ? ಛಿ; ಪಶುಸಮಾನನಾದ ನೀನು, ನಿನಗೆಲ್ಲಿಂದ ತಿಳಿಯಬೇಕೋ?

ಜಗರಾಯ—(ದ್ವೇಷದಿಂದ) (ಸ್ವಗತ) ಸಾಕು; ಜಗರಾಯಾ! ಈ ಗೇಣು ಚೋಟುಗಳಿಂದಲೂ ಹೀಗೆ ಅಣಕದ ಮಾತುಗಳನ್ನಾಡಿಸಿ ಕೊಳ್ಳುವಿಯಾ? ಮಾಡು; ಈ ಕುಟುಂಬದ ನಿರ್ಮೂಲ ವನ್ನು ಆದಷ್ಟು ಬೇಗ ಮಾಡು. (ಸ್ವಲ್ಪ ಯೋಚಿಸಿ) ನಿಲ್ಲು. ಹೀಗೆ ಎದೆಗುಂದಬೇಡ. ಬಲೆಯಲ್ಲಿರುವ ಸಿಂಹಗಳು ಒದರಾಡುವ ವಿನಾ ಮತ್ತೇನನ್ನು ಮಾಡಬಲ್ಲವು? ಮೊದಲು ನನ್ನ ಆಡಳಿತವನ್ನು ಸುವ್ಯವಸ್ಥಿತವಾಗಿ ಮಾಡಿ ಕೊಳ್ಳಬೇಕು. ತರುವಾಯ ಬೇಕಾದರೆ ದೊಡ್ಡ ಪ್ರದರ್ಶನ ದಲ್ಲಿ ಇವರ ಬೇಟೆಯನ್ನಾಡಿದರೂ ಯಾರೂ ಕೇಳುವ ದಿಲ್ಲ. (ಇಷ್ಟರಲ್ಲಿ ತಿಮ್ಮನಾಯಕನು ಬರುವನು.) ನಾಯಕರೇ! ಏನು? ಎಚ್ಚನು ನಮ್ಮ ಪತ್ರಕ್ಕೆ ಗೌರವಪರ ಉತ್ತರ ವನ್ನು ಕೊಟ್ಟಿರುವನೋ?

ತಿಮ್ಮನಾಯಕ—ದೊರೆಯುವರಿಗೆ ಅವಮಾನಗೈಯುವ ಶಬ್ದಗಳನ್ನು ಉಚ್ಚರಿಸುವದಕ್ಕಿಂತಲೂ ಈ ಪತ್ರವನ್ನೇ ತಮ್ಮ ಸ್ವಾಧೀನ ಪಡಿಸುವೆನು. (ಕೊಡುವನು.)

(ಮುಂದಕ್ಕೆ ಸರಿಯುವನು. ಹಿಂದಿನ ತೆರೆ ಬೀಳುವುದು.)

ಜಗರಾಯ—(ದ್ವೇಷದಿಂದ ಓದುತ್ತ) ಏನು? ನಾನು ಗೂಳಿತ್ತು! ಮತ್ತು ನನ್ನ ಸರದಾರರೆಲ್ಲರೂ ಗೆದ್ದ ಎತ್ತಿನ ಜಾಲವನ್ನು ಬಡಿಯುವವ ರೇನು? ಹೀಗೇನು? ನಿಲ್ಲು. ನನ್ನ ತೀಕ್ಷ್ಣವಾದ ಕೋಡ ಗಳಿಂದ ನಿನ್ನ ಹೊಟ್ಟೆಯನ್ನು ಹಿರಿದರೇಯೇ ಹೆಸರಿನ ಜಗ ರಾಯನು. ಏನು? "ರಂಗರಾಯನನ್ನು ಕೊಲ್ಲುವ ಶಕ್ತಿಯು ನನ್ನಲ್ಲಿಲ್ಲವೇ?" ಎಲಾ ನಿನ್ನ ಸಹಿತವಾಗಿಯೇ ಇವರನ್ನು ಯಮಸದನಕ್ಕೆ ಕಳಿಸುವೆನು. "ಹೊಸ ಅರಸು

ಯಾರಿಗೆ ಹುಟ್ಟಿದವನೋ?'' ಮೂಢಾ! ಯಾರಿಗೇ ಹುಟ್ಟಲಿ! ಪಟ್ಟಕ್ಕೊಂದು ಏರಿದನಲ್ಲ! ಹೂಂ! ನಾನು ಮುತ್ಯಾಳೇನು? ತಿಳಿಯುವುದು. ಸ್ವಲ್ಪ ತಡೆ. ನೀನುಟ್ಟ ಉಡಿಗೆಗಳ ಸಹಿತ ವಾಗಿಯೇ ನಿನ್ನನ್ನು ಸುಟ್ಟ ತರುವಾಯುವೇ ಈ ನಿನ್ನ ಪದವಿಯನ್ನು ನಿನ್ನ ಚಿತೆಯಲ್ಲಿಯೇ ಭಸ್ಮಮಾಡಿಬಿಡುವೆನು. “ಏನು ಬೈಲಿಗೆ ಬರಲೋ?'' ನಾನು ಬರುವದೇ ತಡ. ನಿನ್ನ ಕೈಕಾಲುಗಳನ್ನು ಜೀಳುವಂತೆ ಮಾಡುವೆನು. ಎಲಾ! ನಿನಗೆ ಸ್ವಾಮಿಕಾರ್ಯವು ಬೇಕಲ್ಲ? ಸಾವಿನ ಕಾಲವೇ ಒದಗಿದೆ. ನೀನೇನು ಮಾಡಬಲ್ಲಿ! ಏನೋ ಪಾಪ ಎಂದು ಎರಡು ಸಲ ತಿಳುಹಿಸಿ ಹೇಳಿದರೂ ಕೊನೆಗೆ ಈ ನಾಯಕನ ಬಾಲವು ಡೊಂಕೇ! ಒದ್ದು ಹೇಳಿದರೂ ಕೇಳುವಂತಿಲ್ಲ. ಗದ್ದ ತುಟಿಗಳನ್ನು ಹಿಡಿದು ಹೇಳಿದರೂ ಕೇಳುವಂತಿಲ್ಲ. ಒಳ್ಳೇದಿರಲಿ, ತಿಮ್ಮರಾಯಾ! ಇವರನ್ನು ಕಾಯಲು ದುರ್ಗಪ್ಪನಾಯಕನನ್ನು ನಿಯಮಿಸಿರಿ; ನಾನಿನ್ನು ಮುಂದಿನ ಎಲ್ಲ ಏರ್ಪಾಟುಗಳನ್ನು ಮಾಡಲು ತೆರಳುವೆನು.

---

೨ ನೇ ನೋಟ

[ಅಡವಿಯ ಪರದೆ.]

ನಾಯಕ— (ಪ್ರವೇಶಿಸಿ ಸ್ವಗತ) ಈ ಪಾತಾಳಯಂತ್ರಿಯಾದ ಪುಂಡನ ಪಾಡೇನು? ನಾನಿಲ್ಲದ ಸಮಯುವನ್ನು ಸಾಧಿಸಿ, ನನ್ನೊಡೆ ಯರ ಪ್ರಾಣವನ್ನು ಹಿರಿಯುವದಕ್ಕಾಗಿ ಇವನು ಹವಣಿ ಸಿರುವನೇ! ಆದರೆ ಅವನ ಹವಣಿಕೆಯಿಂದರೇನು ಬ್ರಹ್ಮನ ಬರಹವಲ್ಲವಲ್ಲ! ಅವನು ಕಲ್ಪಿಸಿದ್ದನ್ನು ಪೂರ್ತಿಗೊಳಿಸಲು, ಅವನ ಮನವೇನು ಕಲ್ಪವೃಕ್ಷವಲ್ಲವಲ್ಲ!! ಅಥವ ಅವನು ಬಯಸಿದ್ದೆಲ್ಲ ಆಗಲು, ಪೃಥ್ವಿಯೇನು ಇಂದೇ ಪಾಪದಲ್ಲಿ ಮುಳುಗಿಲ್ಲವಲ್ಲ!!! ತನ್ನ ದುಷ್ಟ ಒಳಸಂಚಿನಲ್ಲಿ ನಾನು

ಪಾಲುಗಾರನಾಗಬೇಕೆಂದು ನನ್ನೆಡೆಗೆ ಈ ಆಜ್ಞಾಪತ್ರವನ್ನು ಕಳುಹಿಸಿರುವನೇನು? ಎಲಾ! ಇದನ್ನು ಹೀಗೆ ಮಣ್ಣುಪಾಲು ಮಾಡಿಬಿಡುವೆನು. ಮೂರ್ಖಾ! ನಿನಗೆ ಶರಣುಬಂದಿರುವ ಶ್ವಾನಗಳ ಜೊತೆಯಲ್ಲಿ ನನ್ನನ್ನು ಸೇರಿಸಿಕೊಳ್ಳುವಿಯೋ? ಏನು? ನಿನ್ನಾಜ್ಞೆಯನ್ನು ಮೀರಿದರೆ ನಾನು ನಿನ್ನ ಕೋಪಾಗ್ನಿಗೆ ತುತ್ತಾಗುವೆನೇನು? ಆದರೆ ನಾನೇನು ಇಂಥ ಗೊಡ್ಡು ಬೆದರಿಕೆಗೆ ಹೆದರುವುದಿಲ್ಲ, ಕಂಡಿಯಾ! ಛಿ; ಬರೀ ಬಾಯ್ಬಡಕನಂತೆ ನಾನಿದನ್ನೇನು ಬಡಬಡಿಸುವೆನು? ಈಗ ಮುಂದಿನ ಉಪಾಯವೇನು? (ಸ್ವಲ್ಪ ಯೋಚಿಸಿ) ಛೆ; ಯಾವ ಯುಕ್ತಿಯೂ ತೋಚದು. ಈ ಸಮಯದಲ್ಲಿ ನನಗಾರು ಬೆಂಬಲವನ್ನೀಯುವರು? ಮೊದಲೇ ನಾನು ಪೂರ್ಣ ವಿಚಾರಿಯಾಗಿದ್ದರೆಷ್ಟು ಚನ್ನಾಗಿಯಾಗುತಿತ್ತು! ಹೀಗೆ ಸುಳ್ಳೇ ಕುದಿಯುತ್ತ ಕೂಡುವ ಪ್ರಸಂಗವೇ ಬರುತ್ತಿದ್ದಿಲ್ಲ. ಹರಹರ ಎಂತಹ ದೈನ್ಯಸ್ಥಿತಿ ಯಿದು! (ಸಚಿಂತನಾಗಿ ನಿಲ್ಲುವನು.)

ಕುಮುದಿನಿ— (ಪ್ರವೇಶಿಸಿ) ನಾಥಾ! ಏನಿದು ವಿಪರೀತ! ಇಂದು ಒಂದು ಅರಗಳಿಗೆಯಾದರೂ ನೀವು ಬಿಡಾರದಲ್ಲಿಲ್ಲವಲ್ಲಾ! ದಿನೇ ದಿನೇ ನಿಮ್ಮ ಕಂದಿಹೋಗುತ್ತಲಿರುವ ದೇಹವನ್ನು ನೋಡಿ, ನನ್ನ ಜೀವವು ಮರುಗುವುದು. ನಿನ್ನೆಯಿಂದ ನಿಮ್ಮ ಅಮೃತ ಸಮವಾದ ಶಬ್ದಗಳ ಪಾನವಿಲ್ಲದೆ ನನ್ನ ಪಂಚಪ್ರಾಣಗಳು ಮೃತಪ್ರಾಯವಾಗುತ್ತಲಿವೆ. ಬೇಡಿ, ಹೀಗೆ ಖಿನ್ನರಾಗಬೇಡಿ. ಪ್ರಾಣೇಶ್ವರಾ! ನಿಮ್ಮ ಹಾರೈಸುವ ನುಡಿಗಳಿಗಾಗಿ ನೀರಡಿಸಿದವಳನ್ನು ಶಮಿಸುವದಿಲ್ಲವೇ? ಎಷ್ಟು ಕಠೋರತನವಿದು! ಏನು ನನ್ನೆಡೆಗೆ ನೋಡುವದಿಲ್ಲವೇ! ಇತ್ತೀಚೆಗಂತೂ ಹೊಟ್ಟೆಗೆ ಆಹಾರವಿಲ್ಲ. ಯಾರ ಸಂಗಡ ಮರೆತಾದರೂ ತುಟಿ ಎರಡು ಮಾಡಿಲ್ಲ. ಸದಾ ಭ್ರಮಿಷ್ಟರಂತೆ ಅಲೆಯುತ್ತಿರುವಿರಿ. ಹಾಯ್ ನೀರಾ! ನನ್ನಿಂದಲೇ ನಿಮಗಿಂಥ

ಸ್ಥಿತಿಯು ಪ್ರಾಪ್ತವಾಯಿತಲ್ಲ! ನಿಜವೇ ಪ್ರಿಯಾ! ಮಾತಾಡಿರಿ.

ನಾಯಕ— (ಶಾಂತನಾಗಿ) ಪ್ರಿಯೇ! ಇಲ್ಲದ ಚಿಂತೆಗೊಳಗಾಗಬೇಡ. ಜಗರಾಯನ ಪತ್ರಕ್ಕೆ ಪ್ರತ್ಯಕ್ಷ ಕ್ರಿಯೆಯಿಂದ ಯಾವ ಬಗೆಯ ಉತ್ತರಕೊಡಬೇಕೆಂದು ವಿಚಾರ ಮಾಡುವದರಲ್ಲಿ ನನ್ನ ಮತಿಯು ಗತಿಯು ಕುಂಠಿತವಾಗಿ, ಕೊಂಚ ನಿರಾಶೆ ಯಾಗಿದೆ. ಇದೆಲ್ಲ ದೈವಲೀಲೆಯು.

ಕುಮುದಿನಿ— ಮಹಾರಾಜರೇ! ನಿಮ್ಮಂಥ ಪ್ರತಾಪಶಾಲಿಗಳು ಹೀಗೆ ಉದಾಸೀನರಾಗುವುದುಚಿತವಲ್ಲ. ದೀನರೂ ದುರ್ಬಲರೂ ನಿರಾಶರಾಗಬೇಕು. ದೈವ ಪ್ರಾರಬ್ಧ, ಹಣೆಯ ಬರಹ ಈ ಶಬ್ದಗಳ ವಿಷಯವಾಗಿ ನಮ್ಮ ಜನಗಳಲ್ಲಿ ತಪ್ಪು ತಿಳಿವಳಿಕೆ ಯಾಗಿದೆ. ಆದಕ್ಕಾಗಿಯೇ ನಮ್ಮ ಕರ್ನಾಟಕದಲ್ಲಿ ಸೋಮಾರಿತನವೂ ಹೇಡಿತನವೂ ಹಬ್ಬುತ್ತಲಿವೆ. ಈ ದೈವದ ಸತ್ಯಾರ್ಥವು ಕರ್ಮವೆಂದಿಲ್ಲವೇ? ಕರ್ಮವೆಂದರೇನೇ ಕೃತಿ. ಈ ಕರ್ಮಯೋಗವನ್ನು ಸಾಧಿಸಲೆತ್ನಿಸುವದೇ ನಮ್ಮ ಆರ್ಯರ ಪವಿತ್ರ ಧರ್ಮವಲ್ಲವೇ?

ನಾಯಕ— ಕುಮುದಿನೀ! ಕುಲಭೂಷಣೇ! ನಾನು ಮೌಢ್ಯಾಂಧ ಕಾರದಲ್ಲಿರಲು, ನಿನ್ನ ಈ ಬಗೆಯ ನಿಶ್ಚಯಾತ್ಮಕ ನುಡಿ ಗಳಿಂದ ನನ್ನನ್ನು ಉದ್ಧಾರಮಾಡುವ ಗುರುದೇವತೇ! ನಿನ್ನ ಧೈರ್ಯವೂ, ಸ್ವಾರ್ಥತ್ಯಾಗವೂ, ಪ್ರಸಂಗಾವಧಾ ನವೂ ನಿಜವಾಗಿ ಯಾವ ಪುರುಷನನ್ನು ನಾಚಿಸಲಿಕ್ಕಿಲ್ಲ? ಆಹಾ! ಅದಕ್ಕಾಗಿಯೇ ಪೂರ್ವಜರು ಸ್ವಸ್ತ್ರೀಯರನ್ನು ಗೃಹ ಲಕ್ಷ್ಮಿಗಳೆಂದು ಸಂಬೋಧಿಸಿರುವರು. (ಚಿಂತೆಯಿಂದ) ಆದರೆ ಪ್ರಿಯೇ! ಇದುವರೆಗೆ ನಮ್ಮ ನಾಯಕರ ಕುಲದಲ್ಲಿ ತಮ್ಮ ದೊರೆಯವರ ವಿಷಯವಾಗಿ ನಾನು ತೋರಿಸಿದಷ್ಟು ತಾತ್ಸಾರವನ್ನು ಯಾರೂ ತೋರಿಸಿಲ್ಲ. ಅದಕ್ಕಾಗಿಯೇ ಮೇಲಿಂದಮೇಲೆ ನನಗೆಷ್ಟು ಕೆಟ್ಟದೆನಿಸುವುದು.

ಕುಮುದಿನಿ— ಆದದ್ದೇನೋ ಪ್ರಮಾದವು ಆಗಿಹೋಯಿತು. ಆದುದರಿಂದ ಬರೀ ಚಿಂತಿಸುವುದರಿಂದೇನಾಗುವುದು? ಇದಕ್ಕೆ ಪ್ರಾಯಶ್ಚಿತ್ತವುಂಟು. ಪ್ರಭುಗಳನ್ನು ಬಿಡುಗಡೆಮಾಡಿ, ಪುನಃ ಅವರ ಪಾದಸೇವೆಯಿಂದ ಪರಿಶುದ್ಧರಾಗಿರಿ. ಕನ್ನಡಿಗರ ಕೀರ್ತಿಯನ್ನು ವಿಕಾಸಗೊಳಿಸಿರಿ. ಪೂರ್ವಜರ ಪವಿತ್ರ ವ್ರತವನ್ನು ಪಾಲಿಸಿರಿ. ಭಾರತಿಯರ ಭಾಗ್ಯವನ್ನು ಬೆಳೆಯಿಸಿರಿ. ನರವೀರರೇ! ತುಪ್ಪದಿಂದ ತಪ್ತಾಗ್ನಿಯು ಪ್ರಜ್ವಲಿಸುವಂತೆ, ಉಜ್ವಲ ದೇಶಾಭಿಮಾನದಿಂದ ನಿಮ್ಮ ಭಾವನೆಗಳನ್ನು ಪ್ರದೀಪ್ತಮಾಡಿರಿ. ಪತಿಯ ಈ ಪವಿತ್ರ ಕಾರ್ಯದಲ್ಲಿ ಕುಮುದಿನಿಯು ತನ್ನ ದೇಹವನ್ನಷ್ಟೇ ಅಲ್ಲ—ತನ್ನ ಆತ್ಮಾರ್ಪಣೆಯನ್ನೂ ಮಾಡಲು ಸಿದ್ಧಳಿರುವಳು.

ನಾಯಕ— ಕುಮುದಿನೀ! ನಿಜವಾಗಿ ನಾನು ನಿನ್ನ ಉತ್ಸಾಹಪೂರ್ಣ ಭಾಷಣಗಳಿಂದ ಬೆರಗಾಗಿಹೋದೆನು. ಆದರೆ ರಾಜಪಕ್ಷದ ಒಂದಾದರೂ ಅಂಕುರದ ಬೆಂಬಲವಿಲ್ಲದೆ ನಮ್ಮ ಪ್ರಯತ್ನವು ಸಫಲವಾಗುವುದೆಂತು? ಅಲ್ಲದೆ ನಾವೀರ್ವರೇ ಏನುಮಾಡಬಲ್ಲೆವು? ಅದರಲ್ಲಿಯೂ ನೀನಂತೂ ಓರ್ವ ನಾರಿಯು....

ಕುಮುದಿನಿ— ನೀವು ಬೇಕಾದರೆ ಹೀಗೆ ಚಿಂತಿಸರಿ. ಆದರೆ ಆರ್ಯ ಸ್ತ್ರೀರತ್ನಗಳ ಉಜ್ವಲ ತೇಜವು ನನ್ನಲ್ಲೆಲ್ಲಿಯವರಿಗೆ ನೆಲಸಿರುವದೋ ಅಲ್ಲಿಯವರೆಗೆ ನನಗಾವ ವಿಪತ್ತಿನ ಕ್ಷಿತಿಯಿಲ್ಲ. ಮಹಾರಾಜರೇ! ವಿವಾಹ ಸಮಯದಲ್ಲಿಯೇ ನಿಮ್ಮ ಸುಖದುಃಖಗಳ ಸೂತ್ರಗಳು ನನ್ನ ವಶವಾಗಿವೆ. ವೇದೋಕ್ತ ವಿಧಿಯಿಂದ ನಾನಾಗಲೇ ಸಾಮ್ರಾಜ್ಞಿ ಪದಕ್ಕೆ ವಿರಾಜಿತಳಾಗಿರುವೆನು. ಆದಕಾರಣ ನನ್ನ ಪತಿರಾಜರು ಕೈಕಾಲುಗಳನ್ನಾಡಿಸದೆ ಕಲ್ಲುದೇವರಾದರೂ, ಆ ಮೂರ್ತಿಯನ್ನು ಪೂಜಿಸಿ, ಅದರಲ್ಲಿ ಅಧಿಷ್ಠಿತವಾದ ಪರಮೇಶ್ವರನನ್ನು ಒಲಿಸಿಕೊಂಡು ಎಲ್ಲ ಅನಿಷ್ಟವನ್ನು ಹೋಗಲಾಡಿಸುವೆನು. ಪ್ರಿಯಾ! ತಮ್ಮಂಥ ಶೂರರಿಗೆ ಮದವೇರಿದ ಆನೆಯು

ಮರ್ದನವೂ, ಪ್ರಚಂಡ ಸಿಂಹನ ಸಂಹಾರವೂ ತೃಣ ಮಾತ್ರವೇ ಸರಿ. ಇಂಥ ವೀರರಿಗೆ ಜನ್ಮಕೊಡುವ ಆ ನಾರಿಯರ ಜಾತಿಯಲ್ಲಿ ನಾನೋರ್ವಳಲ್ಲವೇ? ಪ್ರತ್ಯಕ್ಷ ವಿಷ್ಣುಗೂ ಮೀರಿದ ಮಹಿಷಾಸುರನನ್ನು ಮರ್ದನಮಾಡಿದ ಜಗದಂಬೆಯು ಆರು?

ನಾಯಕ— ಹೀಗೇನು ಪ್ರಿಯೇ! ನಿನ್ನಂಥ ಸಿಂಹಿಯ ಬೆಂಬಲವಿರಲು ನಾನಾವುದಕ್ಕೂ ಹಿಂಜರಿಯುವುದಿಲ್ಲ. ನನಗೊಂದು ಯುಕ್ತಿಯು ತೋಚುವದು. ನಮ್ಮ ಮನೆಯನ್ನು ಒಮ್ಮೆ ರಾಜಕುಮಾರನಿಂದ ಅಲಂಕರಿಸಿದರೆ, ನಮ್ಮ ಎಷ್ಟೋ ಕಾರ್ಯವು ಕೈಗೂಡಿತೆಂದು ನಾನು ತಿಳಿಯುವೆನು. ಮಾತ್ರ ಈ ಕಾರ್ಯದಲ್ಲಿ ಜಗರಾಯನಂಥ ಮೋಸಗಾರ ನನ್ನು ನಾವು ಹಂಚಿಕೆಯಿಂದಲೇ ಸೋಲಿಸಬೇಕು. ಚಂದ್ರ ಗಿರಿಯಲ್ಲಿ ಎಲ್ಲರೂ ಅವನನ್ನೇ ಹಿಂಬಾಲಿಸಿರುವರು. ಇಂಥ ಸಮಯದಲ್ಲಿ ನಾನು ಅವನನ್ನು ದುಡುಕಿಸಿ ಕಡಿಯಲು ಹೋದರೆ ಕಲಹದ ಮೂಲವನ್ನೇ ಅಳಿಯಬೇಕೆಂದು, ಆ ದುಷ್ಟ ಜಗರಾಯನು ನಮ್ಮ ರಾಯರ ಕುಟುಂಬವನ್ನೇ ಸಂಹರಿಸಿದರೆ ಎಂತಹ ಘಾತವಾಗುವದು! ಆದಕಾರಣ ಪ್ರಿಯೇ ವಿಷವುಳ್ಳ ಸರ್ಪಗಳಿಂದ ಮುತ್ತಿದ ಕೇತಕಿಯನ್ನು ದೊರಕಿಸಬೇಕಾದರೆ ಮೊದಲು ಅವುಗಳನ್ನು ಮುಸುಕಿ ನಿಂದಲೇ ಓಡಿಸಬೇಕಾಗುವುದು.

ಕುಮುದಿನಿ— ನಾಥ! ಇದರಲ್ಲೇನು ಸಂದೇಹ? ನಾವು ಈ ಕಾರ್ಯ ವನ್ನು ಸ್ವಲ್ಪ ಧೂರ್ತತನದಿಂದಲೇ ಕೈಗೂಡಿಸಿಕೊಳ್ಳಬೇಕು. ಇದು ದೇವ ಕಾರ್ಯವು, ದೇಶ ಕಾರ್ಯವು. ಇಲ್ಲಿ ಮಾನಾಪ ಮಾನಗಳನ್ನು ಲಕ್ಷಿಸದೆ ಪ್ರಸಂಗ ವಿಶೇಷದಲ್ಲಿ ನಮ್ಮ ಲಕ್ಷಾ ವಧಿ ಸಹೋದರರು ಲಯವಾದರೂ, ಅವರನ್ನು ಲಾಲಿಸು ವವರನ್ನು ನಾವು ಕಾಪಾಡಬೇಕು. ಆದರೆ ಇದಕ್ಕಾಗಿ ಮುಂದಿನ ಉಪಾಯವೇನು?

ನಾಯಕ— ನನಗೊಂದೂ ತೋಚದಂತಾಗಿದೆ. ನನಗಂತೂ ಆವಾಗಲೂ ಬಂಡವನ್ನೆಬ್ಬಿಸಿ ಆ ಪುಂಡನನ್ನು ತುಂಡರಿಸುವುದರ ವಿನಾ ಬೇರೆ ಯಾವ ಮಾರ್ಗವೇ ಕಾಣದು.

ಕುಮುದಿನಿ— ಹಾಗಾದರೆ ಪ್ರಿಯಾ! ನನಗೊಂದು ಯುಕ್ತಿಯು ತೋಚು ವುದು. ಅದು ಪ್ರಸ್ತುತದಲ್ಲಿ ತಮಗೆ ಮಾನಹಾನಿಪ್ರದವೆಂದು ತೋರಿದರೂ ಕೊನೆಗೆ ಮಾತ್ರ ವಿಜಯದೇವಿಯು ನಿಮಗೆ ಮಾಲೆಯನ್ನು ಹಾಕುವಳು.

ನಾಯಕ— ಪ್ರಿಯೇ! ಈ ಮಹತ್ಕಾರ್ಯದಲ್ಲಿ ಮೃತ್ಯುವನ್ನಪ್ಪಿ ಕೊಳ್ಳಲು ಸಿದ್ಧನಾಗಿರುವ ನನಗೆ ಮಾನಾಪಮಾನಗಳ ಹೆದರಿಕೆಯಿದೆಯೆಂದು ನೀನು ಹೇಗೆ ಭಾವಿಸುವೆ ?

ಕುಮುದಿನಿ— ಹಾಗಾದರೆ ಸೆರೆಮನೆಯಲ್ಲಿರುವ ಅರಸರ ಅರಿವೆಗಳನ್ನು ಒಗೆಯುವ ಅಗಸನ ಸಹಾಯವಾದರೆ ಈ ಕಾರ್ಯವು ಅತಿ ಸುಲಭ ಸಾಧ್ಯವು. ನಾನು ಅವನ ಮನೆಯೊಳಗಿನೋರ್ವ ಳಾಗಿ ಅರಸರ ನಂಬಿಗೆಯನ್ನು ಸಂಪಾದಿಸಿ, ಇನ್ನು ಒಂದು ತಿಂಗಳದಲ್ಲಿಯೇ ಈ ನಮ್ಮ ಪಾಳಯಕ್ಕೆ ದೇವಾಲಯದ ಮಂಗಲಸ್ವರೂಪವನ್ನುಂಟುಮಾಡುವೆನು.

ನಾಯಕ— ಅಲ್ಲಿಯವರೆಗೆ ನಾನೇನು ಇಲ್ಲಿ ಜಪಮಾಡುತ್ತ ಕುಳಿತು ಕೊಳ್ಳಲೋ ?

ಕುಮುದಿನಿ— ಅಹುದು ; ಇನ್ನೊಂದು ತಿಂಗಳ ತರುವಾಯ ನಮ್ಮ ಕರ್ನಾಟಮಾತೆಯ ಸೇವೆಯ ಸಂಪ್ರದಾಯವನ್ನು ಬೆಳೆಸುವ ಮಹತ್ವದ ಕಾರ್ಯವು ನಿಮ್ಮನ್ನೇ ಕೂಡಿದೆ. ಆದಕಾರಣ ಅದುವರೆಗೆ ಕೊಂಚ ವಿಶ್ರಾಂತಿಯನ್ನು ಹೊಂದಿರಿ.

ನಾಯಕ— ನಿನ್ನ ಇಷ್ಟವಿದ್ದಹಾಗೆಯೇ ಆಗಲಿ ; ಮೊದಲು ಆ ಅಗಸ ನನ್ನು ಕರೆಕಳುಹಿಸಿ, ನಮ್ಮ ಮುಂದಿನ ಕಾರ್ಯಗಳಿಗನು ವಾಗುವಾ. (ಹೋಗುವರು.)

೩ ನೇ ನೋಟ

[ಅಡವಿಯ ಪರದೆ. ಪ್ರೇಮಾನಂದನು ಕೆಲವು ಕನ್ನಡಿಗರೊಡನೆ ಬರುವನು. ಅವನ ಹೊರತು ಎಲ್ಲರೂ ಕುಳಿತುಕೊಳ್ಳುವರು.]

ಪ್ರೇಮಾನಂದ—ಏನು ಪ್ರವಾಸದಿಂದುಂಟಾದ ಶ್ರಮ ಪರಿಹಾರಾರ್ಥವಾಗಿ ನೀವಿಲ್ಲಿ ಕುಳಿತುಕೊಳ್ಳುವಿರೋ ? ವೀರರಸಪ್ರಧಾನ ಕನ್ನಡಿಗರೇ! ನಿಮ್ಮ ಮನೆಮಾರುಗಳ ಮೇಲೆ ತುಳಸೀ ಪತ್ರವನ್ನಿಟ್ಟು ಭಾರತಾಂತರ್ಗತವಾದ ಕರ್ನಾಟಕ ಮಾತೆಯ ಸೇವೆಗಾಗಿ ನೀವು ತೋರಿಸಿರುವ ಸ್ವಾರ್ಥ ತ್ಯಾಗವೇನು ಕಡಿಮೆಯಾದುದ್ದಲ್ಲ. ಜಡವಸ್ತುಗಳಾದ ಚಂತೆ ತೊಲೆಗಳಿಂದುಂಟಾಗುವ ಛಾಯೆಯನ್ನು ನಿರಾಕರಿಸಿ, ನೀವಿಂದು ಶ್ರೀ ಸೂರ್ಯನಾರಾಯಣನ ಆಶ್ರಯದಲ್ಲಿ, ಸೃಷ್ಟಿದೇವಿಯ ಸನ್ನಿಧಾನದಲ್ಲಿ, ಸ್ವದೇಶಕ್ಕಾಗಿ ಸನ್ಯಾಸ ವೃತ್ತಿಯನ್ನು ಸ್ವೀಕರಿಸಿರುವಿರಿ. ಆಹಾ! ನೋಡಿರಿ. ನಿಸರ್ಗದೇವಿಯ ಎಷ್ಟು ಅತುಲವಾದ ಸೌಂದರ್ಯವಿದು! ವಿಶ್ವವನ್ನೆಲ್ಲ ಶೋಧಿಸಿದರೂ, ಇಂತಹ ಅಸಾಮಾನ್ಯ ವೈಭವದಿಂದಲೂ ಸೌಂದರ್ಯದಿಂದಲೂ ತುಂಬಿ ತುಳುಕುವ ನೋಟವು ಯಾವ ಭೂಮಿಗೆ ಪ್ರಾಪ್ತವಾಗಿದೆ. ಈ ನಂದನ ವನದಲ್ಲಿ ಹೊಳೆಯುವ ಮಾನವೀ ಅಂತಃಕರಣವೂ, ಬುದ್ಧಿಯ ಶ್ರೇಷ್ಠ ಶಕ್ತಿಯೂ, ಸೂಕ್ಷ್ಮವಾಗಿರುವ, ಗೂಢವಾಗಿರುವ ನೈಸರ್ಗಿಕ ಹಾಗೂ ಸಾಂಸಾರಿಕ ವಿಚಾರಗಳೂ ಇಲ್ಲಿಯ ಹೊರತು ಯಾವ ದೇಶದಲ್ಲಿ ಪೂರ್ಣತ್ವಕ್ಕೆ ಮುಟ್ಟಿವೇ? ಮಹನಿಯರೇ! ಸಕಲ ರಾಷ್ಟ್ರಗಳಲ್ಲಿಯೂ ನಮ್ಮ ಹಿಂದೂ ದೇಶವು ಅತಿ ಪ್ರಾಚೀನವಾದದ್ದು. ಸುಸಂಸ್ಕೃತಿಯಿಂದಲೂ ಈಶ್ವರೀ ಸಾಮರ್ಥ್ಯದಿಂದಲೂ ಇಂದಿಗೂ ನಮ್ಮ ಆರ್ಯಾವರ್ತವು ಮುಂದೇ ಇದೆ. ಆರ್ಯ ಧರ್ಮ ಸಂಸ್ಕೃತಿಯ ಈ ಹಳೆಯ ಮತ್ತು ವಿರಾಟ ವೃಕ್ಷವು ಪರಕೀಯರಿಂದ ಎಷ್ಟುಸಲ ಆಘಾತ



ಪ್ರೇಮಾನಂದ—ಇಗೋ! ಈ ತುಂಗಭದ್ರೆಯ ತೀರದಲ್ಲಿಯೇ ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ವಿದ್ಯಾರಣ್ಯ ಕರ್ಮಯೋಗಿಗಳು ತಮ್ಮ ಸಂಸಾರ ಸುಖಕ್ಕೆ ತಿಲಾಂಜಲಿಯನ್ನು ಕೊಟ್ಟು, ಕಾದಾಡಿ, ಕಾದಾಡಿ, ಕಾಲ ನಿದ್ರಸ್ಥರಾಗಿರುವರು. (ಪುಟ ೬೯)

ಮಾಡಲ್ಪಟ್ಟರೂ, ಅಥವಾ ಒತ್ತಾಯದಿಂದ ಅಲ್ಲಾಡಿಸಲ್ಪಟ್ಟರೂ, ಅದು ತನ್ನ ಬುಡ ಬೊಡ್ಡೆಗಳ ಸಹಿತವಾಗಿ ಮತ್ತಿಷ್ಟು ದೃಢವಾಗುತ್ತಲಿದೆ. ಅದರ ವೈಭವವು ನಷ್ಟವಾದರೂ ಶೀಲವು ಉಳಿದಿದೆ. ಅದರ ಐಶ್ವರ್ಯವು ಲುಪ್ತವಾದರೂ ಇನ್ನೂ ಆದು ರೂಪದಲ್ಲಿ ಅಬಾಧಿತವಾಗಿದೆ. ಸಜ್ಜನರೇ! ಇದೆಲ್ಲಕ್ಕೂ ಶೀಲವೊಂದೇ ಕಾರಣ. ಶೀಲವೆಂದರೇಯೇ ಧರ್ಮ. ಈ ಧರ್ಮ ಕಾರ್ಯಾರ್ಥವಾಗಿಯೇ ನಮ್ಮ ಭರತಭೂಮಿಯ ಕನ್ನಡ ಭಾಗದಲ್ಲಿ ಇಡೀ ಜಗತ್ತನ್ನೆಲ್ಲ ಬೆಳಗುವ ಧರ್ಮ ಸ್ಥಾಪಕರೂ, ಮತ ಸ್ಥಾಪಕರೂ ಅವತಾರಗಳನ್ನೆತ್ತಿರುವರು. ಇಂಥ ಪವಿತ್ರ ಭೂಮಿಯಲ್ಲಿ ನಿಮ್ಮ ಜನ್ಮವಾಗಿದೆ. ಇಂಥ ಜನ್ಮಭೂಮಿಯಾದ ಜನನಿಯನ್ನು, ಇಂಥ ಸಂಸ್ಕೃತಿಯನ್ನು ಕಾಯುವದಕ್ಕಾಗಿಯೇ ಇಗೋ! ಈ ತುಂಗಭದ್ರೆಯ ತೀರದಲ್ಲಿಯೇ ಕರ್ನಾಟಕ ಸಿಂಹಾಸನಾ ಸ್ಥಾಪಕಾಚಾರ್ಯರಾದ ವಿದ್ಯಾರಣ್ಯ ಕರ್ಮಯೋಗಿಗಳು ತಮ್ಮ ಸಂಸಾರ ಸುಖಕ್ಕೆ ತಿಲಾಂಜಲಿಯನ್ನು ಕೊಟ್ಟು, ಕಾದಾಡಿ, ಕಾದಾಡಿ, ಕಾಲ ಸಿದ್ರುಸ್ಥರಾಗಿರುವರು. ನಾವುಗಳೆಲ್ಲರೂ ಆ ನಮ್ಮ ಪೂರ್ವಜರ ಹೆಜ್ಜೆಯಮೇಲೆ ಹೆಜ್ಜೆಯನ್ನಿಡುತ್ತ ಹೋಗಿ, ಚಂದ್ರಗಿರಿಯಲ್ಲಿರುವ ಹೀನ ವೃತ್ತಿಯ ಕನ್ನಡ ದ್ರೋಹಿಗಳನ್ನು ಸದೆಬಡದರೇಯೇ ನಾವು ಅವರ ವಂಶದಲ್ಲಿ ಹುಟ್ಟಿದ್ದಕ್ಕೂ ಸಾರ್ಥಕವು. ಆದಕಾರಣ, ಏಳಿರಿ! ಬಂಧುಗಳೇ! ಎಲ್ಲಿಯುವರೆಗೆ ನಮ್ಮ ಧ್ಯೇಯವು ಸಾಧ್ಯವಾಗುವದಿಲ್ಲವೋ ಅಲ್ಲಿಯುವರೆಗೆ ನಮಗೆ ವಿರಾಮವೆಲ್ಲಿ? ಈ ಹೊತ್ತಿನಲ್ಲಿಯ ನಮ್ಮ ವಿಲಾಸವು ಮುಂದಿನ ಎಲ್ಲ ಕರ್ನಾಟಕಸ್ಥರ ಕೋಲಾಹಲವು. ಏಳಿರಿ! ಜಯ ಭಾರತಮಾತೇ!

ಎಲ್ಲರೂ— (ಎದ್ದು) ಜಯ ಕರ್ನಾಟಕ!!

(ಎಲ್ಲರೂ ಹೋಗುವರು.)

೪ ನೇ ನೋಟ

[ತುರಂಗದಲ್ಲಿ ರಂಗರಾಯನು ತನ್ನ ಕುಟುಂಬ ಸಹಿತನಾಗಿರುವನು. ಮುಂಭಾಗ ದಲ್ಲಿ ಇಬ್ಬರು ಕಾವಲುಗಾರರಿರುವರು.]

ಚದುರ— ಎಲಾ ಮದನಾ! ಸುಮ್ಮನಿರೋ ಖೋಡೀ! ರಾಜೀ ದೇವಪ್ಪ ಬರೊ ಹೊತ್ತಾಯ್ತು.

ಮದನ— ಬಿಡಲೇ ಚದುರ್ಯಾ! ಜಗಪ್ಪ ಧೊರಿ ಕರ್ಯಾಕಳಸ್ಯಾನಂಡ ಕೇಸಿ ಅರಮನೆಗೆ ಹೋಗ್ಯಾನ. ಈಗೆಲ್ಲಿಂದ ಬರತಾನ್. ಎಲಾ! ಗಾಳೀ ಬಟ್ಟಾಗ ತೂರಿಕೊಂಡು ಬಿಡೋಣಲಾ! ಅವನಿದ್ದಾಗಂತೂ ಮಾತಾಡೋದೇ ಆಗೋದಿಲ್ಲ. ಇವತ್ತಿ ನಂಥ ಸಂಧಿ ಮತ್ತೆಂದೂ ಸಿಗೊದಿಲ್ಲ. ಎಲಾ! ಈಗಂತೂ ಆ ಅಗಸರವಳು ಬರೋ ಹೊತ್ತಾಯ್ತು. ಜರಾ ನೀನಿಲ್ಲೇ ನಿಂದ್ರು ಇವರನ್ನ ನೋಡಿಕೊಂತ. ನಾನಿಲ್ಲೇ ಬಾಕಿಲ್ದಾಗ ನಿಂತು ಅವಳು ಬರೋದೇ ತಡ, ಅವಳನ್ನ ಕಟ್ಟಿ ನನ್ನ ಮನ್ಯಾಕ ಒಯ್ದುಹಾಕಿತೀನಿ.....

ಚದುರ— ಹರ್ರೇ ಮಗನೇ! ಇದೊಳ್ಳೇ ಮಾತು, ನನ್ನ ಬಾಯಾಕ ಮಣ್ಣಾಕಿ, ನೀನೊಬ್ಬನೆ......

ಮದನ— ಹಾಗಲ್ಲಲೇ ಮುತ್ಯಾಳಾ! ನನ್ನ ಮನ್ಯಾಗ ಹಾಕಿ, ಬೀಗ ಜಿಗ್ದು ಬರತೀನಲೇ! ನಮ್ಮಿಬ್ಬರ ಪಾಳಿ ಮುಗ್ಯೋದೇ ತಡ....

ಚದುರ— ಅದ್ಯಾಕ ನೀನೇ ಇಲ್ಲ ಕೂಡು. ನಾನೇ ಬಾಕಿಲ್ದಾಗ ನಿಂದ್ರುತೀನಿ.

ಮದನ— ಅಲ್ಲಲೇ! ಇಂಥಾ ಕೆಲಸಕ್ಕ ನನ್ನ ದೈವ ಭಾಳ ಅನುಕೂಲ. ಹುಡ್ಗ ಇವತ್ತಿನ ತನಕ ಕೈಹಾಕಿದಲ್ಲಿ ಹುಸಿಹೋಗಿಲ್ಲ. ಇದಲ್ದೇ ಅವಳು ನಿಚ್ಚಾ ಬರತಾಳಲ್ಲ—ಆಗ ನಾನನರಂತ ಅಂತೀನಲ್ಲಾ—ಆ ಲಾವಣಿ......

ಚದುರ— ಅದ್ಯಾವದೋ?

ಮದನ— ಇದಲೇ! (ತಲೆಯನ್ನು ತುರಿಸುವನು) ಗಡಾನ ನೆನಪಾಗೊಲ್ಲೋ.

ಚದುರ— ಹೋಗಲಿ ಬಿಡಲೇ! ಆದ್ರ ಮುಂದೇನು?

ಮದನ— ನಾನದನ್ನ ಅನ್ನೋದೇ ತಡ. ನನ್ನ ಕಡ್ಯಾಕ ಪಿಳಿ ಪಿಳಿ ಕಣ್ಣೀ ಬಿಡ್ತಾಳ.

ಚದುರ— ಆಯಿತಲೇ ಹುಚ್ಚು ಖೋಡೀ! ಹಾಂಗ ನೋಡೋದು ಸಿಟ್ಟನಿಂದಲೇ!

ಮದನ— ಅಲಾ! ಹ್ಯಾಂಗ್ಯಾಕ ನೋಡ್ಲಿ, ನೋಡ್ತಾಳೊಂದಲ್ಲ?

ಚದುರ— ಅಂದರೇನೋ ಥೀಮಾರಿಯುವನೇ! ನೀನು ಆಕಾಶದಾಗ ಹಾರೋ ಹಕ್ಕಿಗೆ ಕಲ್ಲಿಲೇ ಹೊಡದ್ರ, ಅದೂ ನಿನ್ನ ಕಡೆ ನೋಡತಾಯಿತೇನೋ ಖರೆ, ಆದ್ರ ಅದು ಸಿಟ್ಟಿನಿಂದ ನೋಡ್ತಾಯಿತಲೇ! ಅದೇನು ನಿನಗ ಮಳ್ಳಾಗ ನೋಡೊದಿಲ್ಲ. ಇಂಥವರೇನರ ಹೀಂಗ ಮಳ್ಳಾಗತಾರೇನಲೇ?

ಮದನ— ಅದಕ್ಯಾನ ಮಾಡಬೇಕೋ? ಇಲ್ಲಿದ್ರ ಅವಳು ಜರಾನ ನೋಡೋದಿಲ್ಲ. ಯಾವಾಗ ನೋಡಿದ್ರೂ ಬಿರ್ರನೆ ಬಿಕ್ಕೊಂಡೇ ಇರ್ತಾಳ.

ಚದುರ— ಅದಕ ಛಲೋ ಹಾಡ ಹಾಡಬೇಕೋ ಹೊಂಬಾ!

ಮದನ— ಅಂಥಾ ಹಾಡು ನಿನಗ ಬರತಾವೇನಲೇ?

ಚದುರ— ಬರತಾವೇನೋ ಖರೇವೋ. ಆದ್ರ ಇವತ್ತ ಜರಾ ಒಂದು ನುಗ್ಗಿ ಹೆಂಡಾ ಭಾಳಾಗೆದ. ಗಡಾನ ನೆನಪಾಗೊದಿಲ್ಲ.

ಮದನ— ಹೊಂಯ್ದು ನೋಡು. ನನಗೂ ಅದಕಾನೇ ನೆನಪಾಗೊಲ್ಲ.

ಶ್ಯಾಮಭಟ್ಟ— (ಬಂದಿಖಾನೆಯಲ್ಲಿಯೇ ಕುಳಿತು) ಏನದು? ಕಡಿದಾಡುವಿರೇಕಪ್ಪಾ?

ಮದನ— ಅಲಾ! ಹೊಂಯ್ದು ನೋಡು; ಈ ಭಟ್ಟಗ ಬರತಿರಬೇಕು. ಇವನ ಕಡಿಂದ ಕಲಿಸ್ಕೋಬೇಕು.

ಚದುರ— ಹೊಂಯ್ದ್ಲೇ ಹೊಂಯ್ದು. ಬೇಸದ ನೋಡು ನಿನ್ನ ಯುಕ್ತಿ (ಶಾಮನ ಹತ್ತರ ಹೋಗಿ) ನಮಗೊಂದು ಹಾಡ ಬೇಕಾಗ್ಯಾದ ನೋಡ್ರಿ. ನಿಮಗೆ ಬರತಾದೇನು?

ಶ್ಯಾಮಭಟ್ಟ—ಒಂದೇಕೇ? ಹತ್ತೆಂಟು ಗೊತ್ತಿವೆ. ನೀವೂ ಕಲಿಯ ಬೇಕೆನ್ನುವಿರೇನು?

ಇಬ್ಬರೂ— ಹೂಂ ಹೂಂ; ಕಲ್ಸಿದ್ರು ಭಾಳ ಪುಣ್ಯ ಬರತಾಯ್ತು.

ಶ್ಯಾಮಭಟ್ಟ—ಓಹೋ ಹಾಗೆ ಆಗಲಿ; ಆದರೆ ನಾನು ನಿಮ್ಮ ಬಳಿಗೆ ಬರಲಾರೆನಲ್ಲ?

ಮದನ— (ಲಗುಬಗೆಯಿಂದ) ಬೀಗ ಸನ್ನಲ್ಲಿ ಆಯಿತ್ರಾ ಬರ್ರಿ ಬೇಗ ಬರ್ರಿ (ತೆಗೆಯುವನು. ಶ್ಯಾಮಭಟ್ಟನು ಹೊರಗೆ ಬರುವನು.).

ಮದನ— ಗಡಾನ ಕಲಿಸಬೇಕು ನೋಡ್ರೀ. ಆ ರಾಜೀದೇವಪ್ಪ ಬಂದ್ರು ನಮ್ಮನ್ನ ಹಾಕ್ಕೊಂಡು ಬಡೀ ಬಡೀ ಬಡದಾನು.

ಶ್ಯಾಮಭಟ್ಟ—ಅದರಲ್ಲೇನಿದೇ? ನಾನು ಹೇಳಿದಷ್ಟು ಮಾತ್ರ ನೀವು ಕೇಳಬೇಕು.

ಇಬ್ಬರೂ— ಅದೇನು? ನೀವೇನು ಹೇಳತೀರಿ?

ಶ್ಯಾಮಭಟ್ಟ—ಕೂಡಿರೆಂದರೆ ಕೂಡಬೇಕು. ಏಳಿರೆಂದರೆ ಏಳಬೇಕು. ಕುಣಿಯಿರೆಂದರೆ ಕುಣಿಯಬೇಕು.

ಇಬ್ಬರೂ— ಈಟೀ! ಅದರಾಗೇನಾಯಿತೇ?

ಶ್ಯಾಮಭಟ್ಟ—ಹಾಗಾದರೆ ಕುಳಿತುಕೊಳ್ಳಿರಿ. ನಿಲ್ಲಿರಿ. ಮೊದಲು ಸ್ವಲ್ಪ ತೀರ್ಥಪಾನಮಾಡಿರಿ.

ಮದನ— ತೀರ್ಥವೆಂದರೇನು?

ಚದುರ— (ಅವನನ್ನು ಬಡಿದು) ಹೆಂಡಲೇ!

ಮದನ— ಹಾಂಗೇನು? ಬೇಶ; ಭಾಳ ಬೇಶಾಯಿತು; ತಾರಲೇ! ಅಲ್ಲೇ ಮಗ್ಯಾಗ ಆದನೋಡು. ಯಾಕ್ರೀ ಇದರ್ನ್ಯಾಕ ಈಗ ಕುಡಿಬೇಕ್ರಿ?

ಶ್ಯಾಮಭಟ್ಟ—ಅಪ್ಪಾ ಇದನ್ನು ಪಾನಮಾಡುವುದರಿಂದ ನಿಮ್ಮ ಲಕ್ಷ್ಯವು ಬೇರೆ ಯಾವ ಕಡೆಯಲ್ಲಿ ಹೋಗುವುದಿಲ್ಲ.

ಮದನ— ಹೌಂದಲೇ ಹೌಂದ, ಇದರಿಂದ ಕಲಿಲ್ಯಾಕ ಒಳ್ಳೇ ಹದ ಏರತಾಯಿತ.

ಚದುರ— ಅಂದ್ರ ತಾರಲೇ ಗಡಾನ. (ಮದನನು ಮಗಿಯನ್ನು ತಂದಿಡುವನು.)

ಮದನ— (ಅದನ್ನು ಒಂದು ಗ್ಲಾಸಿನಲ್ಲಿ ಹಾಕಿ) ಎಲಾ ಚದುರಾ! ಇದು ಮಾತ್ರ ವಂಶಪರಂಪರೆಯಿಂದ ನಮ್ಮನ್ಯಾಕ ನಡಕೊಂತ ಬಂದಾದ. ನಮ್ಮಪ್ಪ ಸಾಯುಕಾಲಕ ನನಗ ಬಲ್ಲಿ ಕರ್ದು, "ಮಗನೇ! ನೀನು ಭಂಗಾರಪ್ಪನ ಮಗಾ! ಆದ್ರ ನಿಚ್ಚಾ ಎರಡೆರಡು ಮಗಿ ಒಂದೊಂದು ಹೊತ್ತಿಗೆ ಕುಡಿಬೇಕು ನೋಡು." ಅದಕಾನ ಚದುರ್‍ಯಾ! ನಮ್ಮಪ್ಪನ ಮಗಾ ನಾನು, ಗಬ್ರು ನಮ್ಮ ನಾಡಿನ್ಯಾಗ ಬಂದಾದರೂ ಈಚ್ಲ ಗಿಡನ ಇಲ್ಲಾಂಗ ಮಾಡಂವೀನಿ.

ಚದುರ— ಅಂದ್ರ ಮುಂದಿನವರ ಗತಿಯೇನಲೇ?

ಮದನ— ಮುಂದಿನವರ ಚಿಂತಿ ನಮಗ್ಯಾಕಲೇ? ನಮಗೊಂದು ಆನಂದಾದ್ರ ಸಾಕು. ಯಾಕ ಹೊಂಯಿದಲ್ಲೋ?

ಚದುರ— ಹೊಂಯಿದೋ ಆನಂದಕ್ಕಂತೂ ಫರಿಮಾಣೇ ಇಲ್ಲ. ಬೆಳ ದಿಂಗಳದಂಥ ಬೆಳಕು ಕಣ್ಣುಮುಂದ ಓಡಾಡತಾಯ್ತು. ಅಮಾಸಿ ದಿನ ಕೂಡ ನಮ್ಮ ಪಾಲಿಗೆ ಹುಣ್ಣಿವೆ. ಆಟ್ಯಾ ಕಲೇ? ಇದರನ್ನ ಕುಡ್ಯೋದೇ ತಡ ಕಣ್ಣ ಮುಂದ ಸಾಲ್ಕ ಕಾರ್ತೀಕ ದೀಪಾ ಒಡ್ಯಾಡಿದಾಂಗ ಕಾಣತಾಯಿತೆ. (ಇಬ್ಬರೂ ಕುಡಿಯುವರು.)

ಇಬ್ಬರೂ— ಹೂಂ; ಹೇಳ್ರೀ ಗಡಾನ ಹೇಳ್ರಿ.

ಶ್ಯಾಮಭಟ್ಟ—ನಿಲ್ಲಿರಿ. ಬೇಗ ಪಾನವಾಗಲು, ಇದಕ್ಕೂ ಉತ್ತಮವಾದ ಒಂದು ಯುಕ್ತಿಯಿದೆ. ಮೊದಲು ನೀವೀರ್ವರೂ ಈ ಗಡಿಗೆ ಯನ್ನೇ ನಿಮ್ಮ ಗಂಟಲಗಳ ಕೆಳಗಿಳಿಸಿರಿ.

ಮದನ— ಅಲಲಾ! ಸಿಕ್ಸಕ ಇದ್ರ ಇಂಥಾ ಸಿಕ್ಸಕ ಇರಬೇಕು. ತಾರೋ ಚದುರ್‍ಯಾ! ಹೊಪ್ತಾಹೊಡ್ದು ಬಿಡೋಣ. (ಕುಡಿದನಂತರ) ಭಟ್ಟಪ್ಪಾ ಬ್ಯಾಗ ಹೇಳ್ರಿ. ಜರಾ ಸಿದ್ಧಿ ಬಂದಾಂಗ ಆಗತಾಯಿತೆ.

ಚದುರ— ನನಗೂ ಖಂಗೇ ಆಗತಾಯಿತೆ.

ಶ್ಯಾಮಭಟ್ಟ—ಆಗಲಿ; ಆಗಲಿ; ಏನು ಅಡ್ಡಿಯಿಲ್ಲ. ಇನ್ನೂ ಒಂದು ಯುಕ್ತಿ ಯಿದೆ. ನೀವು ಯಾವ ಕಡೆಯಲ್ಲಿಯೂ ನೋಡಕೂಡದು. ಸ್ವಲ್ಪ ನಿಮ್ಮ ಕೈ ಕಣ್ಣುಗಳನ್ನು ಕಟ್ಟುವೆನು. ಆಗ ನೀವೇ ನೀವು. ಹಾಡೆ ಹಾಡು. ಮತ್ತೊಂದೆಡೆಗೆ ನಿಮ್ಮ ಲಕ್ಷ್ಯವೇ ಹೋಗುವುದಿಲ್ಲ.

ಮದನ— ಹಾಂಗೇ ಆಗಲಿ; ತಗೆಲೇ! ನಿನ್ನ ರೂಮಾಲ ತೆಗಿ. ಇವತ್ತ ನಮ್ಮ ದೈವ ತೆರೆದಾಯ್ತು. ಈ ಹಾಡು ಕಲ್ತು, ಏಳಲೇ! ಏಳು, (ಚದುರನನ್ನು ಎಬ್ಬಿಸಿ, ಇಬ್ಬರೂ ಕುಣಿಯುತ್ತ) ಹೀಂಗ ಕುಣ್ತಾ ಕುಣದ್ರ ಅವಳೇಶವಳು ನಮ್ಮ ಕಡಿಗೆ ಹ್ಯಾಂಗ ನೋಡೋದಿಲ್ಲ, ತೋರಸ್ತೀನಿ. (ದಪ್ಪನೆ ಎಚ್ಚರವಿಲ್ಲದೆ ಬೀಳು ವರು. ಕುಮುದಿನಿಯು ಪ್ರವೇಶಿಸುವಳು.)

ಕುಮುದಿನಿ— (ಅಗಸರವಳ ವೇಷದಲ್ಲಿ) ದೊರೆಗಳೇ! ನಿನ್ನಿನ ದಿವಸ ತಮ್ಮ ಚರಣಗಳಲ್ಲಿ ಅರ್ಪಣೆಮಾಡಿದ ನನ್ನ ಪತಿರಾಜರ ಪತ್ರದಿಂದ ತಾವು ನಾನಾರೆಂಬುದನ್ನು ಅರಿತಿರಬಹುದು.

ರಂಗರಸರು— ಸಾಧ್ವಿಶಿರೋಮಣೀ! ಹೀಗೆ ಬಾ. ಕುಳಿತುಕೊ. ಕರ್ತವ್ಯ ನಿಷ್ಠರಾದ, ಸ್ವಾಮಿನಿಷ್ಠರಾದ ನಮ್ಮ ನರವೀರ ನಾಯಕರ ಧರ್ಮಪತ್ನಿಯಿರುವಿಯೆಂಬುದು ಪತ್ರದಿಂದಂತೂ ತಿಳಿ ಯಿತು. ಆದರೆ ಈ ಸ್ಥಳದಲ್ಲಿ ನಿನ್ನಾಗಮನವಾದ ದಿನದಿಂದ, ನಿನ್ನ ವಿಷಯವಾಗಿ ನನ್ನಲ್ಲಿ ಪರಮಾದರವು ತಾನೇ ಉತ್ಪನ್ನ ವಾಗಿದೆ. ನೀನಾವ ವೀರಪುರುಷನ ಕನ್ಯೆಯಿರಬಹುದೆಂದು, ತಿಳಿದು, ನಿನ್ನ ಸಂಗಡ ಆಪ್ತಾಲೋಚನೆಗಾಗಿ ನಾನು

ಆತುರನಾಗಿದ್ದೆನು. ಆದರೆ ರಾಜೀದ್ರೋಹವನೆಂಬ ಕರ್ತವ್ಯ ನಿಷ್ಠ ಕಾವಲುಗಾರನಿರುವವರೆಗೆ, ನನ್ನ ಪ್ರಯತ್ನವು ಸಾಧ್ಯ ವಾಗಲಿಕ್ಕಿಲ್ಲೆಂದು ಸುಮ್ಮನಿದ್ದೆನು. ಆದರೆ ತಂಗೀ! ನಿನ್ನ ಸಾಹಸವೆಷ್ಟು! ಶತ್ರುಪಕ್ಷದವರು ನಿನ್ನನ್ನು ಕಂಡರೆ, ನಿನಗೆಂಥ ವಿಪತ್ತು ಸಂಭವಿಸುವುದೆಂಬುದನ್ನು ನೀನು ತಿಳಿದಿರುವೇ?

ಕುಮುದಿನಿ— ಒಡೆಯರೇ! ಕರ್ನಾಟಕದ ಕಲ್ಯಾಣವು ನಮ್ಮ ಕುಲದ ಧೈರ್ಯವು. ನನ್ನ ತವರಮನೆಯ ಮತ್ತು ಅತ್ತೆಮನೆಯ ಕುಲಪರಂಪರೆಗನುಸರಿಸಿ, ಈ ಅಲ್ಪ ಸ್ವಲ್ಪ ಸೇವೆಯ ವ್ರತ ವನ್ನು ಅಂಗೀಕರಿಸಿರುವೆನು. ಇದರಲ್ಲಿ ಸಾಹಸವೇನು! ನಾನು ಪಾಮರಳು, ಅದನ್ನು ಮಾಡುವದೆಂತು? ಮಹಾ ರಾಜ ಈಗ ಈ ತುರುಂಗಕ್ಕೆ ಪವಿತ್ರ ಮಂದಿರದ ಸ್ವರೂಪವು ಬಂದಿದೆ. ಈ ಮಂದಿರದಲ್ಲಿರುವ ರಾಷ್ಟ್ರದೈವತದ ದರ್ಶನ ಕ್ಕಾಗಿ ನಾನು ಮಹಾಯಾತ್ರೆಯನ್ನು ಕೈಕೊಂಡಿರುವೆನು. ನನ್ನ ಪತಿಭಕ್ತಿಯ, ಪತಿಯ ಸ್ವಾಮಿಭಕ್ತಿಯ ಪುಣ್ಯ ಪ್ರಭಾವದಿಂದ ನಾನು ಈ ಕಾರ್ಯದಲ್ಲಿ ಯಶ ಹೊಂದುವೆ ನೆಂದು ಆತ್ಮವಿಶ್ವಾಸವು ನನಗೆ ತಾನೇ ಹೇಳುವುದು. ಆದ ಕಾರಣ, ನನ್ನ ವಿನಂತಿಯಂತೆ, ಇನ್ನು ತಡಮಾಡದೆ, ಚಿಕ್ಕ ದೊರೆಯವರನ್ನು ಈ ದಾಸಿಯ ಉಡಿಯಲ್ಲಿ ಹಾಕಬೇಕೆಂದು ಬೇಡುವೆನು.

ರಂಗರಸರು— ಜಗರಾಯನು ಹೂಡಿದ ಕಪಟ ಕಾರಸ್ಥಾನದಲ್ಲಿ, ಕೆಲವರು ಅರಿಯದೆ, ಅವನ ನಿಂದ್ಯ ಕರ್ಮದಲ್ಲಿ, ಅವನ ಸಹಕಾರಿ ಗಳಾದರು. ಕೆಲವರು ಅವನು ತೋರಿಸುವ ಭೂಮಿದಾನ ಗಳಿಗಾಗಿಯೂ, ಹೊನ್ನಿನಾಸೆಗಾಗಿಯೂ ದರಬಾರದ ಬಿರುದುಗಳಿಗಾಗಿಯೂ ಆಸೆಪಟ್ಟು, ತಮ್ಮ ವಿವೇಕವನ್ನು ಬದಿಗೊತ್ತಿ, ಇಡೀ ಕನ್ನಡಿಗರ ದ್ರೋಹಕ್ಕೆ ಪಾತ್ರರಾ ಗಿರುವರು. ಸ್ವರ್ಗೀಯ ಪ್ರದೇಶವಾದ, ನಂದನವನವಾದ

ಈ ನಮ್ಮ ತಾಯ್ನಾಡಿನಲ್ಲಿ ಇಂತಹ ಕಂಟಕಗಳು ಹೇರಳ ವಾಗಿ ಬೆಳದುದ್ದರಿಂದ ಇದು ಒಂದು ಕಾಡಾಗಿದೆ. ನಮ್ಮ ಪೂರ್ವಜರು ಸ್ವಪರಾಕ್ರಮದಿಂದ ಸ್ಥಾಪಿಸಿದ ಫಲಭರಿತ ವಾದ ಪ್ರದೇಶವು, ಈಗ, ಇಂಥ ವೃತ್ತಿಹೀನ, ಚಾರಿತ್ರ ಹೀನ ವ್ಯಕ್ತಿಗಳಿಂದ ಮಳಲುನಾಡಾಗಿದೆ. ಆದರೂ ನಾಯಕ ರಂಥ ನರಶಾರ್ದೂಲರ ಸಿಂಹಗರ್ಜನೆಯು ಇನ್ನೂ ಅಲ್ಲಲ್ಲಿ ಕೇಳಿಬರುವದರಿಂದ, ಈ ನರಿಗಳು ಈ ಸುವರ್ಣ ಭೂಮಿ ಯನ್ನು ಸ್ವೇಚ್ಛಾಚಾರದಿಂದ ಆಗಿಯಲು, ಹೆದರುತ್ತಿರು ವರು. ಜಗರಾಯನ ಮೋಸದ ಮುಸುಕಿನಲ್ಲಿ ಅಡಗಿ ಜಡತ್ವವನ್ನು ಪಡೆದಿರುವ ಕನ್ನಡಿಗರನ್ನು ನೀವೀರ್ವರೂ ನರನಾರಿ ಕೇಸರಿಗಳು ನಿಮ್ಮ ಗುಡುಗಿನಿಂದ ಎಚ್ಚರಿಸಿ, ಅವರ ಸ್ವಸ್ವರೂಪಜ್ಞಾನವನ್ನೂ, ಪೂರ್ವಸ್ಮೃತಿಯನ್ನೂ, ಅವರಲ್ಲಿ ಉಂಟುಮಾಡುವಿರೆಂದು ತುಂಬಾ ನಂಬಿದ್ದೇನೆ. ತಂಗೀ! ನಿನ್ನ ಹೆಸರೇನು ?

ಕುಮುದಿನಿ— ಈ ಸೇವಕಿಗೆ ಕುಮುದಿನಿಯೆಂದೆನ್ನುವರು.

ರಂಗರಸರು— ಹೀಗೇನು ? ಕುಮುದಿನೀ! ಹಿಂದೆ ಒಮ್ಮೆ ಕನ್ನಡಿಗರಿಗೆ ಇದಕ್ಕೂ ಹೆಚ್ಚಿನ ದಾರುಣಾವಸ್ಥೆಯು ಒದಗಿದ ವೇಳೆ ಯಲ್ಲಿ ವಿಶ್ವಪ್ರೇಮಿಗಳಾಗಿದ್ದ ಶ್ರೀ ವಿದ್ಯಾರಣ್ಯರು ಕರ್ನಾ ಟಕವನ್ನು ಉದ್ಧರಿಸಿರುವರೆಂದೇ ನಾವಿಂದು ಬಾಳಿ ಬದುಕು ಮಾಡುತ್ತಲಿರುವೆವು. ಈಗ ಆ ಕಾರ್ಯವನ್ನು ಕೈಕೊಂ ಡಿರುವ ನಿನ್ನನ್ನು ಕಂಡರೆ, ನೀನೂ ಆ ತಪಸ್ವಿಗಳ ಆಜ್ಞಾನು ಸಾರವಾಗಿ ಅವತರಿಸಿರುವ ನಾಡುದೇವಿಯೆಂಬ ಪೂಜ್ಯ ಭಾವವು ನನ್ನಲ್ಲಿ ಆಗಲೇ ಉದ್ಭವಿಸಿರುವುದು. (ಚಿನ್ನವೇಂಕಟ ನಿಗೆ) ಕಂಡಾ! (ತನ್ನ ರಾಣಿಯೆಡೆಗೆ ತೋರಿಸಿ) ಇವಳು ನಿನ್ನ ಮಾತೃದೇವಿಯು, (ಕುಮುದಿನಿಯೆಡೆಗೆ) ಇವಳು ನಿನ್ನ ನಾಡ ದೇವಿಯು. ನೀನು ಇನ್ನು ಕೆಲಕಾಲ, ಈ ದೇವಿಯ ಮಂದಿರದಲ್ಲಿ ಉಂಡಾಡಿ, ಉದ್ದಂಡ ಆಯುಷ್ಯವಂತನಾಗು.

ಇವಳ ಶಿಕ್ಷಣದಿಂದ ಎಲ್ಲ ಕಲೆಗಳಲ್ಲಿಯೂ ನಿಪುಣನಾಗಿ, ರಾಷ್ಟ್ರಕಾರ್ಯವನ್ನು ಕೈಕೊಂಡು, ಕನ್ನಡಿಗರ ಕೀರ್ತಿಯನ್ನು ಕಾಪಾಡುವ ಕರ್ಮಯೋಗಿಯಾಗು. (ತನ್ನ ರಾಣಿಗೆ) ಪ್ರಿಯೇ! ಇವಳ ವಿಷಯವಾಗಿ, ನಿನ್ನಲ್ಲಿರುವ ಪ್ರೇಮಭಾವವನ್ನು ಬರೀ ಬಾಯಿಯಿಂದ ಬಣ್ಣಿಸದೆ, ಪ್ರತ್ಯಕ್ಷ ನಿನ್ನ ಪ್ರಾಣನಾದ ಚಿನ್ನವೇಂಕಟನನ್ನು ಇವಳಿಗೊಪ್ಪಿಸೆಂದು ನಾನೇನು ನಿನಗೆ ಬೇರೆ ಹೇಳಬೇಕೇ?

ರಾಣಿ— ಪತಿರಾಜರೇ! ಈ ಕುಮುದಿನಿಯಂಥ ಪತಿವ್ರತೆಯ ಸಾಹಸವು ಯಾರ ಸಲುವಾಗಿದೆಯೆಂಬುದನ್ನು ನಾನೇನು ಅರಿಯೆನೇನು? ಜಗರಾಯನ ಮರಣಕರ ಜ್ವಾಲೆಯಲ್ಲಿ ಸಿಲುಕಿರುವ ಚಿನ್ನನಿಗೆ ಜೀವದಾನವನ್ನು ನೀಡಲಿಕ್ಕೆ ಬಂದ ಇವಳನ್ನು ನಂಬದಿರುವಷ್ಟು ಕೃತಘ್ನತೆಯು ನನ್ನಲ್ಲಿಲ್ಲ. (ಕುಮುದಿನಿಗೆ) ಸಹೋದರೀ! ಇನ್ನು ವಾತ್ಸಲ್ಯದಿಂದ ನನ್ನ ಕಂಗಳಲ್ಲಿ ನೀವು ಅಶ್ರುಗಳನ್ನು ಕಂಡರೆ, ಕ್ಷಮಿಸಿ, (ಚಿನ್ನನಿಗೆ) ವತ್ಸಾ! ವೇಂಕಟಾ! ಬಾರಯ್ಯಾ! ಇತ್ತ ಬಾ. ಒಮ್ಮೆ ಮನಸಮುಟ್ಟಿ ಮುದ್ದಿಡುವೆನು. ಕಂದಾ! ನಿಮಿತ್ತ ಮಾತ್ರ ನಿನ್ನನ್ನು ಹೆತ್ತು, ಚಿಕ್ಕ ವಯಸ್ಸಿನಲ್ಲಿಯೇ ನಾನು ನಿನ್ನನ್ನು ನಾನಾ ಭವಣೆಗಳಿಗೆ ಗುರಿಮಾಡಿದೆನು. ಕಾಲಪಾಶದಲ್ಲಿ ಸಿಲುಕಿರುವ ಕ[illegible]ಣ ನಿನ್ನ ಬಾಲಲೀಲೆಗಳನ್ನು ಕಣ್ಣಾರೆ ಕಂಡು, ಸಂತೋಷಪಡುವ ದಿನಗಳು, ಈ ಅಭಾಗಿನಿಗೆ ಇನ್ನೆಂದು ಲಭಿಸುವವೋ ಕಾಣೆ. ಚಿನ್ನಾ! ಶ್ರೀ ಕೃಷ್ಣನು ಕಾರಾಗೃಹದಲ್ಲಿಯೇ ಜನ್ಮಿಸಿದನು. ನಂದ ಯಶೋದೆಯವರ ಅಂಕಪೀಠಗಳಲ್ಲಿಯೇ ಅಂದವಾಗಿ ಬೆಳೆದು, ಪುಂಡ ಕಂಸನನ್ನು ಕೊಂದು, ವಸುದೇವ ದೇವಕಿಯವರ ದಾಸ್ಯ ಶೃಂಖಲೆಗಳನ್ನು ಕಡಿದುಹಾಕಿದನು. ಹೋಗಿ ಬಾ ಕಂದಾ!


ಚಿನ್ನವೇಂಕಟ— ಅಮ್ಮಾ! ಹೋಗಲಿಕ್ಕೆ ನಾನೊಲ್ಲೆನ್ನುವದಿಲ್ಲ. ಆದರೆ ನಿಪುಣ ನಾಯಕರ ಸೆರೆಯಿಂದ ಬೇಗ ನಿಮ್ಮ ಬಿಡುಗಡೆ ಮಾಡುವ

ಬಲವು ನನಗೆ ಬರಲೆಂದು ದೇವರನ್ನು ನೀವೆಲ್ಲರೂ ಪ್ರಾರ್ಥಿಸಿರಿ. ಕಂಗಳಿಂದ ಮರೆಯಾದರೂ ನನ್ನ ಹೃದಯದಲ್ಲಿ ಮಾತೇ! ನಿನ್ನ ಮೂರ್ತಿಯೇ ಅಧಿಷ್ಠಿತವಾಗಿದೆ. ಆ ಮೂರ್ತಿಯು ಪ್ರತಿಬಿಂಬವು ನನಗೆ ಈ ಮಹನೀಯಳಲ್ಲಿ ಕಾಣುವುದು. ಹಲವು ಮಾತುಗಳಿಂದೇನು; ತಾಯೇ! ನನಗಿಂತಲೂ ಹಿರಿಯ ನಾರಿಯರನ್ನು ನೋಡುತ್ತಲೇ ನಿನ್ನನ್ನೇ ಕಂಡಂತಾಗುವುದು. ಅಮ್ಮಾ ನೀನು ತಿಲಮಾತ್ರವೂ ಚಿಂತಿಸಬೇಡ. ನಾನು ಬೇಗನೇ ಈ ದೇವಿಯ ನೇತೃತ್ವದಲ್ಲಿ ಕೆಲಕಾಲ ಕಳೆದು, ನಿಮ್ಮನ್ನು ಮುಕ್ತಮಾಡುವೆನು. (ಕುಮುದಿನಿಗೆ) ದೇವೀ! ನಾನೀಗಲೇ ಬರಬೇಕೇನು?

ಕುಮುದಿನಿ—ಅಹುದು ಒಡೆಯರೇ! ತಡಮಾಡಲು. ಅವಕಾಶವಿಲ್ಲ. ಆಹಾ! ಸಾಮ್ರಾಜ್ಞಿಯವರೇ! ಈ ಬಡದಾಸಿಗೆ ಯಶೋದೆ ದೇವಿಯವರ ಸಾದೃಶ್ಯವನ್ನು ಕೊಟ್ಟು ಕೃತಕೃತ್ಯಳನ್ನಾಗಿ ಮಾಡಿದಿರಿ. ಈ ಚಿನ್ನದೇವರನ್ನು ಪೂಜಿಸಿ, ನಮ್ಮ ಜನ್ಮಗಳನ್ನು ಸಾರ್ಥಕಗೊಳಿಸಲು, ನೀವೊಂದು ವರವನ್ನೇ ನೀಡಿದಿರಿ; ನಿಮ್ಮನ್ನೆಷ್ಟೆಂದು ಕೊಂಡಾಡಲಿ......

ಚಿನ್ನವೇಂಕಟ—ಅಮ್ಮಾ ಅಪ್ಪಣೆಯಾಗಲಿ; (ಎಲ್ಲರನ್ನೂ ನಮಸ್ಕರಿಸಿ, ನಾಗಲಾಂಬಿಕೆಯ ಬಳಿಗೆ ಹೋಗಿ) ಅಮ್ಮಾ! ನಾಗಲಾಂಬಿಕೆಯು ನಿದ್ದೆ ಹೋಗಿರುವಳಲ್ಲ? ಎಬ್ಬಿಸಲೇ? ಬೇಡ; ಅತ್ತತ್ತು ಇವಳ ಕಣ್ಣುಗಳನ್ನು ನೋಡು, ಎಷ್ಟು ಉಬ್ಬಿವೆ. ತಂಗೀ! ಸುಮ್ಮನೇ ಹಟಮಾಡಬೇಡ. ಲಲ್ಲೆಯಿಂದಲೂ, ಆ ನಿರಿಗನ್ನಡದ ತೊದಲು ನುಡಿಗಳಿಂದಲೂ, ನನ್ನ ವಿರಹದಿಂದ ತಲ್ಲಣಿಸುವ ನಮ್ಮನ್ನು ಹೆತ್ತವರನ್ನು ಚನ್ನಾಗಿ ರಂಜಿಸಕ್ಕಾ! ನಡೆ ದೇವೀ! ತಡವಾಗುವುದು.

ರಾಣಿ—(ಚಿನ್ನನನ್ನು ಬಿಗಿದಪ್ಪಿ ಪುನಃಪುನಃ ಮುದ್ದಿಟ್ಟು) ವೀರವತ್ಸಾ! ಆಹಾ! ಪುತ್ರನಿದ್ದರೂ ಇಂಥ ನರಸಿಂಹ ಪುರುಷೋತ್ತಮನಿರಬೇಕು. ನಿನ್ನ ಪರಾಕ್ರಮದ ಕಾರ್ಯಗಳಿಂದ ಇದೀ



ರಾಣಿ—ವೀರವತ್ಸಾ ! ಆಹಾ ! ಪುತ್ರನಿದ್ದರೂ ಇಂಥ ನರಸಿಂಹ ಪುರುಷೋತ್ತಮನಿರಬೇಕು. (ಪುಟ ೭೮)

ಪೃಥ್ವಿಯನ್ನೇ ಆಶ್ಚರ್ಯಗೊಳಿಸುವಿ; ಇದರಲ್ಲೇನು ಸಂದೇಹವಿಲ್ಲ. ಕಂದಾ! ನನ್ನ ಉಳಿದ ಆಯುಷ್ಯವೆಲ್ಲವನ್ನು ದೇವರು ನಿನಗೇ ನೀಡಲಿ? ಎಷ್ಟು ಜನ್ಮಗಳ ಪುಣ್ಯಫಲ ದಿಂದ ನಾನು ನಿನ್ನಂಥ ಪುತ್ರನನ್ನು ಪಡೆದಿರಬಹುದು. ಧ್ರುವ ಪ್ರಲ್ಹಾದರಂಥವರ ನಿನ್ನ ವೀರ ವಾಣಿಯನ್ನು ಕೇಳಿ ನಾನಿಂದು ಧನ್ಯನಾದೆನು. ಕಂದಾ! ಗರ್ಭದಲ್ಲಿರು ವಾಗಲೇ ಪರಮಾತ್ಮನಿಂದ ಈ ದೇವಭಕ್ತಿಯ ದೇಶ ಭಕ್ತಿಯ ಪಾಠಗಳನ್ನು ಕಲಿತೆಯಾ! ಪತಿರೂಪಿಯಾದ ಪರಮೇಶ್ವರನ ಆರಾಧನೆಯಿಂದ, ನಿನ್ನಂಥ ಪ್ರತಾಪಶಾಲಿ ಪುತ್ರನ ಗರ್ಭವನ್ನು ಯಾವಳು ತಾಳುವಳೋ, ಅವಳ ಆ ನವಮಾಸವೇ ಅವಳ ತಪದ ಕಾಲವು, ಆ ಶಿಶುವಿನ ಜನ್ಮವೇ ಅವಳ ಮುಕ್ತಿಯು. ಆಹಾ! ಎಷ್ಟು ಸುಂದರ ಮೂರ್ತಿಯಿದು! ಈ ಸುಂದರ ಉರುಳುಗೂದಲುಗಳೂ, ಈ ಕಮಲ ನೇತ್ರಗಳೂ, ಈ ವಿಶಾಲ ಭಾಲಪ್ರದೇಶವೂ, ಈ ಅಲೌಕಿಕ ತೇಜವೂ—ಇವೆಲ್ಲವುಗಳನ್ನು ನೋಡಿದರೆ, ನನ್ನ ಉದರದಲ್ಲಿ ಪುನಃ ಹರಿಹರರಾಯರೇ ಜನ್ಮವನ್ನೆತ್ತಿರು ವರೋ ಎಂಬ ಕಲ್ಪನೆಯಿಂದ ನನ್ನ ಹರ್ಷವು ದ್ವಿಗುಣಿತ ವಾಗುವುದು. (ಕಂಠ ಬಿಗಿದು) ನನ್ನ ಜೀವನ ಸರ್ವಸ್ವ ಯಾದ ಚಿನ್ನಾ! ಮಾತಾಪಿತೃಗಳನ್ನು ಅಗಲಿದೆನೆಂದು ಎಂದೂ ಶೋಕಿಸಬೇಡ ಕಂಡಿಯಾ! ಈ ದೇವಿಯ ಪ್ರೇಮ ಪೂರ್ಣ ಲಾಲನೆಯಲ್ಲಿ ಸುಖದಿಂದ ಬಾಳಿ, ತರುವಾಯ ನಮ್ಮ ಸುದೈವವಿದ್ದರೆ, ಈ ಮಾತೆಯನ್ನು ಕಾಪಾಡು, ಇಲ್ಲದಿದ್ದರೆ, ಎಲ್ಲ ಕನ್ನಡಿಗರ ತಾಯಿಯಾದ ಕರ್ನಾಟಕ ಮಾತೆಯ ಸೇವೆಯ ವ್ರತವನ್ನು ಪಾಲಿಸಿ, ನಿನ್ನ ಹಿಂದಿನ ನಾಲ್ವತ್ತೆರಡು ಪಿತೃಗಳನ್ನೂ ಮುಂದಿನ ನಾಲ್ವತ್ತೆರಡು ಸಂತತಿಗಳನ್ನೂ ಉದ್ಧರಿಸು. ನಮ್ಮ ರಾಯರ ಕುಲ ಭೂಷಣನಾಗು. ಹೋಗಿ ಬಾರಯ್ಯಾ, ಕಂದಾ! ಶ್ರೀ

ಭುವನೇಶ್ವರಿಯು ನಿನ್ನನ್ನು ರಕ್ಷಿಸುವಳು. (ಎಲ್ಲರಿಗೂ ಹೋಗಿಬರುವೆನೆಂದು ಕುಮುದಿನಿಯೂ ಚಿನ್ನನೂ ಹೇಳತೊಡಗುವರು.)

ರಂಗರಸರು— ಹುಂ; ಕುಮುದಿನೀ! ರಾಜೀದೇವನು ಬರುವ ವೇಳೆಯಾಯಿತು. ಬೇಗ ಇವನನ್ನು ಕರೆದುಕೊಂಡು ಪ್ರತ್ಯಕ್ಷ ಗೋಕುಲವಾದ ನಮ್ಮ ಗೋಬ್ರಾಹ್ಮಣರ ರಕ್ಷಕನಾಗಿರುವ ನಾಯಕರ ಪಾಳಯವನ್ನು ಪ್ರವೇಶಿಸು.

(ಅವರಿಬ್ಬರೂ ಹೋಗುವರು. ಪರದೆ ಬೀಳುವುದು.)

೫ನೇ ನೋಟ

[ಅಡವಿಯ ಪರದೆ.]

[ಚಿನ್ನನೂ ಕುಮುದಿನಿಯೂ ಬರುವರು.]

ಚಿನ್ನವೇಂಕಟ—ದೇವೀ! ಇದೇನು? ಎಂತಹ ಘೋರ ಕಾನನದಲ್ಲಿ ನಮ್ಮ ಪ್ರವೇಶವಾಗಿದೆಯಲ್ಲ?

ಕುಮುದಿನಿ—ಅಹುದು ದೊರೆಯರೇ! ನನ್ನ ಪತಿರಾಜರು ನನಗಿಲ್ಲಿ ಬರಲು ಆಜ್ಞಾಪಿಸಿರುವರು. ಬಹಳ ಮಾಡಿ ಅವರೀಗಲೆ ಇಲ್ಲಿಗೆ ಬರುವರು. ನಿಮಗೆ ನೀರಡಿಕೆಯಾಗಿದೆಯೆಂದು ಹೇಳುತ್ತಿದ್ದಿರಲ್ಲ? ನಡೆಯಿರಿ. ಅವರು ಬರುವವರೆಗೆ ನಾವು ಪುನಃ ಈ ಸ್ಥಳಕ್ಕೆ ಬಂದು ಮುಟ್ಟುವಾ. ಆಕೋ! ಇದೇ ದಿಬ್ಬದ ಕೆಳಗೆ ತುಂಗೆಯಿರುವಳು.

ಚಿನ್ನವೇಂಕಟ—ನೀನೇಕೆಂದು ನನ್ನೊಡನೆ ಬರುವೇ? ನಾನೇನು ಭಯ ಪಡುವದಿಲ್ಲ. ಕೊಂಚ ಇಲ್ಲಿಯೇ ಕುಳಿತು ನೀನು ವಿಶ್ರಾಂತಿಯನ್ನು ಹೊಂದು. ನಾನೀಗಲೇ ನೀರನ್ನು ಕುಡಿದು ಬರುವೆನು. ಈ ಮುಳ್ಳು ಕಲ್ಲುಗಳಿಂದ ನಿನ್ನ ಕಾಲುಗಳಿಗೆ ನೋವಾಗುವುದು.

ಕುಮುದಿನಿ—ರಾಜಕುಮಾರರೇ! ನೀವು ಕುಳಿತಲ್ಲಿಯೇ ನಾನು ನೀರನ್ನು ತಂದುಕೊಡಬೇಕು. ಆದರೆ ಮೊದಲೇ ಕನ್ನಡಿಗರು ಸ್ವಾವಲಂಬಿಗಳು; ಅದರಲ್ಲಿಯೂ ನೀವಂತೂ ಅವರ ಒಡೆಯರು. ಆದಕಾರಣ ಅದು ನಿಮ್ಮ ಹುಟ್ಟುಗುಣವು. ಈ ಸಹಜ ಸ್ವಭಾವಕ್ಕನುಸರಿಸಿ, ನೀವೇ ಬರುವ ಹಟಹಿಡಿದುದ್ದರಿಂದ ಈ ದಾಸಿಗೆ ನಿಮ್ಮನ್ನು ನಡಿಸುತ್ತ ಕರಕೊಂಡು ಹೋಗಬೇಕಾಗುವುದು. ರಾಯರೇ! ನಿತ್ಯದ ನಿಮ್ಮ ಪುರಾಣ ಪಾಠಗಳಲ್ಲಿ, ಸ್ವರ್ಗದಲ್ಲಿ ಕ್ಷೀರಸಾಗರವೆಂಬ ಸಮುದ್ರವಿರುವದೆಂಬದನ್ನು ನೀವು ಓದಿರಬಹುದು. ಶ್ರೀ ಪಂಪಾಪತಿಯ ಕ್ಷೇತ್ರಸ್ಥಾನವಾದ ನಮ್ಮ ತಾಯ್ನಾಡಿನಲ್ಲಿಯೂ ಅಂತಹದೊಂದು ಅಮೃತಮಯ ತೊರೆಯು ಹರಿಯುವದು. ಅದೇ ತುಂಗಭದ್ರೆಯು. ಒಡೆಯರೇ! ಇಂತಹ ತೀರ್ಥದ ಲಾಭವಾಗುವ ಸುಯೋಗವನ್ನು ನಾನು ಹೇಗೆ ತಾನೇ ಹೋಗಗೊಟ್ಟೇನು. ನಡೆಯಿರಿ ನಾಯಕರು ಬರುವ ವೇಳೆಯಾಯಿತು. ಬೇಗ ಜಲಪಾನಮಾಡಿ, ಅವರೊಡನೆ ಬೆಳಗಾಗುವಷ್ಟರಲ್ಲಿ ನಮ್ಮ ಪಾಳಯವನ್ನು ಸೇರುವಾ. (ಇಷ್ಟರಲ್ಲಿ ಜಗರಾಯನೂ, ಮಕರನಾಯಕನೂ, ತಿಮ್ಮನಾಯಕನೂ ತಮ್ಮ ಇಬ್ಬರು ಜನರೊಡನೆ ಬಂದು ಅವರನ್ನು ಸುತ್ತುಗಟ್ಟುವರು.)

ಜಗರಾಯ—(ದ್ವೇಷದಿಂದ) ಏ ಕಪಿಕುಮಾರೀ ನೀನಾರು?

ಕುಮುದಿನಿ—(ಎದೆತಟ್ಟಿ) ವೀರ ಎಚ್ಚನಾಯಕರ ಧರ್ಮಪತ್ನಿ.

ಜಗರಾಯ—ವೀರ ಎಚ್ಚನಾಯಕರ ಧರ್ಮಪತ್ನಿ??? ಕವಡಿ ಕಾಸಿನ ಬೆಲೆ ಬಾಳದ ನಾಯಕನ ಸ್ತ್ರೀಯು?? ನಿಲ್ಲು, ಕ್ಷುದ್ರ ಕಾವಲುಗಾರರನ್ನು ಮೋಸಗೊಳಿಸಿ, ನೀನು ಈ ರಾಜಪುತ್ರನನ್ನು ಅಪಹರಿಸಿಕೊಂಡುಹೋಗಬೇಕೆನ್ನುವಿಯೋ? ಹೀಗೆಮಾಡುವುದರಿಂದ, ನಿನ್ನ ಕಾರ್ಯವಂತೂ ಸಫಲವಾಗಲಿಲ್ಲ. ಆದರೆ ಸ್ವತಃ ಸಂಕಟಕ್ಕೊಳಗಾಗಿ, ಆಜನ್ಮ

ಜಗರಾಯನ ಅಂತಃಪುರವನ್ನು ಮಾತ್ರ ಪ್ರವೇಶಿಸುವೆ, ದೈವವು ಬಲವತ್ತರವಾದರೆಯೇ ನಿನ್ನಂತಹವರು ವಶರಾಗುವರು. (ತನ್ನ ಜನರಿಗೆ) ಹೂ, ನೋಡುವಿರೇನು? ಕಟ್ಟಿರಿವಳನ್ನು. (ಚಿನ್ನನಿಗೆ) ಏ? ಹುಂಬ ಹುಡುಗಾ? ನೀನೇಕೆ ಇವಳೊಡನೆ ಹೊರಬಿದ್ದೆಯೋ?

(ಚಿನ್ನನು ತನ್ನ ಕೈಗತ್ತಿಯನ್ನು ಹಿರಿದು ಅವರ ಮೇಲೆ ಹೋಗಲು ಕುಮುದಿನಿಯು ಅವನನ್ನು ಸರಿಸಿ ತಾನೇ ಮುಂಬರುವಳು.)

ಕುಮುದಿನಿ—ಎಲೈ ದುರಾತ್ಮನೇ? ನಿನ್ನ ಕನ್ಯೆಯ ಸ್ಥಾನದಲ್ಲಿ ಒಪ್ಪುವ ಅಬಲೆಯನ್ನು ಕಾನನದಲ್ಲಿ ಈ ರೀತಿಯಾಗಿ ಕಾಡುವಿಯಾ? ಈ ಕುಮುದಿನಿಯು ಜೀವಂತಳಾಗಿರುವವರೆಗೂ ನಿಮ್ಮ ವಶಳಾಗಲಿಕ್ಕಿಲ್ಲ. ಇದನ್ನು ನೀನು ಸೆರಗಿಗೆ ಗಂಟು ಹಾಕಿಕೊ. ನಾನಿಲ್ಲಿಗೆ ಬರುವಾಗಲೇ ನನ್ನ ಜೀವದ ಹಂಗು ಬಿಟ್ಟೇ ಬಂದಿದ್ದೇನೆ....

ಚಿನ್ನವೇಂಕಟ—ದೇವೀ! ನಾನಿರಲು ನಿನಗೇಕೆ ಭಯ? ನನ್ನೆದುರಿಗೆ ನಿನ್ನ ಅವಮಾನ! ಕಾನನದಲ್ಲಿರುವ ಅಬಲೆಯ ಮೇಲೆ ದಾಳಿ ಮಾಡುವವರನ್ನು ನಾವು ಕ್ಷತ್ರಿಯರು ಎಂದೂ ನೋಡಲಾರೆವು. (ಅವರ ಮೇಲೆ ಹೋಗಲು ಕುಮುದಿನಿಯು ಅವನನ್ನು ತಡೆಯುವಳು.) ಬಿಡು ದೇವೀ! ನಾನು ಚಿಕ್ಕವನೆಂದು ನೀನು ಅಧೀರಳಾಗಿರುವಿಯೇನು? ಕೇವಲ ಬಾಲಕನಾದ ಅಭಿಮನ್ಯುವು ಶತ್ರುಪಕ್ಷದವರ ಚಕ್ರವ್ಯೂಹವನ್ನು ಪ್ರವೇಶಿಸಿ ಕಂಡವರನ್ನು ತುಂಡರಿಸಿ ಕಾದಾಡಿ ಕಾದಾಡಿ ಶ್ರೀ ಕೃಷ್ಣನ ಪಾದಗಳಾಶ್ರಯವನ್ನು ಹೊಂದಲಿಲ್ಲವೇ? ಸ್ವಲ್ಪ ಸರಿ. ನಾನೀಗಲೇ ಇವರಿಗೆ ತಕ್ಕ ಪ್ರಾಯಶ್ಚಿತ್ತವನ್ನೀಯುವೆನು.

ಕುಮುದಿನಿ—(ಅವನನ್ನು ತಡೆಯುತ್ತ) ನಿಲ್ಲಿ, ದೊರೆಯವರೇ! ಮೊದಲು ನಾನೇ ಇವರನ್ನು ನೋಡಿ ಬಿಡುವೆನು. ತಡವೇಕೇ? ನೀಚರೇ! ಆಗಿಹೋಗಲಿ.....

ಚಿನ್ನವೇಂಕಟ—ಹಾಗಲ್ಲ ದೇವೀ! ರಣಕ್ಷೇತ್ರದಲ್ಲಿ ಕ್ಷತ್ರಿಯಕುಮಾರನು ಕಾದಾಡದಿರುವುದು ಅವನಿಗೆ ಲಾಂಛನಾಸ್ಪದವು. ಎಲೋ ದುರುಳರೇ! ಬನ್ನಿ. (ಅವರೊಡನೆ ಕಾದಾಡುತ್ತ ಗಾಯಹೊಂದಿ ಮೂರ್ಛಿತನಾಗಿ ಬೀಳುವನು. ಇದನ್ನು ನೋಡಿ ಕುಮುದಿನಿಯು ತ್ವೇಷದಿಂದ ಮುಂದೆ ಸರಿಯುವಳು.)

ಕುಮುದಿನಿ—ಷಂಢರೇ! ಬನ್ನಿ ಈಗಾದರೂ ಈ ವೀರ ವನಿತೆಯೊಡನೆ ಯುದ್ಧವನ್ನು ಮಾಡಿರಿ. ಹೆಸರಿಗೆ ಮಾತ್ರ ಪುರುಷರಾದ ನೀವು ಸಾಧ್ಯವಾದರೆ ಅಬಲೆಯ ರಕ್ತವನ್ನು ಕುಡಿದು ರಣ ಹದ್ದುಗಳಾಗಿರಿ. (ತನ್ನ ಉಡಿಯೊಳಗಿನ ಕಟ್ಯಾರಿಯನ್ನು ತೆಗೆದೊಡನೆ ಅವರೊಳಗಿನ ಇಬ್ಬರನ್ನು ನೆಲಕ್ಕೆ ಕೆಡಹುವಳು. ಜಗರಾಯನೂ ಅವನ ಇತರ ಜನರೂ ಅವಳನ್ನು ಹಿಡಿದು ಕಟ್ಟುವರು.)

ಜಗರಾಯ—(ತುಚ್ಛತನದಿಂದ) ಏ ದುರ್ದೈವೀ ಪ್ರಾಣೀ! ಇಷ್ಟು ಹೊತ್ತಿನ ವರೆಗೆ ನಾನು ನಿನ್ನ ಜೀವವನ್ನು ಉಳಿಸಿ ನನ್ನ ಅಂತಃಪುರ ದಲ್ಲಿಯೇ ಇಟ್ಟುಕೊಳ್ಳಬೇಕೆನ್ನುತ್ತಿದ್ದೆನು. ಆದರೆ ಈಗ ಮಾತ್ರ ಹಾಗೆ ಮಾಡುವುದಿಲ್ಲ. ನಿನ್ನಿಂದ ಘೋರವಾದ ರಾಜದ್ರೋಹದ ಪಾತಕವಾಗಿರಲು ನಿನಗೆ ಜೀವದಾನ ವನ್ನು ನೀಡುವೆನೆಂದು ಹೇಳಿದರೂ ಕೊನೆಗೆ ನಿನ್ನ ಜಾತಿ ಯನ್ನು ನೀನು ಮರೆಯಲಿಲ್ಲ. ಕೆಟ್ಟ ನಾಗರಹಾವಿನ ಕುಲದವಳು ನೀನು; ನಾನು ನಿನ್ನನ್ನು ಮನೆಯಲ್ಲಿಟ್ಟು ಕೊಂಡರೆ ಒಂದಾನೊಂದು ದಿನವಾದರೂ ನಿನ್ನ ವಿಷಾರಿ ಹಲ್ಲುಗಳ ಪ್ರಯೋಗವು ನನ್ನ ಮೇಲೆಯೇ ಆಗುವುದು. ಇದರಲ್ಲೇನು ಸಂದೇಹ? ಯಾಕೇ? ತಿಮ್ಮನಾಯಕರೇ! ಈ ಹಾವನ್ನು ಈಗಲೇ ಜಜ್ಜಿಬಿಡುವುದೇ ಲೇಸಲ್ಲವೇ?

ಕುಮುದಿನಿ— ದೇಶದ್ರೋಹೀ! ರಾಜದ್ರೋಹೀ!! ಧರ್ಮದ್ರೋಹೀ!!! ನೀಚಾ! ಇವೆಲ್ಲ ಪದವಿಗಳು ನಿನಗೋಸ್ಕರ. ಆ ಚಿಕ್ಕ ರಾಜನು ಯಾವ ಅರಸುಮನೆತನದವನೋ? ನೋಡು.

ಚೆನ್ನಾಗಿ ದಿಟ್ಟಿಸಿ ನೋಡು; ನಿಜವಾದ ರಾಜಪುತ್ರ ನಿಲ್ಲಿರುವನು......

ಮಕರ, ತಿಮ್ಮ—ರಾಜದ್ರೋಹ! ಭಯಂಕರ ರಾಜದ್ರೋಹ!! ಮಂತ್ರಿಯರೇ! ಇಂಥವಳಿಗೆ ದೇಹಾಂತ ಶಾಸನ....

ಜಗರಾಯ —ಅಹುದಲ್ಲ? ಹಾಗಾದರೆ ತಡವೇಕೇ? ಆದದ್ದಾಗಲಿ. (ತನ್ನ ಸೇವಕರಿಗೆ) ಎಲೋ! ಇವಳನ್ನು ಅಕೋ ಆ ತುಂಗೆಯ ನದಿಯಲ್ಲಿ ಬಿಸಾಟಿ ಬನ್ನಿ. ನನ್ನ ಆಜ್ಞೆಯೆಂದರೆ ರಾಜಾಜ್ಞೆ. (ಅವರು ಸುಮ್ಮನೇ ನಿಂತದ್ದನ್ನು ನೋಡಿ) ಯಾಕೇ? ಹೋಗು ವಿರೋ ಇಲ್ಲೋ? (ಜಗನ ಜನರು ಅವಳನ್ನು ಹಿಡಿದು ಎಳೆಯಲು)

ಚಿನ್ನವೇಂಕಟ—(ಎಚ್ಚೆತ್ತು ಎದ್ದಲ್ಲಿಯೇ) ದೇವೀ! ಸ್ವಲ್ಪ ಇತ್ತ ಬಾ. ಒಮ್ಮೆ ನಿನ್ನ ಸಾತ್ವಿಕ ಮೂರ್ತಿಯನ್ನು ನನ್ನ ಹೃದಯದಲ್ಲಿ ಚೆನ್ನಾಗಿ ನೆಲಸಿಕೊಳ್ಳುವೆನು. ಗಾಯವು ನನ್ನ ಅಂತದಲ್ಲಿಯೇ ಮಾಯವಾಗುವದೆಂದು ತೋರುವದು. ನನ್ನೊಬ್ಬನನ್ನೇ ಬಿಟ್ಟು ನೀನೆಲ್ಲಿ ಹೋಗುವೆ? (ಕುಮುದಿನಿಯು ಅವನ ಬಳಿಗೆ ಹೋಗಲೆತ್ನಿಸಲು)

ಮಕರ— ಹುಂ; ಅವಳನ್ನು ಬಿಡಬೇಡಿರಿ....

ಜಗರಾಯ— ಹೋಗಲಿ; ಇವಳ ಅಂತಕಾಲದ ಅಪೇಕ್ಷೆಯೆಂದು ಇವಳನ್ನು ಹೋಗಗೊಡಿರಿ ನೋಡುವಾ.

ಕುಮುದಿನಿ—(ಚಿನ್ನನ ಬಳಿಗೆ ಕುಳಿತು) ಒಡೆಯರೇ! ನಾನೆಲ್ಲಿಗೆ ಹೋಗುವೆನೆಂದು ಕೇಳುವಿರೋ? ಸ್ವಾರ್ಥಾಂಧರಾದ ಮತ್ಸರವುಳ್ಳ ಪಾಷಂಡಿಗಳಾದ ಈ ನಿರಂಕುಶವಾದ ರಾಜಸತ್ತೆಯ ರಾಜಭಾರಿಗಳಾದ ಈ ನೀಚರ ದೃಷ್ಟಿಯಲ್ಲಿ ನಾನು ರಾಜದ್ರೋಹಿಯಾಗಿ ವೈಕುಂಠಕ್ಕೆ ತೆರಳುವೆನು. ಇವರ ವಿಷಯವಾಗಿ ದೂರು ಹೇಳಲು ನಾನು ಆ ಸುಜನ ಪರಿಪಾಲಕನಾದ ದೇವರಡಿಗೆ ಹೋಗುವೆನು. ನ್ಯಾಯಪ್ರಿಯರಾದವರ ರಕ್ತಕ್ಕಾಗಿ ನೀರಡಿಸಿರುವ ಸತ್ಯಪಕ್ಷದವರನ್ನು ನುಂಗಲು

ಬಾಯಿಯನ್ನು ತೆರೆದಿರುವ ಈ ದುರ್ದೈವಿ ಭೂಮಿಯನ್ನು ಬಿಟ್ಟು ಬದರಿನಾರಾಯಣನಿದ್ದೆಡೆಗೆ ಹೋಗುವೆನು.

ಚಿನ್ನವೇಂಕಟ—ಹಾಗಾದರೇನು ದೇವೀ! ನೀನು ಮರಣವನ್ನು ಬಯಸುವೇ? ಅದೇಕೇ?

ಕುಮುದಿನಿ— ಇಲ್ಲ, ನಾನು ಬಯಸುವುದಿಲ್ಲ. ನಾನು ಸಾಯಬೇಕಾಗಿದೆ. ಅದೇಕೆಂದರೆ, ಒಡೆಯರೇ! ಕೇಳಿ; ಇದು ಕ್ರಾಂತಿಯ ಕಾಲವು. ನನಗೆ ಕೊಡಲ್ಪಟ್ಟ ಮರಣದ ಶಿಕ್ಷೆಯು ಇಂಥ ಸಮಯದಲ್ಲಿ ಯಾವ ಕಟ್ಟಳೆಗಳಿಗೂ ಸಂಬಂಧವಿರುವುದಿಲ್ಲೆಂಬ ಮಾತಿನ ಪ್ರತ್ಯುತ್ತರವಾಗಿದೆ. ಇಂಥ ಆಡಳಿತದ ಪ್ರವರ್ತಕಾಧಿಕಾರವು ಕರ್ತೃತ್ವವಾನ್ ಮತ್ತು ಸತ್ಯಪ್ರೇಮಿಗಳಾದಂಥವರ ಮೇಲೆಯೇ ನಡೆಯುವುದು. ಅದಕ್ಕಾಗಿಯೇ ನಾನೀಗ ಈ ಶಿಕ್ಷೆಯನ್ನು ಅತ್ಯಾನಂದದಿಂದ ವಹಿಸಿರುವೆನು. ಇದರಿಂದ ಸತ್ಯಕ್ಕಾಗಿಯೂ, ದೇಶಕ್ಕಾಗಿಯೂ, ಧರ್ಮಕ್ಕಾಗಿಯೂ ತಮ್ಮ ಜೀವನ ಸರ್ವಸ್ವವನ್ನು ಹೇಗೆ ವೆಚ್ಚಮಾಡಬೇಕೆಂಬುದನ್ನು ಮುಂದಿನವರಿಗೆ ಉದಾಹರಣೆಯನ್ನು ಹಾಕಿಕೊಡುವೆನು.

ಚಿನ್ನವೇಂಕಟ—ಆಹಾ ದೇವೀ! ನಮಗಾಗಿ ನೀನು ನಿನ್ನ ಪ್ರಾಣವನ್ನು ಅಗಲುವಿಯಾ! ಎಂಥ ತ್ಯಾಗವಿದು! ನಿನ್ನ ಧೈರ್ಯವನ್ನೆಷ್ಟು ಬಣ್ಣಿಸಿದರೂ ಸಾಲದು.

ಕುಮುದಿನಿ— ಮಹಾರಾಜ! ಸುಳ್ಳೇ ನನ್ನನ್ನು ಸ್ತುತಿಸಬೇಡಿರಿ. ಕೇವಲ ದುರ್ದೈವದ ಮೂಲಕ ನಮ್ಮನ್ನಾಳುವ ರಾಯರು ಸೆರೆಯಾಳುಗಳಾಗಿರಲು ತಮ್ಮ ಕ್ಷಾತ್ರಕುಲಕ್ಕನುಸರಿಸಿ ತಮ್ಮ ಒಡೆಯರನ್ನು ಮುಕ್ತಮಾಡಲು ಹಗಲಿರುಳು ಒಂದೇ ಸವನೆ ಕುದಿಯುತ್ತಿಲಿರುವ ನಾಯಕರು ತಮ್ಮ ಸಂಸಾರ ಸುಖಕ್ಕೆ ತಿಲಾಂಜಲಿಯನ್ನು ಕೊಟ್ಟಿರಲು, ಅವರ ಧರ್ಮಪತ್ನಿಯಾದ ನಾನು ಈ ಸಮಯದಲ್ಲಿ ಹಿಂಜರಿಯಬೇಕೇ?

ನನ್ನ ಕರ್ತವ್ಯವನ್ನಷ್ಟೇ ನಾನು ಮಾಡುತ್ತಲಿರುವೆನು. ಅದಕ್ಕಾಗಿ ಯದ್ಯಪಿ ನಾನು ಸ್ತ್ರೀಯಾದರೂ ಒಬ್ಬ ಅಬಲೆಯು ಹತ್ಯೆಯು ಪಾತಕಕ್ಕೆ ಈ ಕ್ರೂರರನ್ನು ಗುರಿಮಾಡಿ ಇಂಥ ವರ ಆಡಳಿತದ ಅಧೋಗತಿಗೆ ಕಾರಣಳಾಗುವೆನು.

ಜಗರಾಯ— ಏ ನಾರೀಶಿಖಾಮಣೀ! ಆಯಿತೇ? ಸಾಕು. ನಿನ್ನ ಬೊಗಳಾಟ ಸಾಕುಮಾಡು. (ತೆರೆಯೆಡೆಗೆ ನೋಡಿ) ಅಲ್ಲೇನೋ ಸದ್ದಾದಂತಾಗುವುದು. ತಿಮ್ಮನಾಯಕರೇ! ಸ್ವಲ್ಪ ಇವಳನ್ನು ಇಲ್ಲಿಯೇ ತಡೆದು ನಿಲ್ಲಿ. ಅದನ್ನು ನೋಡಿ ಕೊಂಡು ನಾನೀಗಲೇ ಬರುವೆನು. (ಹೋಗುವನು.)

ಕುಮುದಿನಿ— (ತಿಮ್ಮ ಮಕರ ಮತ್ತು ಇತರರೆಡೆಗೆ ನೋಡಿ) ಬಾಂಧವರೇ! ನಿಮ ಗಾಗಿ ಮಾತ್ರ ಎರಡು ಶಬ್ದಗಳನ್ನಾಡಬೇಕೆನ್ನುವೆನು. ದಯವಿಟ್ಟು ಕೇಳಿಕೊಳ್ಳಿ. ನೀವೇಕೆಂದು ಈ ಕೃತಘ್ನನ ಒಳಸಂಚಿನಲ್ಲಿ ತೊಡಗಿರುವಿರಿ? ಇದರಿಂದ ನಿಮಗಾವ ಲಾಭ? ನೀವು ನಿಜವಾಗಿ ಸ್ವಾತಂತ್ರ್ಯ ಪ್ರೇಮಿಗಳೋ? ಹಾಗಾದರೆ ಅದು ದೊಡ್ಡಮನಸ್ಸಿನವರಿಗೆ ಮತ್ತು ಸಾವಿ ಗಂಜದ ಸತ್ಯಪಕ್ಷಪಾತಿಗಳಿಗೆಯೇ ಸಾಧ್ಯ. ಅನೀತಿಗೆ ಪ್ರವೃತ್ತರಾದವರೊಂದಿಗೆ ಸೇರಿ ಅವರನ್ನು ಹಿಂಬಾಲಿಸು ವಂಥವರಿಗೆ ಸ್ವಾತಂತ್ರ್ಯವು ಹೇಗೆತಾನೇ ಸಾಧ್ಯವಾಗು ವುದು. ಈ ಸ್ವರಾಷ್ಟ್ರ ಕಲಹದಲ್ಲಿ ನಿಮ್ಮ ನಿಮ್ಮ ವ್ಯಕ್ತಿ ಸ್ವಾತಂತ್ರ್ಯಕ್ಕೂ ಅಗಲಿರುವಿರಿ. ಈ ನಿರಂಕುಶವಾದ ಪ್ರಭುತ್ವಕ್ಕೆ ನೀವಾದರೂ ಒಂದಿಲ್ಲೊಂದು ದಿನ ನನ್ನಂತೆ ಬಲಿಯಾಗುವಿರಿ. (ಇಷ್ಟರಲ್ಲಿ ನಾಯಕನು ಪ್ರವೇಶಿಸುವನು. ಅಲ್ಲಿ ಮೂರ್ಛಿತನಾಗಿ ಬಿದ್ದ ಚಿನ್ನವೇಂಕಟನನ್ನು ನೋಡಿದೊಡನೆ ಅವನ ಬಳಿಗೆ ಹೋಗಿ ಅವನನ್ನು ತನ್ನ ಅಂಕಗಳಲ್ಲಿರಿಸಿಕೊಳ್ಳುವಷ್ಟರಲ್ಲಿ ಜಗರಾಯನ ಜನರು ಅವನನ್ನು ಗಟ್ಟಿಯಾಗಿ ಹಿಡಿಯುವರು.)

ಜಗರಾಯ— (ಪ್ರವೇಶಿಸಿ) ಆಹಾ! ಒಂದು ಏಟಿಗೆ ಎರಡು ಪಕ್ಷಿಗಳು! (ಎಚ್ಚನಿಗೆ) ಏ ಎಚ್ಚಾ! ಇಗೋ ನೋಡು. (ಚಿನ್ನನನ್ನು

ತೋರಿಸಿ) ಇವನು ಆ ರಂಗನ ಕಂದನು. ಇವಳು ನಿನ್ನ ಪತ್ನಿಯು. ಇವರೊಡನೆ ನೀನೂ ನನ್ನ ಕೈಸೇರಿದೆ. ಇನ್ನು ನಿನ್ನೆದುರಿಗೆ ಇವಳ ಪ್ರಾಣವನ್ನು ಹಿರಿಯಲೋ, ಇವಳೆದುರಿಗೆ ನಿನ್ನ ಪ್ರಾಣವನ್ನು ಹಿರಿಯಲೋ? ಹೇಳು. ನೀನೇ ಹೇಳು. ಇವೆರಡೂ ಬೇಕಾಗಿದ್ದರೆ ಒಳ್ಳೇ ಮಾತಿನಿಂದ ನನಗೆ ಶರಣು ಬಾ. (ತುಚ್ಛತನದಿಂದ ನಕ್ಕು) ಯಾರು ಯಾರನ್ನು ಗೆದ್ದರೋ? ಮೂರ್ಖಾ! ಸುಮ್ಮನ್ನಲ್ಲ. ಶತ್ರುವನ್ನು ಗೆಲ್ಲಬೇಕಾದರೆ ದೈವೀ ಸಾಮರ್ಥ್ಯವು ಬೇಕೆನ್ನುತ್ತಿದ್ದಿಯಲ್ಲ? ಏಕೇ? ನನ್ನಲ್ಲಿ ಅದು ಇದೆಯಲ್ಲವೇ? ನೋಡು ಜೀವದಾಸೆಯಿದ್ದರೆ....

ನಾಯಕ— (ಆವೇಶದಿಂದ) ಕುಠಾರಾ! ನನ್ನ ಜೀವವೂ ಜೀವಿತದ ಧ್ಯೇಯವೂ ಆ ಚಿನ್ನಮೂರ್ತಿಯನ್ನೇ ಕೂಡಿದೆ. ಚಾಂಡಾಲಾ! ದೈವೀ ಸಾಮರ್ಥ್ಯದ ಆಧಾರವನ್ನು ತೋರಿಸಬೇಡ. ಕ್ಷುದ್ರ ಸ್ವಾರ್ಥಕ್ಕಾಗಿ ಇಲ್ಲದ ಒಳಜಗಳನ್ನು ಹೂಡಿ ತಾಯ್ನಾಡನ್ನು ರಸಾತಳಕ್ಕೊಯ್ಯುತ್ತಿರುವ ನರಪಶೋ! ನಿನ್ನಂಥ ಮದೋನ್ಮತ್ತನಿಗೆಂದಾದರೂ ದೇವರ ಬೆಂಬಲವಿರಬಹುದೋ? ಇದು ಪಿಶಾಚಿಯ ಬೆಂಬಲವು ತಿಳಿಯಿತೋ?

ಜಗರಾಯ— ಒದರಿಕೊ. ಬಾಯಿಯಲ್ಲಿ ಮಣ್ಣುಬೀಳುವವರೆಗೆ ಬೇಕಾದಷ್ಟು ಒದರಿಕೊ.

ನಾಯಕ— ಹೊಸದೇನನ್ನು ನೀನು ಮಾಡಬಲ್ಲೇ? ಅನಾರ್ಯಾ?

ಜಗರಾಯ— ತೋರಿಸಲೋ? (ಅವನ ಎದೆಯೆಡೆಗೆ ತನ್ನ ಆಯುಧವನ್ನು ಹಿಡಿದು ಚುಚ್ಚುವ ಭಯ ತೋರಿಸುವನು.)

ಕುಮುದಿನಿ— (ಭಯಭರಿತಳಾಗಿ) ಅಯ್ಯೋ! ಚಕ್ರಪಾಣೇ! ನಾನು ಮೊರೆ ಹೋಗುವುದನ್ನು ನೀನಿನ್ನೂ ಲಕ್ಷಿಸುವುದಿಲ್ಲವೋ?

ನಾಯಕ— ಪ್ರಿಯೇ! ಶೋಕಿಸಬೇಡ. ನೀನು ವೀರಪತ್ನಿಯು; ಹೀಗೆ ಎದೆಗುಂದಬೇಡ. ಸುತ್ತಿಗೆಯು ಪೆಟ್ಟಿನ ವಿನಾ ಶಿಲೆಗೆ

ದೇವತ್ವವು ತಾನೇ ಬರುವುದಿಲ್ಲ. ಬಂಗಾರದ ಬೆಲೆಯು ಒರೆಗೆ ಹಚ್ಚುವದರ ವಿನಾ ಬೆಳೆಯುವುದಿಲ್ಲ. ರಕ್ತ ಸಾಕ್ಷಿಯಾಗುವುದರ ವಿನಾ ವೀರನಿಗೆ ವೀರತ್ವವು ತಾನೇ ಬರುವುದಿಲ್ಲ. ಧರ್ಮಕ್ಕಾಗಿ ನಾವಿಂಥ ಸಾಹಸವನ್ನು ಮಾಡಲೇ ಬೇಕಲ್ಲವೇ?

ಜಗರಾಯ— ಹೇ ಮೂಢಾ! ಎಲ್ಲಿಯ ಧರ್ಮವೋ? ನನ್ನ ಬಲದ ಮುಂದೆ....

ಕುಮುದಿನಿ— ಏ ಕುಲಾಧಮಾ! ಧರ್ಮದ ಮಹತ್ವವು ನಿನಗೇನು ಗೊತ್ತು? ಬಾಹುಬಲವೇ ಆಗಲಿ; ಶರೀರ ಬಲವೇ ಆಗಲಿ; ಶಸ್ತ್ರ ಬಲವೇ ಆಗಲಿ; ಇವುಗಳಿಗೆ ಧರ್ಮಬಲ ವಿದ್ದರೆಯೇ ಬೆಲೆಯು. ಇಂಥ ಬಲವುಳ್ಳವರು ರಾಜಾಧಿರಾಜರಿಗಿಂತಲೂ ಪೂಜ್ಯರಾಗಿ ದೇವರ ಪ್ರೀತಿಗೆ ಪಾತ್ರರಾಗುವರು.

ನಾಯಕ— ಪ್ರಿಯೇ ಕೋಣನೆದುರಿಗೆ ಕಿನ್ನರಿಯನ್ನೇಕೆ ಬಾರಿಸುವೇ? ಏ ಜಗರಾಯಾ ಒಣಹರಟೆ ಸಾಕುಮಾಡು. ನೀವುಗಳೇನು ಮಾಡಬೇಕೆನ್ನುವಿರೋ ಬೇಗ ಮಾಡಿ ತೋರಿಸಿರಿ, ಅಥವ ನಾನೇನು ಮಾಡಬಲ್ಲೆನೆಂಬುದನ್ನು ಬನ್ನಿ, ನಿಮ್ಮೊಳಗಿನ ಒಬ್ಬೊಬ್ಬರು ಬನ್ನಿ, ಇಲ್ಲದಿದ್ದರೆ ಎಲ್ಲರೊಮ್ಮೆಲೆ ಬನ್ನಿ ತೋರಿಸುವೆನು. ಇದೇ ಕ್ಷಣದಲ್ಲಿಯೇ ನಿಮ್ಮ ರಕ್ತದ ನದಿಯನ್ನು ಹರಿಸುವೆನು. ಅಕೋ! ನೋಡಿ (ಆಕಾಶದೆಡೆಗೆ ತೋರಿಸಿ) ಅಲ್ಲಿ ಮಿಂಚುವುದೇನು? (ಹಿಡಿದವರು ಮೇಲೆ ನೋಡು ವಷ್ಟರಲ್ಲಿ ಅವರನ್ನು ಒಳ್ಳೇ ಕಸುವಿನಿಂದ ದೂಡಿಸಿ ತನ್ನ ಒರೆಯೊಳಗಿಂದ ಖಡ್ಗವನ್ನು ಹಿರಿಯುವನು. ಜಗರಾಯನ ಜನರು ಓಡುವರು. ಇದನ್ನು ಕಂಡು ಜಗರಾಯನೂ ಓಡುವನು. ಅವನನ್ನು ಬೆನ್ನಟ್ಟಬೇಕೆನ್ನಲು ಚಿನ್ನವೇಂಕಟನು ವೇದನೆಯಿಂದ ಚೀರುವನು.)

ಚಿನ್ನವೇಂಕಟ—ನಾಯಕರೇ! ಈಗ ನೀವು ಮಾತ್ರ ಹೋಗಬೇಡಿರಿ. ಮೊದಲು ನನ್ನನ್ನು ನಿಮ್ಮ ಪಾಳಯಕ್ಕೆ ಕರೆದೊಯ್ದು ಈ

ಗಾಯವನ್ನು ಮಾಯಿಸುವ ಯತ್ನಮಾಡಿರಿ. ಆಮೇಲೆ ನಾವೀರ್ವರು ಇವರನ್ನು ಅಳಿಯುಲಾರೆವೇನು?

ನಾಯಕ— ದೊರೆಯುವರಾಜ್ಞೆಯನ್ನು ಶಿರಸಾವಹಿಸುವೆನು. ಪ್ರಿಯೇ! ನಡೆ, ಬೇಗ ಪಾಳಯವನ್ನು ಸೇರಿ ಮೊದಲು ಇವರ ಶುಶ್ರೂಷೆಯನ್ನು ಮಾಡತೊಡಗುವಾ. ದೊರೆಯುವರೇ! ಹೀಗೆ ಈ ಬಡವನ ಬೆನ್ನನ್ನು ಪಾವನಮಾಡಿರಿ.

(ಕೂಡ್ರಿಸಿಕೊಂಡು ಹೋಗುವನು.)

---

೬ ನೇ ನೋಟ

[ಮಹಲಿನ ಪರದೆ.]

ಜಗರಾಯ— (ಪ್ರವೇಶಿಸಿ, ಸ್ವಗತ) ಜಗರಾಯಾ! ಕೂಡಿನ್ನು ಗಂಟೆಯನ್ನು ಬಡಿಯುತ್ತ. ಅಯ್ಯೋ! ನಾನಿನ್ನೆಷ್ಟೆಂದು ಸ್ವಂತವನ್ನು ಶಪಿಸಿಕೊಳ್ಳಲಿ? ಆ ಚಾಣಾಕ್ಷ ಕನ್ನಿಕೆಯು ಆ ಹೆಂಡು ಗುಡುಕರನ್ನು ಮೋಸಗೊಳಿಸಿ ನನ್ನ ಕಾರ್ಯಸಾಧನೆಯಲ್ಲಿ ಅಡ್ಡಬರುವ ರಾಜಕುಲಕಂಟಕವನ್ನು ಕಡಿದು ಬಿಡಬೇಕೆನ್ನುವಷ್ಟರಲ್ಲಿ ಇವಳು ಎಂಥ ಕಡು ಘಾತವನ್ನುಂಟುಮಾಡಿದಳಲ್ಲ! ಇಷ್ಟಾದರೂ ಆ ವಿಷಾರೀ ಸರ್ಪಗಳ ಜೋಡಿಯು ನನ್ನ ಕೈಸೇರಿರಲೂ ನಾನು ಬಾಲದಿಂದ ಅವುಗಳನ್ನು ಹಿಡಿಯುಲಿಕ್ಕೆ ಹೋದೆನು. ಆದರೆ ಅವು ಚಟ್ಟನೇ ಹಾರಿ ನನ್ನ ಕುತ್ತಿಗೆಯನ್ನು ಸುತ್ತುವುದರಲ್ಲಿ ಅದರ ಪರಿಣಾಮವಾಯಿತಲ್ಲ. ಆದರೆ ಎಷ್ಟೋ ಗುಣವೇ ಸರಿ. ನಿದಾನ ಅವುಗಳ ದಂಶವಂತೂ ಆಗಲಿಲ್ಲವಲ್ಲ. (ಆವೇಶದಿಂದ) ಏನಿದು ಜಗ್ಯಾ! ಇದೇನು ಗಂಡಿಸತನವೇ? ಅಳು. ಚನ್ನಾಗಿ ಮೋರೆಗೆ ಸೆರಗಿಟ್ಟುಕೊಂಡು ರೋದಿಸು. ಇದೇ ಕಂಟಕದ ಸಸಿಯು, ಇನ್ನು ಆ ಪ್ರತಾಪದುರ್ಗದ ತಿಪ್ಪೆಯುಲ್ಲಿ ಚೆನ್ನಾಗಿ ಬೆಳೆದು ಬಲಿತು ನಿನ್ನ ಮಹತ್ವಾ

ಕಾಂಕ್ಷಿಯಾದ ಹೃದಯವನ್ನು ಸೀಳದೆ ಬಿಡಲಿಕ್ಕಿಲ್ಲ. (ತುಂಬಾ ಆವೇಶದಿಂದ) ಆಹಾ! ಸೇಡು! ಸೇಡು!! ಸೇಡು!!! ಸರ್ವಾಂಗದಲ್ಲಿಯೂ ಸೇಡಿನ ಸೆಕೆಯು!!!! (ಸ್ವಲ್ಪ ಯೋಚಿಸಿ) ಛೀ! ಹೀಗೆ ಹಲುಬುವುದರಿಂದ ಕಡುಹಾನಿಯೇ ಹೊರತು ಯಾವ ಯುಕ್ತಿಯೂ ತೋಚಲಾರದು. (ನಕ್ಕು) ಅಹುದೋ! ನಿನ್ನಂಥ ಧೈರ್ಯಶಾಲಿಯೂ, ಬುದ್ಧಿವಂತನೂ, ಪ್ರಸಂಗಾವಧಾನಿಯೂ ಅತುಲವಾದ ಯುಕ್ತಿಯಿಂದ ಪ್ರತ್ಯಕ್ಷ ಕೃಷ್ಣನ ಕಾಲುಗಳಲ್ಲಿ ಹೊರಳಾಡುವ ಲಕ್ಷ್ಮಿಯನ್ನು ತನ್ನ ಮನೆಯ ತೊತ್ತು ಮಾಡಬಲ್ಲನು. (ಹಲ್ಲು ಕಡೆದು ಮೀಸಿಯ ಮೇಲೆ ಕೈಯಾಡಿಸಿ) ನಿಲ್ಲು ನಾಯಕಾ! ಈ ನಿನ್ನ ಕೀಟಕುಪದ್ರವು ಉಳಿದ ರಾಜಪರಿವಾರದ ನಾಶಕ್ಕೆ ಕಾರಣವಾಗದೇ ಇರಲಿಕ್ಕಿಲ್ಲ. (ಹೋಗುವನು.)

ಮೂರನೇ ಅಂಕ ಸಮಾಪ್ತ.

---

೪ ನೇ ಅಂಕ

೧ ನೇ ನೋಟ

[ಎಚ್ಚ ನಾಯಕನ ಪಾಳಯದ ಪರದೆ.]

[ಎಚ್ಚ ನಾಯಕನೂ ಚಾಂದಖಾನನೂ ಬರುವರು.]

ನಾಯಕ— ಖಾನಸಾಹೇಬ! ನನಗೊದಗಿರುವ ಈ ಕಠಿಣ ಸಮಯದಲ್ಲಿ ಸಹಾಯಾರ್ಥವಾಗಿ ಕರೆಕಳುಹಿಸಿದಹಾಗೆ ನಿಮ್ಮ ಶುಭಾಗಮನವಾಗಿದೆಯಲ್ಲ!

ಖಾನಸಾಹೇಬ— ನಾಯಕರೇ! ಹಾಗೇನು? ಮಿತ್ರ ಋಣವನ್ನು ತೀರಿಸುವ ಸಂಧಿಯು ತಾನೇ ಪ್ರಾಪ್ತವಾದದ್ದಕ್ಕೆ ಪರಮೇಶ್ವರನನ್ನು ಕೊಂಡಾಡುವೆನು. ನಿಮ್ಮ ಸತ್ಸಮಾಗಮವಾದ ದಿನದಿಂದ ನನ್ನ ಜೀವವನ್ನು ನಿಮಗಾಗಿಯೇ ಧಾರೆ ಎರೆದಿರುವೆನು. ಅಂದಿನಿಂದ ಯಾವಾಗಲೂ ನಿಮ್ಮ ಆನಂದಮೂರ್ತಿಯೇ ನನ್ನ ಮುಂದೆ ನಲಿದಾಡುವುದು. ಸೌಜನ್ಯದಿಂದಲೂ ಸದ್ಭಾವನೆಯಿಂದಲೂ ಸದ್ವಾಸನೆಯಿಂದಲೂ ಸಲ್ಲಾಪಗೈಯ್ಯುವ ನಿಮ್ಮ ಅಂತಃಕರಣವನ್ನು ಕಂಡು ಕನ್ನಡಿಗರ ವಿಷಯವಾಗಿ ನನ್ನಲ್ಲಿ ವಾಸಿಸುತಲಿದ್ದ ತಿರಸ್ಕಾರವು ನನ್ನ ಮನಸ್ಸಿನಲ್ಲಿ ಎಂದೋ ಮರೆಯಾಯಿತು.

ನಾಯಕ— ಭಾರತೀಯ ಬಂಧುವೇ! ಋಣಾನುಬಂಧವೇ ಸರ್ವ್ವರ ಮಿತ್ರುತ್ವದ ಮೂಲವು. ಇರಲಿ; ಈಗಂತೂ ನಮ್ಮ ಅರ್ಧ ಕಾರ್ಯವು ಕೈಗೂಡಿದೆ. ಇನ್ನು ಒಂದರಕ್ಷಣವನ್ನಾದರೂ ಕಳೆಯದೆ ಸೆರೆಮನೆಯಲ್ಲಿರುವ ನಮ್ಮ ದೊರೆಯವರನ್ನು ಬಿಡುಗಡೆಮಾಡಲು ತೊಡಗಬೇಕು. ಆದರೆ ನಮ್ಮ ನಾಡಿನ ಎಷ್ಟೋ ಶೂರ ಸರದಾರರೂ ನಾಯಕರೂ ಆ ದುಷ್ಟ ಜಗರಾಯನ ವಶದಲ್ಲಿರುವರು. ಇದರಿಂದ ನಮ್ಮ ಪಕ್ಷದ ಬಲವು ಕಡಿಮೆಯಾಗಿದೆ. ಇಂಥ ಸಮಯದಲ್ಲಿ

ನಾನು ಆ ಚಾಂಡಾಲನ ಸೆರೆಮನೆಯಿಂದ ನಮ್ಮೊಡೆಯರನ್ನು ಮುಕ್ತಮಾಡುವ ಹಾದಿಯು ಕಾಣದಾಗಿ ಸ್ವಲ್ಪ ನಿರಾಶೆ ....

ಖಾನಸಾಹೇಬ— ಮಿತ್ರರೇ ! ಸ್ವಲ್ಪ ಸಲಿಗೆಯಿಂದ ಮಾತನಾಡುವೆನು. ಅದಕ್ಕಾಗಿ ಕ್ಷಮಿಸಿ. ಧೈರ್ಯವೇ ನಿಮ್ಮ ಸನಾತನ ಕ್ಷತ್ರಿಯರ ಪವಿತ್ರ ಕರ್ತವ್ಯವೂ, ಆತ್ಮವಿಶ್ವಾಸವೇ ನಿಮ್ಮ ಕನ್ನಡಿಗರ ಅಲಂಕಾರವೂ ಎಂದು ನಾನು ಕೇಳಿದ್ದುದುಳ್ಳೇನು ? ಗೆಳೆಯರೇ ! ಸಂಪೂರ್ಣ ವಿಜಯದ ಮೂಲ ರಹಸ್ಯವೇ ಆತ್ಮವಿಶ್ವಾಸವು. ಆಪತ್ತುಗಳು ವೀರರ ಸತ್ವ ಪರೀಕ್ಷಾರ್ಥವಾಗಿಯೇ ಬರುವುದಿಲ್ಲವೇ ?

ನಾಯಕ— ಖಾನಸಾಹೇಬ ! ಈಗಿನ ಆಪತ್ತಿನಿಂದ ಹೆದರಿಹೋಗಿರುವೆನೆಂದು ನೀವು ಭಾವಿಸಿರುವಿರೋ ? ಒದ್ದಲ್ಲಿ ಒದ್ದೆಯನ್ನುಂಟುಮಾಡಿ ಜಲಪ್ರಲಯವನ್ನು ಮಾಡುವೆನು. ಆದರೆ ಗೂಬೆಗೆ ಹಗಲು ಕಾಣುವುದಿಲ್ಲ. ಕಾಗೆಗೆ ರಾತ್ರಿಯಲ್ಲಿ ಕಾಣುವುದಿಲ್ಲ. ಈ ನೀಚ ಆಕಾಂಕ್ಷಿಯಾದ ಜಗರಾಯನಂಥವನಿಗೆ ಮಾತ್ರ ಈ ಪಕ್ಷಿಗಳ ದೃಷ್ಟಿಶಕ್ತಿಯಲ್ಲಿರುವ ಎರಡೂ ನ್ಯೂನತೆಗಳು ಕೂಡಿವೆ. ಈ ಕಾಮಾಂಧನು ಯಾವ ವೇಳೆಯಲ್ಲಿ ಏನು ಮಾಡಿಯಾನೆಂಬುದು ನೇಮವಿಲ್ಲ. ನನಗಾಗಿರುವ ಸೇಡಿನಾಸೆಯಿಂದ ನಮ್ಮ ದೊರೆಯವರ ಮಾಡಬಾರದ ಕೊಲೆಯನ್ನು ಮಾಡಿದರೆ....ಹಾಯ್ ! ಶಾಸ್ತ್ರದ ದೇಶದ ನಿಸರ್ಗದ ದೃಷ್ಟಿಯಲ್ಲಿ ನನಗಿಂತಲೂ ಅಧಮನಿನ್ನಾರು ? (ತಲೆ ಬಗ್ಗಿಸಿ ನಿಲ್ಲುವನು.) (ಇಷ್ಟರಲ್ಲಿ ಕುಮುದಿನಿಯೂ ಮೀನಾಕ್ಷಿಯೂ ಚಿನ್ನವೇಂಕಟನೂ ಪ್ರವೇಶಿಸುವರು.) ಆಹಾ ! ಈ ಬಾಲಸೂರ್ಯನ ಉಜ್ವಲವಾದ ವರ್ಚಸ್ಸ ಪ್ರಭಾವದಿಂದ ನನ್ನ ಆತ್ಮವಿಶ್ವಾಸವು ಪ್ರದೀಪ್ತವಾಯಿತು. ಈ ಮಂಗಲ ಮೂರ್ತಿಯ ಪ್ರತಿಷ್ಠಾಪನೆಯಿಂದ ಈ ಬಡವನ ಗುಡಿಸಲವು ಗುಡಿಯಾಯಿತು. (ಚಿನ್ನನ ಮುಂದೆ ಕೈಜೋಡಿಸಿ) ಎಲೈ ! ಕನ್ನಡಿಗರ

ನೃಪದೇವನೇ! ಹರಿಹರರಾಯನ ಅವತಾರಿಯಾದ ಚಿನ್ನದೊರೆಯೇ! ನಾನಿನ್ನು ಕರ್ನಾಟಕ ಮಾತೆಯ ಸೇವೆಯ ಸಂಪ್ರದಾಯವನ್ನು ಬೆಳಿಸಿ ನಿನ್ನ ಭಕ್ತರ ಸಮುದಾಯವನ್ನು ಕ್ಷಣಮಾತ್ರದಲ್ಲಿಯೇ ಕೂಡಿಸಿ, ಈ ಅರಾಜಕಸ್ಥಿತಿಯನ್ನು ಅಳಿದುಬಿಡುವೆನು. ನಿನ್ನ ಭಕ್ತಿಯೇ ನನ್ನ ಹುರುಪಿಗೆ ಸಾಧನವು. (ಕುಮುದಿನಿಗೆ) ಸಹಧರ್ಮಿಣೀ! ಇಂತಹ ಮೂರ್ತಿಯನ್ನು ದೊರಕಿಸಿ ಕೊಟ್ಟ ನಿನ್ನನ್ನು ಯಾವ ಶಬ್ದಗಳಲ್ಲಿ ಕೊಂಡಾಡಲಿ. ಈ ನಿಷ್ಕಾಮಕರ್ಮದಿಂದ ನನ್ನ ಕೋಟಿ ಕುಲಗಳನ್ನುದ್ಧರಿಸಿದೆ. ಈ ಪ್ರೇಮಾಶ್ರುಗಳ ವಿನಾ ನಿನಗೆ ನಾನೇನನ್ನರ್ಪಿಸಲಿ?

ಕುಮುದಿನಿ— ದೇವಾನುದೇವತೆಗಳೂ ಯಾವ ಅಮೃತಸಿದ್ಧಿಗಾಗಿ ದೇವರನ್ನು ಒಲಿಸಿಕೊಂಡರೋ ಅದೇ ಅಮೃತವು ಈಗ ನಿಮ್ಮ ಪ್ರೇಮಾಶ್ರುಗಳ ರೂಪದಿಂದ ನನಗೆ ಲಭಿಸಿದಮೇಲೆ ನಾನೇ ಧನ್ಯಳು. ದೇವಾ! ನನಗೇನೂ ಬೇಡ. ನಿಮ್ಮ ಸೇವೆಗಾಗಿಯೂ ನನ್ನ ಬಂಧುಗಳ ಸೇವೆಗಾಗಿಯೂ ನನ್ನ ಶರೀರವನ್ನು ಸಾರ್ಥಕಗೊಳಿಸುವಷ್ಟು ಸಾಮರ್ಥ್ಯವನ್ನೇ ನೀಡಿರಿ. ಹೀಗೆಯೇ ನನಗಾವಾಗಲೂ ಸದ್ಭಕ್ತಿಯ ಪ್ರೇರಣೆಯನ್ನು ಮಾಡಿರಿ.

ಖಾನಸಾಹೇಬ— ಒಳ್ಳೇದಿರಲಿ, ನಾಯಕರೇ! ಮುಂದಿನ ಕಾರ್ಯವನ್ನಾರಂಭಿಸುವಾ. ಅದಕ್ಕಾಗಿ ನನಗೊಂದು ಯುಕ್ತಿಯು ತೋಚುವುದು. ರಾಜಪುತ್ರನನ್ನು ಕಳೆದುಕೊಂಡದ್ದರಿಂದ ಆ ಜಗರಾಯನು ನೀರ ಹೊರಗಿನ ಮೀನದಂತೆ ಒದ್ದಾಡುತ್ತಿರಬಹುದು. ಇಂಥಾ ವಿಚಾರಶೂನ್ಯರು ನವಿಮಾತುಗಳಿಂದ ಬಲು ಬೇಗ ಮೋಸಹೋಗುವರು. "ನಿಮ್ಮ ದರಬಾರದಲ್ಲಿ ದೊಡ್ಡ ಹುದ್ದೇದಾರಿಯನ್ನು ಸಂಪಾದಿಸುವುದಕ್ಕಾಗಿ ನಾನು ಚಿನ್ನವೇಂಕಟನನ್ನೂ ಕುಮುದಿನಿಯನ್ನೂ ಸೆರೆಹಿಡಿದುಕೊಂಡು ಬಂದು ಅವರನ್ನು ನಿಮ್ಮ

ವಶದಲ್ಲಿ ಕೊಡುವೆನು" ಎಂದು ಓಲೆಯನ್ನು ಜಗರಾಯ ನೆಡೆಗೆ ಕಳುಹಿಸಿಕೊಡುವಾ. ಅಲ್ಲಿ ಈ ನಿಮ್ಮ ರಾಜ ಕುಮಾರರ ಪ್ರವೇಶವಾದೊಡನೆ ಇವರ ಕಂಗಳಲ್ಲಿ ಎಸೆ ಯುವ ಈ ದಿವ್ಯ ಶಕ್ತಿಯು ಜಗರಾಯನ ಕಪಟಕ್ಕೆ ಬಲಿ ಯಾದ ಇತರ ಸೇನಾಪತಿಗಳ ಮನಗಳನ್ನು ಆಕರ್ಷಿ ಸುವದೆಂಬ ನಂಬಿಗೆಯು ನನಗೆ ತುಂಬಾ ಇದೆ. ಕೂಡಲೆ ಜಗನೊಡನೆ ಇಲ್ಲದ ಕದನಹೂಡಿ ಪ್ರತ್ಯಕ್ಷವಾಗಿ ಯುದ್ಧದ ಆಹ್ವಾನನ್ನು ಕೊಟ್ಟು ನಿಮ್ಮ ವೀರಪತ್ನಿಯರ ಸಹಿತ ನಿಮ್ಮೊಡೆಯರನ್ನು ಕರೆದುಕೊಂಡು ನಿಮ್ಮನ್ನು ಕೂಡು ವೆನು. ಆದರೆ ಈ ಸಾಹಸಕ್ಕಾಗಿ ನನಗೊಂದು ವರವನ್ನು ನೀಡಬೇಕು.

ನಾಯಕ— ಅದಾವುದು ?

ಖಾನಸಾಹೇಬ— ನನಗಾಗಿ ನಿಮ್ಮ ವಿಶ್ವಾಸ....

ನಾಯಕ— ಇದೇನು ಖಾನಸಾಹೇಬ! ಯಾವ ಸಾತ್ವಿಕ ವೀರನು ತನ್ನೊಡೆಯರ ಕ್ರೋಧಕ್ಕೆ ಪಾತ್ರನಾಗಿಯೂ ನನ್ನ ಪತ್ನಿಯ ಪಾತಿವ್ರತ್ಯವನ್ನು ಕಾಯ್ದನೋ ರಕ್ಷಿಸಿದನೋ ಅವನಿಗಾಗಿ ಅವಿಶ್ವಾಸವನ್ನು ತೋರಿಸುವಷ್ಟು ನಾನು ಕೃತಘ್ನನಲ್ಲ.

ಖಾನಸಾಹೇಬ— ಹಾಗಾದರೆ ವ್ಯರ್ಥಕಾಲವನ್ನು ಕಳೆಯಕೂಡದು. ನಾನಂದಂತೆ ಪತ್ರವನ್ನು ಬರೆಯುವುದಕ್ಕಾಗಿ ವಿಚಾರ ಮಾಡುವಾ, ನಡೆಯಿರಿ. (ಹೋಗುವರು.)

---

೨ ನೇ ನೋಟ

[ದರಬಾರ ಚಂದ್ರಗಿರಿ.]

[ಜಗರಾಯನೂ ಸಿಂಹಾಸನದಮೇಲೆ ಚಿಕ್ಕರಾಯನೂ ತಿಮ್ಮನಾಯಕನೂ ಮಕರನಾಯಕನೂ ಇತರ ಸರದಾರರೂ ಕುಳಿತಿರುವರು.]

ಜಗರಾಯ— ಶೂರ ವೀರ ಸೇನಾಪತಿಗಳೇ! ರಾಜಾಧಿರಾಜ ಚಿಕ್ಕರಾಯರ ಸೇವೆಯನ್ನು ಈ ಜಗರಾಯನು ನಿಷ್ಕಾಮವಾಸನೆಯಿಂದ ಮಾಡುತ್ತಿರಲು ನಮ್ಮ ವೈರಿಯಾಗ ಎಚ್ಚನಾಯಕನು ಇಲ್ಲದ ಸಲ್ಲದ ಜಗಳಗಳನ್ನು ಹೂಡುತ್ತಲಿರುವನು. ನಿಮ್ಮೆಲ್ಲರ ಸಮ್ಮತಿಯನ್ನು ಪಡೆದು ರಂಗರಾಯನನ್ನೂ ಅವನ ಕುಟುಂಬವನ್ನೂ ಕೆಲಕಾಲ ತುರಂಗದಲ್ಲಿಟ್ಟು ತರುವಾಯ ಅವರ ಯೋಗ್ಯತಾನುಸಾರವಾಗಿ ತಕ್ಕ ಆಸ್ತಿಯನ್ನು ಕೊಟ್ಟು ಅವರನ್ನು ಬಿಡಬೇಕೆನ್ನುವಷ್ಟರಲ್ಲಿ ಆದುಷ್ಟನು ರಾಜಪುತ್ರನನ್ನು ಅಪಹರಿಸಿಕೊಂಡು ಹೋಗಿರುವನು. ಸ್ವಾಮಿಭಕ್ತರಾದ ಸೇನಾಪತಿಗಳೇ! ಮೊದಲೇ ನಮ್ಮ ಕೆಡಕನ್ನು ಬಯಸುವ ನಾಯಕನ ಈ ಕೃತ್ಯದಿಂದ ನಮ್ಮ ಸಿಂಹಾಸನಕ್ಕೂ ಅದರ ಉಪ್ಪನ್ನುಂಬುವ ನಮ್ಮಗಳಿಗೂ ಭಯಂಕರ ಅವಮಾನವಾಗಿದೆ. ಇನ್ನು ಮಾತ್ರ ಇದರ ಸೇಡನ್ನು ತೀರಿಸಿಕೊಳ್ಳದಿದ್ದರೆ ನಮ್ಮಷ್ಟು ಹೇಡಿಗಳು ನಾವೇ......

ಮಕರನಾಯಕ—ಮಂತ್ರಿಪ್ರಭುಗಳೆ, ನಮ್ಮನ್ನಾಳುವ ಪ್ರಭುಗಳ ಹಾಲನ್ನು ಕುಡಿದು, ವಿಷಕಾರುವ ಸರ್ಪವನ್ನು ಕೊಲ್ಲದಿರುವಷ್ಟು ಹೇಡಿಗಳು ನಾವಲ್ಲ.

ಚಿಕ್ಕರಾಯ— ಇದರಲ್ಲೇನು ಸಂದೇಹ? ನನ್ನ ಪ್ರಜೆಗಳು ರಾಜನಿಷ್ಠೆಗಾಗಿ ಜೀವಗಳನ್ನು ತ್ಯಾಗಮಾಡಲು ಸಿದ್ಧರಿರುವರೆಂದು ನಾನು ತುಂಬಾ ನಂಬಿದ್ದೇನೆ. (ಜಗರಾಯನಿಗೆ) ಮಂತ್ರಿಗಳೇ

ಬೇಗ ಇವರ ಸಹಾಯದಿಂದ ಮೊದಲು ಆ ನಾಯಕನನ್ನು ಸೆರೆಹಿಡಿಯಿರಿ.

ಜಗರಾಯ— ಅದಕ್ಕಾಗಿ ತಾವು ಯಾವ ರೀತಿಯಿಂದಲೂ ಚಿಂತಿಸಬೇಡಿರಿ. ಅಲ್ಲದೆ ಸತ್ಯಕ್ಕಾಗಿ ಪರಮೇಶ್ವರನ ಬೆಂಬಲವಿದೆ ಎಂಬುದನ್ನು ಇನ್ನೊಂದು ಸಂಗತಿಯಿಂದ ನಿಮಗೆ ತಿಳಿಸುವೆನು. ವಿಜಾಪುರ ದರಬಾರದ ಪ್ರಸಿದ್ಧ ಶೂರ ಸೇನಾಪತಿಯಾದ ಚಾಂದಖಾನನು ನಮ್ಮ ಪಕ್ಷವನ್ನು ಸ್ವೀಕರಿಸುವ ಅಭಿವಚನವನ್ನು ಇಗೋ ಈ ಪತ್ರದಲ್ಲಿ ವ್ಯಕ್ತಪಡಿಸಿರುವನು. ಇಷ್ಟೇ ಅಲ್ಲ. ನಮ್ಮ ದೊರೆಯುವರಿಗಾಗಿ ತನ್ನಲ್ಲಿರುವ ಭಕ್ತಿಯ ಸೂಚನಾರ್ಥ ಚಿನ್ನವೇಂಕಟನನ್ನೂ ನಾಯಕನ ಪತ್ನಿಯನ್ನೂ ಸೆರೆಹಿಡಿದುಕೊಂಡು ಚಿಕ್ಕರಾಯರಿಗೆ ಕಾಣಿಕೆಯನ್ನಾಗಿ ಅರ್ಪಿಸುವವನಿರುವನು. (ಇಷ್ಟರಲ್ಲಿ ಚಾಂದಖಾನನು ತನ್ನ ನಾಲ್ಕು ಜನರೊಂದಿಗೆ ಚಿನ್ನ, ಕುಮುದಿನಿಯವರ ಸಂಗಡ ಬರುವನು.)

ಜಗರಾಯ— ಖಾನಸಾಹೇಬ! ನಾವಿದೇ ಈಗ ನಿಮ್ಮ ಶುಭಾಗಮನದ ಸಂಗತಿಯನ್ನೇ ಆಡುತ್ತಿದ್ದೆವು. ನಿಮಗೆ ತುಂಬಾ ನೂರು ವರ್ಷಗಳ ಆಯುಷ್ಯವುಂಟು. ಬನ್ನಿ, ಹೀಗೆ ಬನ್ನಿ. ನಿಮಗಾಗಿಯೇ ಏರ್ಪಡಿಸಿರುವ ಈ ಗೌರವ ಪೀಠವನ್ನಲಂಕರಿಸಿ. ಈಗಿನ ನಿಮ್ಮ ಆಗಮನವು ನಮ್ಮ ರಾಯರ ಮುಂದಿನ ಶುಭಸೂಚಕವಾಗಿದೆ. (ಖಾನನು ಬಲು ಒಗರಿನಿಂದ ಏನನ್ನೂ ಮಾತನಾಡದೆ ತನಗಾಗಿರುವ ಪೀಠದ ಮೇಲೆ ಚಿನ್ನನನ್ನು ಕೂಡ್ರಿಸಿ, ಚಿಕ್ಕರಾಯರನ್ನು ನಮಸ್ಕರಿಸದೆ ಚಿನ್ನನ ಕೆಳಗೆ ಕುಮುದಿನಿಯು ಸಹಿತ ಕೂಡುವನು.)

ಜಗರಾಯ— (ಇದನ್ನು ಕಂಡು ತ್ವೇಷದಿಂದ) ಖಾನ್‌ಸಾಹೇಬ! ಏನು ಹುಚ್ಚಾಟವಿದು? ನೀವು ರಾಜಸಭೆಗಳಲ್ಲಿ ಚೆನ್ನಾಗಿ ನುರಿತವರು, ಯುಕ್ತವಾದ ಗೌರವಗಳನ್ನರಿತವರು. ನವರತ್ನಗಳಿಂದ ಶೋಭಿಸುವ ಸಿಂಹಾಸನಾರೂಢರಿಗೂ

ತೊತ್ತಾಗಿರುವ ಈ ದರಿದ್ರ ಹುಡುಗನಿಗೂ ಇರುವ ವ್ಯತ್ಯಾಸವು ನಿಮಗೆ ತಿಳಿಯದೋ? ಇಂದಿನ ನಿಮ್ಮ ಉದ್ಧಟತನದ ವರ್ತನೆಯು ಮತ್ತಿನ್ನಾರಿಂದಾದರಾಗಿದ್ದರೆ ಅದರ ಪರಿಣಾಮವೇ ಬೇರೆಯಾಗುತ್ತಿತ್ತು. ಆದರೂ ಆದದ್ದಾಯಿತು. ಇದರಿಂದ ನಮ್ಮ ರಾಯರು ಎಷ್ಟು ಮಾತ್ರ ಕೋಪಗೊಂಡಿದ್ದರೂ ನಾವು ಅವರಿಗೆ ನಿಮ್ಮನ್ನು ಕ್ಷಮಿಸಲು ಬೇಡಿಕೊಳ್ಳುವೆವು. ಮುಂದೆ ಮಾತ್ರ ಜೋಕೆ.

ಚಾಂದಖಾನ— (ತುಚ್ಛತನದಿಂದ ನಕ್ಕು) ಜಗರಾಯಾ! ನಾವು ಪೈಗಂಬರನ ಶಿಷ್ಯರು. ಬಲು ಉದಾರ ಅಂತಃಕರಣದವರು. ನಮಗೂ ಈ ತಾರತಮ್ಯ ಭಾವವು ಚೆನ್ನಾಗಿ ಗೊತ್ತಿವೆ. ಚೊಕ್ಕ ಬಂಗಾರವಾವುದೂ? ಬಂಗಾರದ ಮುಲಾಮು ಕೊಟ್ಟ ಕಬ್ಬಿಣವಾವುದೂ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಎಲಾ! ನಾನಿಲ್ಲಿಗೆ ಚಾಕರಿಯಾಸೆಗಾಗಿ ಬಂದಿಲ್ಲ. ಇವನು ಮುಹಮ್ಮದೀಯನು, ಇವನು ಹಿಂದೂಧರ್ಮದವನು ಎಂಬ ಪಕ್ಷಭಾವವನ್ನಳಿದು ವ್ಯಕ್ತಿಧರ್ಮವೆಂದು ಪೈಗಂಬರರ ಅನುಯಾಯಿಯಾಗಿ ಮಹಾತ್ಮಾ ಎಚ್ಚಮನಾಯಕರ ಸದುಪದೇಶದಿಂದ ವಿಶ್ವಬಂಧುತ್ವದ ಪ್ರೇಮಪಾಠವನ್ನು ಪಠಿಸುವ ನಾನು ನಿನ್ನ ಈ ಗೊಂಬೆಯಾಸೆಗಾಗಿ ಬಂದಿಲ್ಲ. ನಿನ್ನ ಕಪಟ ಕ್ಕೊಳಗಾಗಿ ಕುರುಡರಾಗಿರುವ ಈ ಕನ್ನಡಿಗರಿಗೆ ಈ ಚಿನ್ನ ಮೂರ್ತಿಯ ಪುಣ್ಯದರ್ಶನೆಯನ್ನು ಮಾಡಿಸಿ ಅವರ ಕಂಗಳಲ್ಲಿ ಅಂಜನೆಹಾಕಲು ಬಂದಿರುವೆನು. (ಸರದಾರರಿಗೆ) ಕೀರ್ತಿಶಾಲಿಗಳಾದ ಕನ್ನಡಿಗರೇ! ನೋಡಿರಿ. ಬಹು ಬಣ್ಣದ ಮಾತುಗಳಿಂದ ನಿಮ್ಮನ್ನು ಮೋಸಗೊಳಿಸಿ ಜಗರಾಯನಂಥ ಬಣ್ಣಗಾರನಿಂದ ಚಿತ್ರಿಸಲ್ಪಟ್ಟ (ಸಿಂಹಾಸನದೆಡೆಗೆ ತೋರಿಸಿ) ಈ ಕಿಟ್ಟದ ಗೊಂಬೆಯನ್ನು ನೋಡಿರಿ. ಜಗಚ್ಚಿತ್ರಕಾರನಿಂದ ಅವತಾರವನ್ನು ತಾಳಿದ ಈ ಚೈತನ್ಯ ಚಿನ್ನಮೂರ್ತಿಯನ್ನು ನೋಡಿರಿ. ಹಿಂದೂ ಬಾಂಧವರೇ! ಪವಿತ್ರ ಖುದಾಯ

ತಾಲಾನ ಪ್ರೇರಣೆಯಿಂದಲೂ ನಮ್ಮೆಲ್ಲರ ಜನ್ಮಭೂಮಿಯಾದ ಭಾರತಮಾತೆಯ ಪ್ರೇರಣೆಯಿಂದಲೂ ನಿಮ್ಮ ರಾಯರನ್ನು ಗುರುತಿಸಲು ನಿಮ್ಮನ್ನು ನಮ್ರಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ಯಾಕೇ? ಜಗರಾಯಾ! ನಿನ್ನ ಮಗಳಿಂದ ಸಾಕಲ್ಪಟ್ಟ ಆ ಚಿಕ್ಕರಾಯನು ರಾಜಕುಲದವನೇನೋ (ತನ್ನ ಜನರಿಗೆ) ಶೂರರೇ! ಕಡಿಯಿರಿ. ಈ ಹುಡುಗನನ್ನು ಈಗಲೇ ಕಡಿಯಿರಿ. (ಚಿಕ್ಕರಾಯನು ಇದನ್ನು ಕೇಳಿದೊಡನೆ ಬೆದರಿ ಸಿಂಹಾಸನದಿಂದಿಳಿದು ಒಳಗೆ ಓಡುವನು.) ಏ ಜಗರಾಯಾ! ನೋಡು. ಚೆನ್ನಾಗಿ ನೋಡಿ ಪವಿತ್ರವಾದ ತಾರತಮ್ಯ ಭಾವವನ್ನು ಈಗಲಾದರೂ ತಿಳಿದಿಕೊ. ಛೇ! "ಗಧೆ ಕೂಜಾ ಘರಾನಕೀ ಕ್ಯಾಕದರ?"

ಜಗರಾಯ— (ತ್ವೇಷದಿಂದ) ಸರದಾರರೇ! ಏನು; ಕಲ್ಲುಬೊಂಬೆಗಳಂತೆ ಕುಳಿತಿರುವಿರೋ? ತೆಗೆಯಿರಿ. ನಿಮ್ಮ ಖಡ್ಗಗಳನ್ನು ತೆಗೆಯಿರಿ. ಎಲಾ ವಿಶ್ವಾಸಘಾತಕಾ! ನಿನ್ನ ಎದುರಿನಲ್ಲಿಯೇ ಈ ಚಿನ್ನನ ರಕ್ತದಿಂಡ ಇದರ ಉತ್ತರವನ್ನು ಕೊಡುವೆನು.

ಚಿನ್ನವೇಂಕಟ— ಏ ಜಗರಾಯಾ! ಮೊದಲು ಓಡಿಹೋದ ನಿನ್ನ ಮೊಮ್ಮಗನನ್ನು ಕರೆದುಕೊಂಡುಬಂದು ನನ್ನೆದುರಿನಲ್ಲಿ ನಿಲ್ಲಿಸು. ಅರಸೊತ್ತಿಗೆಗೆ ಯಾರು ಬಾಧ್ಯಸ್ಥರೆಂಬುದನ್ನು ನೋಡಿಬಿಡುವಾ.

ಕುಮುದಿನಿ— ಅಣ್ಣಾ ಖಾನಸಾಹೇಬ! ನಾವು ಬಂದ ಕಾರ್ಯವನ್ನಂತೂ ಮಾಡಿದೆವು. ಕನ್ನಡಿಗರ ನಿಜವಾದ ರಾಜಕುಲದವರಾರೆಂಬುದನ್ನು ನಮ್ಮ ಬಾಂಧವರ ನಿದರ್ಶನಕ್ಕೆ ತಂದುಕೊಟ್ಟೆವು. ಇನ್ನು ತಡವೇಕೆ? ನಡೆಯಿರಿ......

ಜಗರಾಯ— ಹೋಗಲಿಕ್ಕೇನು ಹುಡುಗಾಟಿಕೆಯೋ? ಈ ಚಿನ್ನನ ರಕ್ತದಲ್ಲಿ ನಿಮ್ಮನ್ನು ಮುಳುಗಿಸುವೆನು. (ಚಿನ್ನನನ್ನು ಹೊಡೆಯಲು ಮುಂದರಿಯಲು ತಿಮ್ಮನಾಯಕ ಮಕರನಾಯಕ ಇವರ

ಹೊರತು ಇತರ ಸರದಾರರು ಖಡ್ಗಗಳನ್ನು ತೆಗೆದು ಜಗರಾಯನ ಮೇಲೆ ಹೋಗುವರು.)

ಒಬ್ಬ ಸರದಾರ— ಏ ಸಟೆಗಾರಾ! ನಾವು ಇವರ (ಚಿನ್ನನೆಡೆಗೆ ತೋರಿಸಿ) ಒಂದು ಕೂದಲಕ್ಕೂ ಬಾಧೆ ಬರಗೊಡುವುದಿಲ್ಲ. ಇಂದು ಎಲ್ಲ ಸಂಗತಿಯು ನಮಗೆ ಚೆನ್ನಾಗಿ ಹೊಳೆಯಿತು. (ಖಾನನಿಗೆ) ನಡೆಯಿರಿ ಖಾನಸಾಹೇಬ! ಇನ್ನು ಇಲ್ಲಿ ನಿಂತರೆ ಈ ದುಷ್ಟನ ಸೆರೆಯಾಳುಗಳಾಗುವಿರಿ. ಏ ಜಗರಾಯಾ! ನಾನೀಗಲೇ ಎಚ್ಚನಾಯಕರ ಪರವಾಗಿ ನಿನಗೆ ಯುದ್ಧದ ಆಹ್ವಾನವನ್ನು ಕೊಡುವೆನು. (ತಿಮ್ಮ, ಮಕರ, ಜಗ ಇವರು ಹಾಂ ಹಾಂ ಎಂಬುವುದರಲ್ಲಿ ಚಿನ್ನನ ಸಹಿತ ಎಲ್ಲರೂ ಹೋಗಿಬಿಡುವರು.)

ಮಕರನಾಯಕ— ನಾನೂ ತಿಮ್ಮನಾಯಕರೂ ಅವರನ್ನೀಗಲೇ ಸೆರೆಹಿಡಿದು ತರುವೆವು. (ಅವರೀರ್ವರು ಹೋಗುವರು.)

ಜಗರಾಯ— (ಮುಂದಕ್ಕೆ ಸರಿಯುವನು. ಹಿಂದಿನ ತೆರೆ ಬೀಳುವುದು.) (ಸ್ವಗತ; ಸಂತಾಪದಿಂದ) ಧಿಃಕಾರ ಜಗರಾಯಾ! ನಿನ್ನ ಹೇಡಿತನಕ್ಕೆ ಧಿಃಕಾರ!! ಆಯಿತು; ನಿನ್ನ ಅಳುವು ನಿನ್ನ ವೈರಿಗೆ ಗೊತ್ತಾಯಿತು. ನಿನ್ನ ಕೃಷ್ಣಕಾರಸ್ಥಾನದ ಕೊಲೆಯಾಯಿತು. ಅದರ ಸಂಗಡವೇ ನಿನ್ನ ಅವತಾರ ಸಮಾಪ್ತಿಯಾಯಿತು. ಆ ಖಾನನು ಲಬ್ಧಪ್ರತಿಷ್ಠತೆಯಿಂದ ನುಡಿದದ್ದೆಲ್ಲವನ್ನೂ ಕಿವುಡನಂತೆ ಕೇಳಿದ ಜಗರಾಯನು ನಾನೇ ಏನು? ಅತಿಕ್ಷುಲ್ಲಕಳಾದ ಒಬ್ಬ ಅಬಲೆಯು ಉನ್ಮತ್ತತನದಿಂದ ಆಡಿದ ಅವಮಾನಕಾರಕ ಶಬ್ದಗಳನ್ನು ಕೆಳಗೆ ಮುಖಮಾಡಿ ಕೇಳಿದ ಅನಾಮಧೇಯನು ನಾನೇ ಏನು? ದಿಟ್ಟಿಸಿ ನೋಡದ ಹೊರತು ಕಣ್ಣಿಗೆ ಕಾಣದ ಚೋಟು ಹುಡುಗನ ದರ್ಪೋಕ್ತಿಗಳಿಗೆ ಸೊಪ್ಪುಹಾಕಿದ ಷಂಢನು ನಾನೇ ಏನು? ಅಹುದು; ನಾನೇ! ನಾನೇ!! ನಾನೇ!!! ಧೀರ ವೀರ ಭೀಮನೆಂದು ಬೊಗಳಿಕೊಳ್ಳುವ ಹುಚ್ಚು

ಹೇಡಿ ನಾಯಿಯು ನಾನೇ! ಆಹಾ! ಉನ್ಮಾದ! ಅಪಮಾನದಿಂದುಂಟಾದ ಅರುಹುಗೇಡಿತನದ ಉನ್ಮಾದ!! ಇದೇ ಉನ್ಮಾದದಲ್ಲಿಯೇ ನನ್ನ ಕೊನೆಗಾಲವು. ಆದರೆ ಇದು ಯಮರಾಯನ ದಂಡನೆಯಿಂದುಂಟಾದ ಮರಣದಾಜ್ಞೆಯಲ್ಲ. ಇದು ಜಗರಾಯನ ಮಾನಭಂಗದಿಂದುಂಟಾದ ಪ್ರಾಣಾಜ್ಞೆ. ಈ ಶಿಕ್ಷೆಯನ್ನು ಕೊಡುವ ನ್ಯಾಯಾಧೀಶನೂ ನಾನೇ! ಹಾಗಾದರೆ ಜಗರಾಯಾ! ಬೇಡಿಕೊ. ಅಂತ್ಯಕಾಲದಲ್ಲಿ ನಿನ್ನ ವಾಸನೆಯಾವುದು? (ಹುಚ್ಚನಂತೆ ನಕ್ಕು) ಅಂ; ಏನು? ರಂಗನ ಅವನ ಕುಟುಂಬದ ರಕ್ತಪಾನವೋ, ಓಹೋ! ಹಾಗೇ ಆಗಲಿ; ಇಂದೇ ನಿಶಾದೇವಿಯ ಸನ್ನಿಧಾನದಲ್ಲಿ ಅವರ ಬಲಿಗಳನ್ನರ್ಪಿಸಿ ನಿನಗೆ ಅವರ ರಕ್ತದ ತೀರ್ಥಪಾನ ಮಾಡಿಸುವೆನು. ತರುವಾಯ ನಿನ್ನನ್ನು ಮುಕ್ತಮಾಡುವೆನು. (ತೆರೆಯಲ್ಲಿ ನೋಡಿ) ಎಲಾ ಯಾರಲ್ಲಿ? (ಸೇವಕನು ಬರುವನು.) ಎಲಾ! ಆ ಖಾನ ಕುಮುದಿನಿಯವರನ್ನು ಪ್ರಾಣಹೋದರೂ ನಾಯಕನ ಪಾಳಯದೆಡೆಗೆ ಹೋಗಗೊಡಬೇಡಿರೆಂದು ತಿಮ್ಮ ಮಕರನಾಯಕರಿಗೆ ಹೇಳಲು ಬೇಗ ಒಬ್ಬ ರಾಹುತರನ್ನು ಓಡಿಸು. ಅಥವ ನಡೆ. ನನಗೆ ಸಮಾಧಾನವಾಗದು. ನಾನೇ ಬರುವೆನು. (ಹೋಗುವನು.)

---

೩ ನೇ ನೋಟ

[ಬಂದಿಖಾನೆಯಲ್ಲಿ ರಂಗರಸರು ಕುಟುಂಬ ಸಹಿತರಿರುವರು. ಅವರ ಹೊರತು ಉಳಿದವರು ಮಲಗಿರುವರು.]

ರಂಗರಸರು— (ಸ್ವಗತ) ಮನುಷ್ಯನ ಆಯುಷ್ಯವೆಂದರೆ ಕರ್ಮವನ್ನು ಭೋಗಿಸಲು ಭವಬಂಧನವು ನಿರ್ಣಯಿಸಿದ ಕಾಲವೇನು? ನಾನಾ ರೀತಿಯ ಕರ್ಮರೂಪಿಗಳಾದ ಜಲಚರಗಳನ್ನೊಳಗೊಂಡ

ಈ ಭವಸಾಗರವನ್ನು ತನ್ನಲ್ಲಿರುವ ಈಶ್ವರೀಬಲದಿಂದ ಮಾನವನು ಮಂಥನಗೊಳಿಸಿದರೆ ಅವನಿಗೆ ಅಮೃತಸಿದ್ಧಿಯಾಗುವುದು. ಅಲ್ಲದೆ ಅವನು ಸೊಕ್ಕಿನಿಂದ ಈ ದೈವೀ ಬಲವನ್ನು ಉಪೇಕ್ಷಿಸಿ ಈ ಮಹಾಸಾಗರದಲ್ಲಿ ಈಜು ಬಿದ್ದರೆ ವ್ಯರ್ಥ ಉಪ್ಪುನೀರನ್ನು ಕುಡಿಯುತ್ತ ಎಲ್ಲಿಯೋ ಹರಿದುಹೋಗಿ ಕೊನೆಗೆ ಕಾಲಕೂಟವಿಷ ಸೇವನೆಯಿಂದ ನಾಶಹೊಂದುವನು. ಈ ಅಂಬುಧಿಗೆ ಬಿದ್ದವನು ಒದ್ದಾಡಿ ಒದ್ದಾಡಿ ಪುನಃ ಒಮ್ಮೆ ದಂಡೆಯನ್ನು ಕಾಣುವುದೂ ದುಸ್ತರವು. ಪರಮೇಶ್ವರಾ! ನನಗೆ ಆ ನಿನ್ನ ಅಮೃತವೂ ಬೇಡ. ಈ ಕಾಲಕೂಟ ವಿಷವೂ ಬೇಡ. ಈ ಜನ್ಮದಲ್ಲಿ ನಾನು ನಿಜವಾಗಿ ನಿನ್ನ ಪ್ರೀತಿಗೆ ಪಾತ್ರನಾಗಿದ್ದರೆ ದೇವಾ! ನನಗೆ ಪುನಃ ಇದೇ ಸುವರ್ಣ ಭೂಮಿಯಲ್ಲಿಯೇ ಜನ್ಮ ಕೊಡು. ಈ ಸ್ವರ್ಗ ಸಮವಾದ ಹಂಪೆಯ ಕ್ಷೇತ್ರದಲ್ಲಿ ನಿನ್ನ ಪ್ರತಿಬಿಂಬವಾದ ಶ್ರೀ ವಿರುಪಾಕ್ಷನನ್ನು ಸರ್ವಕಾಲದಲ್ಲಿಯೂ ಪೂಜಿಸುತ್ತ ಕರ್ನಾಟಕ ಮಾತೆಯ ಅಂಕಪೀಠಗಳಲ್ಲಿ ನನ್ನಿತರ ಬಾಂಧವರೊಡನೆ ಭ್ರಾತೃಭಾವದಿಂದ ನಲಿದಾಡುತ್ತ ಎಷ್ಟು ಜನ್ಮಗಳನ್ನಾದರೂ ಪಡೆಯುವೆನು. ಆದರೆ ಸ್ವಾಭಿಮಾನ ಶೂನ್ಯರಾದ ಅಂತಃಕಲಹಪ್ರಿಯರಾದ ನನ್ನ ಬಾಂಧವರ ಮೇಲೆ ಕೋಪಗೊಂಡು ನೀನು ಈ ನಾಡನ್ನು ತ್ಯಜಿಸಿದರೆ ಮಾತ್ರ ದೇವಾ! ನಿನ್ನ ಚರಣಗಳಲ್ಲಿಯೇ ನನಗೆ ನೆಲೆಯನ್ನು ನೀಡು. (ಕೆಳಗೆ ಬಿದ್ದಿರುವ ಒಂದು ಕಾಗದವನ್ನು ನೋಡಿ, ನಕ್ಕು) ಎಲಾ ಜಗರಾಯಾ! ಇಂಥ ಉಚ್ಚಪ್ರತಿಯ ಮಹತ್ವಾಕಾಂಕ್ಷೆಯು ನನ್ನಲ್ಲಿರಲು ನೀನು ಮರಣದ ಭಯವನ್ನು ತೋರಿಸಿದರೇನಾಗುವುದು? (ರಾಣಿಯು ಚಿಟ್ಟನೇ ಚೀರುವಳು. ನಾಗಲಾಂಬಿಕೆಯ ಹೊರತು ಎಲ್ಲರೂ ಏಳುವರು.)

ರಾಣಿ— ಪತಿರಾಜ! ಪತಿರಾಜ!! ಬನ್ನಿ. ಇತ್ತ ಬನ್ನಿ.

ರಂಗರಸರು— (ಅವಳನ್ನು ಹತ್ತಿರ ಹಿಡಿದು) ಪ್ರಿಯೇ! ಇಲ್ಲಿಯೆ ಇರುವೆನು. ಭಯಂಕರ ಸ್ವಪ್ನವನ್ನು ಕಂಡೇನು? ಏಕೇ? ಕಂಪಿಸು ತ್ತಿರುವೇ?

ರಾಣಿ— ಪ್ರಾಣನಾಥ! ಅದು ಸ್ವಪ್ನವಲ್ಲ. ಸೃಷ್ಟಿಲಯಕರ್ತನಾದ ಶಂಕರನ ಕೆಂಡಾದ ಮೂರ್ತಿಯನ್ನು ಕಂಡೆನು. ಅವನ ಬಳಿಯಲ್ಲಿ ಕೈಜೋಡಿಸಿ ಅವನಾಜ್ಞೆಗಾಗಿ ತತ್ಪರಳಾದ ಓರ್ವ ಕ್ರೂರ ಸ್ತ್ರೀಮೂರ್ತಿಯನ್ನು ಕಂಡೆನು. ಎಲ್ಲ ಕಡೆ ಯಲ್ಲಿಯೂ ಅವಳು ಮಾಡಿದ ಪರಾಕ್ರಮದ ಚಿತ್ರಪಟ ಗಳನ್ನು ಕಂಡೆನು. ಎಷ್ಟೋ ಕ್ರೂರ ತಾಮಸಿಗಳೂ ಶಾಸ್ತ್ರಜ್ಞ ವೇದಜ್ಞರೂ ಪುರಾಣ ಪುಣ್ಯಪುರುಷರೂ ಅಷ್ಟೇಕೇ? ಅವತಾರಿಗಳಾದ ದೇವಪುರುಷರೂ ಅವಳ ಕಾಲ ಪಾಶದಲ್ಲಿ ಬಿಗಿಯಲ್ಪಟ್ಟ ನೋಟವನ್ನು ಕಂಡೆನು. ಅದನ್ನು ನೋಡಲು, ನನ್ನೊಡನೆ ಚಿನ್ನವೇಂಕಟನ ಹೊರತು ನೀವೆಲ್ಲರೂ ಬಂದಿದ್ದಿರಿ. ಅಷ್ಟರಲ್ಲಿ ಆ ಉಗ್ರಳಾದ ದೇವಿಯು ಮೊದಲು ನನ್ನೆಡೆಗೆಯೇ ಒಳ್ಳೇ ಕೆಂಪಡರಿದ ಕಣ್ಣು ಗಳಿಂದ ಬಂದಂತಾಯಿತು.........(ಜಗರಾಯನು ಬಿಚ್ಚು ಗತ್ತಿಗಳನ್ನು ಹಿಡಿದ ಕಾವಲುಗಾರರೊಡನೆ ಪ್ರವೇಶಿಸುವನು.)

ರಂಗರಸರು— (ದಿಟ್ಟನಾಗಿ) ಇದೇನು? ಜಗರಾಯಾ! ನೀನು ನಿನ್ನೇ ತಿಳಿಸಿ ದಂತೆ ನಿಶ್ಚಯಮಾಡಿಕೊಂಡೇ ಇಲ್ಲಿಗೆ ಬಂದಿರುವಿಯೇನು?

ಜಗರಾಯ— ಎಲಾ ರಂಗಾ! ಜಗರಾಯನ ಮಾತುಗಳೆಂದೂ ಹುಸಿ ಹೋಗುವುದಿಲ್ಲ. ನನ್ನ ನಿಶ್ಚಯವು ವಜ್ರಲೇಪವು. (ಅಣಗಿಸಿ) ಯಾಕೋ? ಒಳ್ಳೇ ಜೇನಿನಂಥ ಮಾತುಗಳನ್ನಾಡುವಿಯಲ್ಲ? ಹೀಗೆ ಮಾಡುವುದರಿಂದ ನಾನೇನು ನಿನಗಿಂದು ಜೀವದಾನ ವನ್ನು ಮಾಡುವುದಿಲ್ಲ.

ವೀರ— ತಾತಾ! ಈ ಅನಾಮಧೇಯನು ನಮ್ಮನ್ನೇನೆಂದು ತಿಳಿದಿರುವನು. ಎಲಾ! ಆರ್ಯರು ಈಶ್ವರನ ವಿನಾ

ಮತ್ತಾರನ್ನೂ ಬೇಡಿಕೊಳ್ಳುವುದಿಲ್ಲ. ನನ್ನ ತಂದೆಯ ಯೋಗ್ಯತೆಯು ನಿನ್ನಂಥ ಶ್ವಾನನಿಗೆ ಹೇಗೆತಾನೇ ತಿಳಿಯ ಬೇಕು? ಈಗ ಇವರು ನಿನ್ನ ತುರಂಗದಲ್ಲಿದ್ದರೂ ಇವರ ವೈಯಕ್ತಿಕ ಪ್ರಭೆಯೂ ಪ್ರತಾಪವೂ ಇವರು ಸಿಂಹಾಸನ ದಿಂದ ಅಲಂಕೃತರಾದ ವೇಳೆಗಿಂತಲೂ ಹೆಚ್ಚಾಗಿವೆ. ನೀನು ನಿಜವಾಗಿ ಶೂರನಾದರೆ ಮೊದಲು ನನ್ನ ಸಂಗಡ ಯುದ್ಧ ವನ್ನು ಮಾಡು.

ಜಗರಾಯ— ಏ! ನಿನ್ನಂಥ ಮದವೇರಿದ ಮೃಗದೊಡನೆ ಕಾದಾಡಲು ನನಗೆ ಪಂಜರಗಳಿಲ್ಲ. ರಂಗಾ! ನೀನು ಸಿಂಹನಾದಾಗಿಯೂ ನನ್ನ ಬಲೆಯಲ್ಲಿ ಸಿಲುಕಿರುವೆ. ನಿನ್ನ ಪರಾಕ್ರಮವೇನಿಲ್ಲಿ ನಡೆಯಲಾರದು. ಇನ್ನು ವ್ಯರ್ಥ ಗರ್ಜಿಸಿದರೆ ನಿಮ್ಮಿರ್ವರ ಮರಣವಂತೂ ಬಿಟ್ಟಿದ್ದಲ್ಲ. ಆದರೆ ನಿಮ್ಮ ತರುವಾಯ ನಿನ್ನ ಹೆಂಡತಿಯ ಗತಿಯೇನಾಗುವುದೆಂಬುದನ್ನು ಚೆನ್ನಾಗಿ ಯೋಚಿಸು. ನಾನೀಗಲೇ ನಿಮ್ಮೆಲ್ಲರನ್ನು ಈ ಸೆರೆಮನೆಯ ಹಿಂಭಾಗದಲ್ಲಿರುವ ಹಾಳುಬಾವಿಯಲ್ಲಿ ಹಾಕಿಸಿ ಹೂಳಿಸು ವೆನು. ಆದಕಾರಣ ಒಳ್ಳೇ ಮಾತಿನಿಂದ ಮೊದಲು ಇವಳಿಗೆ ಅಪ್ಪಣೆಯನ್ನು ಕೊಡು. ಛೀ! ನಿನ್ನಿಂದ ಇದಕ್ಕೂ ಘೋರಕೃತ್ಯವಾಗಬೇಕು. ಆ ಹಾಳುಬಾವಿಯಲ್ಲಿ ನೀವೇ ಹೋಗಿರಿ. ಆದರೆ ಇವಳಿಗೆ—ಇಗೋ! ನಾನು ತಂದಿರುವ ಖಡ್ಗದಿಂದ ಇವಳ ರುಂಡವನ್ನು ಭೂಮಿಗೆಡಹು. (ಅವನಿಗೆ ಖಡ್ಗವನ್ನು ಕೊಡುವನು.)

ರಾಣಿ— ಪತಿರಾಯಾ! ಹಾಗಾದರೆ ಶತ್ರುಪಕ್ಷದ ಹೆಚ್ಚಿಕೆಯು ಪ್ರಾರಂಭವಾಗುವುದಕ್ಕಿಂತಲೂ ಮೊದಲೇ ಸ್ತ್ರೀಯರು ಅಗ್ನಿದೇವನಿಗೆ ಮೊರೆಹೋಗುವರು. ನಿಮ್ಮ ಹೊರತು ನನಗೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಬೇರೆ ಯಾವ ಗತಿಯಿಲ್ಲ. (ಜಗನೆಡೆಗೆ ತೋರಿಸಿ) ಈ ದುಷ್ಟನು ಈಗ ನಿಮ್ಮ ಸ್ನೇಹ ಮಾಡುವನೆಂಬುದು ಮನಗಂಡ ಮಾತು.

ನಾನಾದರೂ ಪತಿಸೇವೆಯನ್ನಗಲಿ ಏಕೆಂದು ಬಾಳಬೇಕು. ಆದಕಾರಣ ನಾಥ! ವೈಧವ್ಯದ ದಾರುಣ ಕಲಂಕವು ಬರ ಮೊದಲು ಈ ದಾಸಿಗೆ ಮುಕ್ತಿಯನ್ನು ದಯಪಾಲಿಸಿರಿ. (ನಾಗಲಾಂಬಿಕೆಯ ಬಳಿಗೆ ಹೋಗಿ) ನಾಗೂ! ಏಕಮ್ಮಾ! ಎಂದೂ ಮಲಗದವಳು ಇಂದೊಳ್ಳೇ ನಿದ್ದೆಹೋಗಿರುವಿಯಲ್ಲ? ಈ ಕೀಳು ನೋಟವನ್ನು ನೋಡದೆ ಕಂಗಳನ್ನು ಮುಚ್ಚಿ ಕೊಂಡಿರುವೆಯೇನು? ಅಹುದಹುದು; ನಮ್ಮ ನಾರಿಯರ ಹೃದಯಗಳು ಎಷ್ಟು ಮೃದುವಾಗಿದ್ದರೂ ಅವು ಇಂಥ ಸಮಯದಲ್ಲಿ ವಜ್ರದಂತೆ ಪಾಷಾಣವಾಗುವುವು. ಹರ ಹರ! ಕಂದ! ನಾನು ನಿನಗೆ ತಿಳಿಸದೆ ತೆರಳುವೆನಲ್ಲ! (ಅವಳನ್ನು ಮುದ್ದಿಡಲಿಕ್ಕೆ ಹೋಗಲು ಚೆನ್ನಾಗಿ ನೋಡಿ, ಅಳುತ್ತ) ಅಯ್ಯೋ! ನಾಥಾ! ನಮಗಾಗಿ ಇವಳು ಈಗಾಗಲೇ ದೇವರ ಮುಂದೆ ದೂರು ಹೇಳಲು ಹೋಗಿರುವಳಲ್ಲ! ಅಯ್ಯೋ ಕಂದಾ? ಎಷ್ಟು ದಿನಗಳ ಉಪವಾಸವನ್ನು ನೀನು ತಾಳಬಲ್ಲೇ?

ಶಂಗರಸರು— ನನ್ನ ಗೃಹಸ್ಥಾಶ್ರಮದ ದೇವತೆ! ಅಗ್ನಿ ಬ್ರಾಹ್ಮಣರ ಸಾಕ್ಷಿಯಿಂದ ನನ್ನನ್ನು ವರಿಸಿ, ನೀನು ನನ್ನ ಸೇವೆಗಾಗಿ ಸ್ವಾಮಿತ್ವದ ನಿಜವಾದ ರಹಸ್ಯವನ್ನು ತಿಳಿದುಕೊಂಡು ನನಗೆ ಪರಮಾರ್ಥವನ್ನು ಹೇಗೆ ಸಾಧಿಸಿಕೊಳ್ಳಬೇಕೆಂಬ ಪಾಠವನ್ನು ಕೊಟ್ಟು ನನಗೆ ಪರಮಪುರುಷಾರ್ಥವನ್ನು ನೀಡಿದೆ. ಆದರೆ ನಾನು ದುರ್ದೈವಿಯು, ನನ್ನ ಭವಣೆಗಳಲ್ಲಿ ನಿನ್ನನ್ನು ಸಿಲುಕಿಸಿ ಎಷ್ಟು ವೇದನೆಗಳಿಗೆ ಗುರಿಮಾಡುವೆನಲ್ಲ? ಹಾಯ್! ಇಂಥ ಕುಲಶೀಲರೂಪ ಗುಣಸಂಪನ್ನಳಾದ ಸತಿಮಣಿಯೇ! ತೇಜಸ್ವಿನಿಯೇ!! ನನ್ನನ್ನು ಪಿತೃಋಣ ದಿಂದ ಮುಕ್ತಮಾಡಲು ಧರ್ಮವೀರ ಕರ್ಮವೀರ ರಾಷ್ಟ್ರ ವೀರ ಸಂತತಿ ಸೋಪಾನದ ಲಾಭವನ್ನುಂಟುಮಾಡಿದ ಪ್ರಿಯೇ! ನಿನ್ನ ಕೊಲೆಯನ್ನು ಮಾಡಲು ನಾನೀಗ ಖಡ್ಗ ಪಾಣಿಯಾಗಬೇಕೇ!

ರಾಣಿ— ಮಹಾರಾಜ! ಹೀಗೆ ನೊಂದು ನುಡಿಯಬೇಡಿ. ನಾನು ನಿಮ್ಮ ಅರ್ಧಾಂಗಿಯಲ್ಲವೇ? ಹಾಗಾದರೆ ನೀವು ಬೇರೆ ಯಾವಳ ಕೊಲೆಯನ್ನು ಮಾಡುವಿರಿ? ನಿಮ್ಮ ಸ್ವದೇಹದ ಅರ್ಧಭಾಗವನ್ನೇ ನೀವು ಈ ಕರ್ಮಯೋಗದ ಕುಂಡದಲ್ಲಿ ಅರ್ಪಿಸಿಸುವಿರಲ್ಲವೇ? ಪ್ರಭೋ! ನನ್ನನ್ನು ನಿಮ್ಮ ಹಿಂದುಳಿಸದೆ ನಿಮ್ಮೊಡನೆ ನನಗೆ ಬರಲು ನಾನು ಹೊತ್ತಿರುವ ಈ ಅಸ್ತಿಚರ್ಮದ ಭಾರವನ್ನು ಬೇಗ ಇಳಿಸಿರಿ.

ರಂಗರಸರು— ಪ್ರಿಯೇ! ನೀನೇನೆಂದರೂ ನಾನು ಸ್ತ್ರೀಹತ್ಯೆಯ ಪಾತಕಕ್ಕೆ ಒಳಗಾಗುವುದಿಲ್ಲ. ಕ್ಷತ್ರಿಯನು ಸ್ತ್ರೀರಕ್ತವನ್ನೆಂದೂ ನೋಡಲಾರನು.

ಜಗರಾಯ— ಏ ಪಾಪೀ! ಇಲ್ಲದ ಜಂಬು ಬಡಿಯಬೇಡ. ಬಂದಿಖಾನೆ ಯಂಥ ಪ್ರತ್ಯಕ್ಷ ನರಕದಲ್ಲಿ ಹೊರಳಾಡುವ ನೀನು....

ರಂಗರಸರು— ಏ ಕಾಲಾಂತಕಾ! ಹಗಲಿರುಳು ನಿನಗೆ ನರಕದ ಹೊರತು ಬೇರೆ ವಿಚಾರವೆಲ್ಲಿ? ಇದು ನರಕವೋ? ಇಂಥ ಪತಿವ್ರತೆ ಯಿದ್ದಲ್ಲಿಯೇ ವೈಕುಂಠವು—ಅಲ್ಲ—ಇಷ್ಟೇ ಅಲ್ಲ. ಅವಳಿ ದ್ದಲ್ಲಿ ಸ್ವರ್ಗವು ತಾನೇ ಬರುವುದು. ಎಲಾ! ಈ ಜಗತೀತಲದ ಮೇಲೆ ಎಷ್ಟೊಂದು ತೀರ್ಥಗಳಿರುವವೋ ಅವು ಇಂಥವಳ ಚರಣಗಳಲ್ಲಿಯೇ ವಾಸಮಾಡುವವು........

ಜಗರಾಯ— ಎಲೋ! ನೀನು ಇವಳನ್ನು ಹೊಡೆಯುವೆಯೋ ಇಲ್ಲವೋ? ಛೀ; ಸುಳ್ಳೇ ವೇಳೆಯಾಗುವುದು. (ತನ್ನ ಕಾವಲುಗಾರರಿಗೆ) ಎಲೋ! ಬಾಗಿಲನ್ನು ತೆರೆದು ಒಬ್ಬೊಬ್ಬರನ್ನು ನೂಕುತ್ತ ಕರೆದುಕೊಂಡು ಹೋಗಿ ಬಾವಿಯಲ್ಲಿ ದಬ್ಬಿಬಿಡಿ. (ಶ್ಯಾಮ ಭಟ್ಟನಿಗೆ) ಆದರೆ ಈ ಮಂಗಭಟ್ಟನನ್ನು ಮಾತ್ರ ಇನ್ನೂ ನಾನಾವೇದನೆಗಳಿಂದ ಕೊನೆಗಾಣಿಸಬೇಕು. ಆದ್ದರಿಂದ ಸಧ್ಯಕ್ಕೆ ಇವನನ್ನು ನನ್ನ ನೆಲಮನೆಯಲ್ಲಿ ಅಡಗಿಸಿಡಿ.

(ಎಲ್ಲರೂ ಹೋಗುವರು.)

---

೪ ನೇ ನೋಟ

[ಪಾಳಯದ ಪರದೆ. ನಾಯಕನು ತನ್ನ ಕೆಲವು ಸರದಾರರೊಡನೆ ಬರುವನು.]

ನಾಯಕ— ಸ್ವಾಮಿನಿಷ್ಠ ಸೇನಾಪತಿಗಳೇ! ನಮ್ಮ ರಾಜ್ಯಕ್ಕೆ ಒಳ್ಳೇ ಕಠಿಣಸಮಯವೊದಗಿದೆ. ಬಾರದ ಸಂಕಟವು ಒಂದದ್ದಕ್ಕಾಗಿಯೂ, ಸ್ವಾರ್ಥಾಂಧರ ಹಾವಳಿಯು ಬೆಳೆದುದ್ದಕ್ಕಾಗಿಯೂ ಜಗತ್ತಿನಲ್ಲಿ ನಾವು ಕನ್ನಡಿಗರು ಅಪಕೀರ್ತಿಗೆ ಗುರಿಯಾಗಿರುವೆವು. ಹರಿಹರ ಕೃಷ್ಣದೇವರಾಮರಾಯರಂಥ ನರಪುಂಗವರ ಈ ನಾಡನ್ನು ಈ ನೀಚ ಜನರು ಉಧ್ವಸ್ಥ ಮಾಡಲೆತ್ನಿಸಿರುವರು. ಉಪ್ಪರಿಗೆಯಂಥ ಈ ಭೂಮಿಯು ತಿಪ್ಪೆಗೀಡಾಗುತ್ತಲಿಹುದು. ಇದಕ್ಕೆ ನಾವು ಕಾರಣೀಭೂತರಾಗದಿದ್ದರೂ ಇದರ ಪರಿಣಾಮದಲ್ಲಾಗುವ ನಾಶಕ್ಕೆ ಮಾತ್ರ ನಾವು ಹೊಣೆಗಾರರು. ಯಾಕೆಂದರೆ ನಾವುಗಳು ಆ ಸಾಮರ್ಥ್ಯಸಂಪನ್ನರಾದ ಸ್ವಾತಂತ್ರ್ಯ ಪ್ರೇಮಿಗಳಾದ ಪೂರ್ವಜರ ವಂಶದವರು. ಅವರೆಂದೂ ಇಂಥ ಪೈಶಾಚಕ ಪಾಪೀ ಪುಂಡಜರನ್ನು ಮೂಲೆಗೊತ್ತದೇ ಬಿಡುತ್ತಿದ್ದಿಲ್ಲ. ಹೀಗಿರಲು ಈ ಅಂತಃಕಲಹದ ಅಂತವನ್ನು ನಾವೀಗಮಾಡದೆ ಸುಮ್ಮನಿರಬೇಕೇ? ಆದಕಾರಣ ಮಹನಿಯರೇ! ಏಳಿ. ಟೊಂಕಕಟ್ಟಿ. ಜಗರಾಯನಿಗೆ ನನ್ನ ಪರವಾಗಿ ಯುದ್ಧದ ಆಹ್ವಾನವನ್ನು ಕೊಡಲಿಕ್ಕೆ ಹೋದ ಖಾನಸು ಬರುವವೇಳೆಯಾಗಿದೆ. ಹಂಪೆಯ ಕ್ಷೇತ್ರದಲ್ಲಿರುವ ದ್ವಿಜಶ್ರೇಷ್ಠರಾದ ಶ್ರೀ ಪ್ರೇಮಾನಂದ ಸ್ವಾಮಿಗಳು ಸಾವಿರಾರು ಜನರನ್ನು ಜಾಗೃತೆಗೊಳಿಸಿ ನಮ್ಮ ಸಹಾಯಕ್ಕಾಗಿ ಬರುವವರಿದ್ದಾರೆಂಬ ವರ್ತಮಾನವು ನನಗೀಗಲೇ ಬಂದಿದೆ.

ದೂತ— (ಪ್ರವೇಶಿಸಿ) ನಾಯಕರೇ! ಅತಿದುಃಖದ ಸುದ್ದಿಯನ್ನು ಹೇಳುವ ದುರ್ಘಟವಾದ ಪ್ರಸಂಗವು ಈ ದುರ್ದೈವಿಗೆ..

ನಾಯಕ— (ಬೆಚ್ಚತ್ತು) ಅದಾವುದು? ಬೇಗ ಹೇಳು.



ದೂತ— ನಿನ್ನೆ ರಾತ್ರಿಯಲ್ಲಿ ಜಗರಾಯನು ನಮ್ಮ ದೊರೆಯವರನ್ನು ಅವರ ಕುಟುಂಬ ಸಹಿತವಾಗಿ ಅಂತಮಾಡಿದನೆಂದು......

ನಾಯಕ— (ಹಾರಿಬಿದ್ದು ಶೋಕಾಕುಲನಾಗಿ) ಹಾ, ಏನು! ಕನ್ನಡಿಗರ ಅಲಂಕಾರವಾದ ಕಂಠೀರವನು ಕೈಲಾಸವಾಸಿಯಾದನೇ! ಕರ್ನಾಟಕ ಕೀರ್ತಿಯನ್ನು ಗರ್ಜಿಸುವ ಸಿಂಹದ ಗುಡುಗು ಮಾಯವಾಯಿತೇ!! ಕನ್ನಡಿಗರ ಜೀವನ ಸರ್ವಸ್ವವಾದ ಜ್ಯೋತಿಯು ಅಂತರ್ಹಿತವಾಯಿತೇ!!! ಜಗರಾಯನ ಘೋರ ತೃಷ್ಣೆಯ ಮೂಲಕ ನಮ್ಮ ತೇಜೋಮಯ ಮೂರ್ತಿಯು ಭಂಗವಾಯಿತೇ!!! ಹಾ! ಕ್ರೋಧದಿಂದ ಸಂತಪ್ತನಾಗಿ ಬರೀ ಹೆಣ್ಣಿನ ಹಂಬಲದಿಂದ ಬೈದು ಶಪಿಸಿ ಬಿಟ್ಟು ಮುರಿಯುವುದೇ ನನ್ನ ಕೃತಿಯಾಯಿತೇ? (ಕೈಗಳೆಡೆಗೆ ನೋಡಿ) ಏನು ಕರಗಳಿರಾ! ಇನ್ನು ಮುಂದೆ ನಾನು ಖಡ್ಗವನ್ನು ಹಿಡಿಯಲು ಯೋಗ್ಯನಲ್ಲವಲ್ಲ? ಹಾಗಾದರೆ ಬಳೆಗಳನ್ನಿಟ್ಟುಕೊಳ್ಳಲೋ? (ತೆರೆಯಲ್ಲಿ ಪ್ರೇಮಾನಂದನು "ಧಿಃಕಾರ, ಧಿಃಕಾರ" ಎಂದು ಕೂಗುವನು.) ಯಾರವರು? ಧಿಃಕಾರವೆಂದಾರು ಕೂಗುವರು?

ಪ್ರೇಮಾನಂದ—(ಪ್ರವೇಶಿಸಿ) ನಾನು; ನಾನು, ನಾಯಕರೇ! ನೀವಂದ ಹಾಗೆಯೇ ಮಾಡುವವರಿದ್ದರೆ ನಿಮಗೂ ನಿಮ್ಮ ಪರಾಕ್ರಮಕ್ಕೂ ಶತಶಃ ಧಿಃಕಾರವೆಂದು ಇನ್ನೂ ಅಷ್ಟೇ ಗಟ್ಟಿಯಾಗಿ ಕೂಗುವೆನು.

ನಾಯಕ— (ಅಶ್ರುಗಳನ್ನು ಒರಸುತ್ತ) ಗುರುಗಳೇ! ಹಾಗೆ ಮಾಡದಿದ್ದರೆ ಮತ್ತಿನ್ನೇನು? ರಾಷ್ಟ್ರದ ಮುಕುಟಮಣಿಯನ್ನು ಈ ಪಿಶಾಚಿಗಳು ಮಣ್ಣುಪಾಲು ಮಾಡಿದ್ದನ್ನು ಕಿವಿಗೊಟ್ಟು ಕೇಳುವ ನನ್ನಂಥ ಹೇಡಿಗೆ ನೀವೇನಂದರೇನಾಗಬಹುದು? ಹಾ ನೋಡಿದಿರಾ! ಪ್ರಭು ವೇಂಕಟದೊರೆಯವರು ನನ್ನ

ಡೆಗೆ ಹೇಗೆ ಕ್ರೋಧಾವಿಷ್ಟರಾಗಿ ನೋಡುತ್ತಿರುವರು. ದೊರೆಯರೇ! ಮಾಡಿರಿ. ನಿಮ್ಮ ಶಾಪದಿಂದ ಈ ಅಧಮ ನನ್ನು ಭಸ್ಮಮಾಡಿರಿ. ನಿಮ್ಮ ಪೂಜ್ಯ ಪೂರ್ವಜರ ಸಮಕ್ಷ ಯಾವಾಗಲೂ ಸುಳ್ಳೇ ವೀರವಾಣಿಯಿಂದ ನಟನಂತೆ ನುಡಿ ಯುವ ನಾಲಗೆಯನ್ನು ಭಸ್ಮಮಾಡಿರಿ. ಅಗೋ! ಅಲ್ಲಿ ತಂದೆಯವರಾದ ಪ್ರತಾಪನಾಯಕರು ನನ್ನ ಪಿತೃದ್ರೋಹದ ಕೃತಿಗಾಗಿ ದುಃಖದಾಹದಿಂದ ಎಷ್ಟು ಕೊರಗಿರುವರು. ಅವರು ವಿಶ್ವಾಸಪೂರ್ವಕವಾಗಿ ನನಗೆ ಕೊಟ್ಟ (ತನ್ನ ಆಯುಧ ವನ್ನು ತೋರಿಸಿ) ಈ ವೀರವರವನ್ನು ತಿರುಗಿ ಬೇಡುವರು. ಅಲ್ಲಿಂದೇನು ಗುರುಗಳೇ! ನಾಯಕರ ವಂಶದಲ್ಲಿ ಹುಟ್ಟಿ ಬಂದವನಿಗೆ ಈ ಕೈಗಳು ಶೋಭಿಸುವವೋ? ಇವುಗಳನ್ನು ಹೀಗೆ ತುಂಡರಿಸಿ ನೆಲಕ್ಕೆ ಕೆಡಹುಬೇಕಲ್ಲವೇ? (ಹಾಗೆ ಮಾಡ ಲಿಕ್ಕೆ ಹೋಗಲು ಪ್ರೇಮಾನಂದನು ಅವನನ್ನು ತಡೆಯುವನು) ಬಿಡಿರಿ. ಬರೀ ಕೈಗಳನ್ನೇ ಅಲ್ಲ. ನೋಡಿದಿರಾ! ನನ್ನಂಥ ಕರ್ತೃತ್ವ ಶೂನ್ಯ ಕುಲಕಂಟಕನೆಡೆಗೆ ಭಾರತದೇವಿಯ ಪರಮ ಭಕ್ತ ಳಾದ ಕರ್ನಾಟಕ ಮಾತೆಯು ಅಧೋಮುಖಳಾಗಿ ಹೇಗೆ ಕಣ್ಣೀರುದರಿಸುತ್ತಿರುವಳು. ಅಗೋ! ಆ ಕಾಲಪುರು ಷನು ನನ್ನೆಡೆಗೆ ಹೇಗೆ ಪಿಸಿಪಿಸಿ ನಗುತ್ತಲಿರುವನು. ಎಲಾ! ನೀನೇಕೆ ನನ್ನ ತಾಡನೆಗಾಗಿ ಇಷ್ಟು ಆತುರತೆಯಿಂದ ಮುಂದರಿಯುವಿಯೋ? ಬಿಡಿರಿ. ಸ್ವಾಮಿಗಳೇ! ನಾನೇ ಅವನ ಇಚ್ಛೆಯನ್ನು ಪೂರ್ಣಗಾಣಿಸುವೆನು. ಆಹಾ! ಯಾವ ರೂಪದಿಂದ ಮೃತ್ಯುವನ್ನಪ್ಪಿಕೊಳ್ಳಲಿ? (ಇಷ್ಟರಲ್ಲಿ ಖಾನನೂ ಕುಮುದಿನಿಯೂ ಚಿನ್ನನೂ ಸರದಾರರೂ ಬರುವರು.) (ತನ್ನ ಮುಖವನ್ನಡಗಿಸಿ, ಸ್ವಗತ) ಅಯ್ಯೋ! ದುರದೃಷ್ಟವೇ! ಹಣೆಯಬರಹವೇ! ನನ್ನ ಬಾಯಿಂದ ಎಂತಹ ಮಾತುಗಳ ನ್ನಾಡಿಸಬೇಕೆನ್ನುವೇ? ಕಡುಘಾತದಿಂದ ಹಿರಿಯರು ಕೊಲೆಮಾಡಲ್ಪಟ್ಟರೆಂದು ಹೇಗೆ ನುಡಿಯಲಿ?

ಕುಮುದಿನಿ— (ಮುಂದೆ ಬಂದು) ಪತಿರಾಜ! ಗುಡ್ಡವೇ ಕಡಿದು ಬಿದ್ದಿದೆ. ಚಿನ್ನರಸರು ಮಾರ್ಗದಲ್ಲಿಯೇ ಕೇಳಿರುವ ತಂದೆತಾಯ್ಗಳ ಬಂಧು ಭಗಿನಿಗಳ ನಿಧನ ವಾರ್ತೆಯು ಸ್ಫುಟದಿಂದ ಅವರ ಹೃದಯದ ಜ್ವಲತ್ಪರ್ವತವು ಸಿಡಿದುಹೋಗಿ ಅನಿವಾರ ಶೋಕದ ಶಿಲಾರಸವನ್ನು ಸುರಿಸಿತು. ಈಗ ಮಾತ್ರ ಅವರ ವೀರವೃತ್ತಿಗನುಸರಿಸಿ ಸೇಡಿನ ಪ್ರಖರ ಜ್ವಾಲೆಯ ಕಿಡಿಗಳು ಅವರ ಶರೀರದಲ್ಲಿರುವ ಪ್ರತಿಯೊಂದು ರೋಮರಂಧ್ರದಿಂದ ಹೊರಬೀಳುತ್ತಲಿವೆ. ಇಂಥ ಸಮಯದಲ್ಲಿ ನೀವು ಅವರಿಗೆ ಧೈರ್ಯವನ್ನು ಕೊಡುವುದಲ್ಲದೆ ನೀವೇ ಹೀಗೆ ಹತಬಲರಾಗುವಿರೋ?

ಚಿನ್ನವೇಂಕಟ—ನಾಯಕರೇ! ಇನ್ನು ಮಾತ್ರ ಈ ನರಪಶುಗಳ ರಕ್ತದಿಂದ ನನ್ನ ಕೋಪದ ಕೆಂಡವನ್ನು ಬೇಗ ಶಾಂತಗೊಳಿಸದಿದ್ದರೆ ಅದರಲ್ಲಿ ನಾನೇ ಎಲ್ಲಿ ಭಸ್ಮವಾಗುವೆನೋ ಹೇಳೆನು. ನನಗೆ ಸಾಧ್ಯವಿದ್ದಷ್ಟು ಬಾಲಲೀಲೆಗಳಿಂದ ನನ್ನ ಹೆತ್ತವರ ಸೇವೆಯನ್ನು ಮನಃಪೂರ್ವಕವಾಗಿ ಮಾಡಿದೆನು. ಇನ್ನು ಅಷ್ಟೇ ಭಕ್ತಿಯಿಂದ ನನ್ನ ಜನ್ಮಭೂಮಿಯಾದ ಕರ್ನಾಟಕಮಾತೆಯ ಸೇವೆಯಿಂದ ಭಾರತದೇವಿಯ ಪ್ರೀತಿಯನ್ನು ಸಂಪಾದಿಸುವುದೇ ನನ್ನ ಕಾರ್ಯವು. ಇದಕ್ಕಾಗಿಯೇ ನನ್ನ ತಂದೆತಾಯ್ಗಳು ನಿಮ್ಮೆಡೆಗೆ ಸಹಾಯಾರ್ಥವಾಗಿ ನನ್ನನ್ನು ಕಳುಹಿಸಿರುವರು.

ಖಾನಸಾಹೇಬ— ನಾಯಕರೇ! ಸಾಕು ನಿಮ್ಮ ಶೋಕಕ್ಕೆ ಇನ್ನು ಪೂರ್ಣ ಸಮಾಧಿಯನ್ನು ಕೊಡಿರಿ. ನಿಮ್ಮ ಹಿಂದೂ ಧರ್ಮದ ಬಿರುದಿಗನುಸರಿಸಿ ಈ ಪ್ರೇಮಾನಂದ ಮುನಿಗಳು ಕ್ಷಾತ್ರವೃತ್ತಿಯನ್ನು ತಾಳಿ ಹಂಪೆಯಿಂದ ಐದುಸಾವಿರ ದುಂಡಾಳುಗಳನ್ನು ಕೂಡಿಸಿರುವರು. ನಾಳೆ ಸಾಯಂಕಾಲದ ಸೂರ್ಯಾಸ್ತವಾಗುವುದರೊಳಗಾಗಿ ನಿಮ್ಮ ರಾಜಕುಮಾರರನ್ನು ನಾವು ಪಟ್ಟಕ್ಕೇರಿಸಲೇ ಬೇಕು. ಇದೇ ನನ್ನ

ಪ್ರತಿಜ್ಞೆ. ಇನ್ನು ವಿಲಂಬಮಾಡದೆ ನಮ್ಮ ಜನರನ್ನು ಸಶಸ್ತ್ರವಾಗಿ ಸಿದ್ಧಗೊಳಿಸುವಾ. ನಡೆಯಿರಿ. (ಎಲ್ಲರೂ ಹೋಗುವರು.)

---

೫ ನೇ ನೋಟ

[ಚಿಕ್ಕರಾಯನ ದರಬಾರವು. ಜಗರಾಯನೂ ಇತರ ಸರದಾರರೂ ಕುಳಿತಿರುವರು. ಶ್ಯಾಮಭಟ್ಟನನ್ನು ಕಟ್ಟಿಕೊಂಡು ಇಬ್ಬರು ಕಾವಲುಗಾರರು ಬರುವರು.]

ಜಗರಾಯ— ಸರದಾರರೇ! ನಮ್ಮೊಳಗಿನ ಕೆಲವು ಸರದಾರರು ಆ ನಾಯಕನ ಪಕ್ಷವನ್ನು ಹಿಡಿದಿರುವರೆಂದು ನೀವು ಹತಬಲರಾಗಬೇಡಿರಿ. ಈಗ ಮಾತ್ರ ನಾವು ನಮ್ಮ ಸೈನ್ಯವನ್ನು ಹುರಿದುಂಬಿಸಿ ನಮ್ಮ ಸ್ವಾಮಿಕಾರ್ಯದಲ್ಲಿ ಅಡ್ಡಬರುವ ಜನರನ್ನು ಒಮ್ಮೆ ತುಂಬಾ ಮೂಲೆಗೊತ್ತುವಾ. ನಿಮ್ಮಗಳ ಸೂಚನೆಯಂತೆ ಶತ್ರುಪಕ್ಷದವರನ್ನು ಸೋಲಿಸುವವರೆಗೆ ರಂಗರಾಯರನ್ನು ಯೋಗ್ಯವಾದ ಗೌರವದಿಂದಲೇ ಸೆರೆಯಲ್ಲಿಟ್ಟಿದ್ದೆನು. ಅವರೊಡನೆ ಈ ಮಂಗಭಟ್ಟನನ್ನಿಡುವ ಪ್ರಮಾದವು ನನ್ನಿಂದ ತಿಳಿಯದೆ ಆಯಿತು. ಇವನು ಮೇಲಿಂದ ಮೇಲೆ ಅವರಿಗೆ ಆತ್ಮಹತ್ಯವನ್ನು ಮಾಡಿಕೊಳ್ಳಲು ಹುರಿದುಂಬಿಸಿ ನಿನ್ನೆ ರಾತ್ರಿಯಲ್ಲಿ ಅವರೆಲ್ಲರನ್ನೂ ಇಹಲೋಕದಿಂದ ಕಳಿಸಿದನೆಂದು ತಿಳಿಸಲು ನನಗೆ ಅತ್ಯಂತ ವಿಷಾದವಾಗುವುದು. ಇಂತಹ ರಾಜದ್ರೋಹಿಗೆ ನೀವುಗಳೆಲ್ಲರೂ ಸೂಚಿಸುವ ಶಿಕ್ಷೆಯನ್ನು ಕೊಡುವೆನು.

ಒಬ್ಬ ಸರದಾರ—ಅದಕ್ಕೂ ಮೊದಲು ಈ ಶಾಸ್ತ್ರಿಯು ಏನನ್ನಾದರೂ ಹೇಳುವುದಿದ್ದರೆ ಹೇಳಲಿ.

ಮಕರ— ಅವನೇನನ್ನು ಹೇಳುವನು....

ಮತ್ತೊಬ್ಬ ಸರದಾರ—ಅದೇಕೇ? ಆರೋಪಿಯು ಹೇಳುವುದನ್ನು ನಾವು ಕೇಳಬೇಕೆನ್ನುವೆವು.

ಉಳಿದ ಸರದಾರರು—ಅಹುದಹುದು. ಹೇಳಿರಿ, ಶಾಸ್ತ್ರಿಗಳೇ!

ಶ್ಯಾಮಭಟ್ಟ— ಚಂದ್ರಗಿರಿಯ ಸಾತ್ವಿಕ ಸೇನಾಪತಿಗಳೇ! ಜಗರಾಯನು ಹೇಳಿದ್ದೆಲ್ಲವೂ ಕಟ್ಟುಕಥೆಯೆಂದು ನನ್ನ ಮೊಟ್ಟಮೊದಲಿನ ಹೇಳಿಕೆ. ಇನ್ನು ಮಾತ್ರ ನಾನು ಹೇಳುವುದನ್ನು ದಯವಿಟ್ಟು ಲಾಲಿಸಿರಿ. ತರುವಾಯ ನಾನು ರಾಜದ್ರೋಹಿಯೆಂದು ನ್ಯಾಯಸಮ್ಮತವಾದರೆ ನನ್ನ ತಲೆಯನ್ನು ಹಾರಿಸಿರಿ. (ಜಗನನ್ನು ತೋರಿಸಿ) ಈ ಅಂತಕನು ತನ್ನ ಸ್ವಾರ್ಥಕ್ಕಾಗಿ ಅರಸರನ್ನು ಕಟಕನಂತೆ ಹಿಂಸಿಸಿ ಈಗ ಆ ದೋಷದಿಂದ ಮುಕ್ತನಾಗಲು ಬಡಬ್ರಾಹ್ಮಣನಾದ ನನ್ನನ್ನು ನಿಮ್ಮ ಮುಂದೆ ಸಿಲ್ಲಿಸಿರುವನು. ಈ ದುಷ್ಟನು ಬಾಯಮ್ಮ ರಾಣಿಯವರು ಸಾಕಿದ ಮಗನನ್ನು....

ಜಗರಾಯ— ಎಲಾ! ಸುಮ್ಮನಿರುಪಿಯೋ ಇಲ್ಲೋ?

ಶ್ಯಾಮಭಟ್ಟ—ಪಾಪೀ! ಸುಮ್ಮನಿರಲೋ? ಎಲ್ಲಿಯವರೆಗೆ ಸುಮ್ಮನಿರಲೋ? ಇಡೀ ಕನ್ನಡಿಗರ ಪ್ರಾಣಗಳು ಹೋಗುವವರೆಗೂ ಸುಮ್ಮನಿರಲೋ? ಎಲಾ! ಮರಣವು ಯಾರಿಗೂ ತಪ್ಪಿದ್ದಲ್ಲ. ನಾನು ಧರ್ಮಾರ್ಥ ಸತ್ತರೆ ನನ್ನ ದೇಹದ ಕೇಡಾಗುವುದಿಲ್ಲ. ಅದು ಸುವರ್ಣವಾಗುವುದು. ಸಜ್ಜನರೇ! ವೈಭವಶಾಲಿಗಳ ವಂಶದವರು ನೀವಿದ್ದರೆ ಮೊದಲು ಭಯಪಡದೆ ಇವನ ಕೃಷ್ಣಕಾರಸ್ಥಾನವನ್ನು ಬೈಲಿಗೆಳೆಯಿರಿ. ಕದ್ದು ಕದ್ದು ಗುದ್ದು ಹೋಗಬೇಡಿರಿ. ಈ ಸಾಕಿದ ಚಿಕ್ಕರಾಯನು ಬೊಂಬೆಯು. ಇದು ನಿರಂಕುಶವಾದ ಪ್ರಭುತ್ವದ ಆಳ್ವಿಕೆಯು. (ಇಷ್ಟರಲ್ಲಿ, ನಾಯಕನೂ, ಖಾನನೂ, ಕುಮುದಿನಿಯೂ, ಚಿನ್ನವೇಂಕಟನೂ, ಪ್ರೇಮಾನಂದನೂ, ಮೀನಾಕ್ಷಿಯೂ, ಸರದಾರರೂ, ಸೈನಿಕರೂ ಬರುವರು. ದರಬಾರದಲ್ಲಿ ಗಲಭೆಯಾಗುವುದು. ಯುದ್ಧವು ಸಾಗುವುದು. ತಿಮ್ಮನಾಯಕನೂ ಮಕರನಾಯಕನೂ ಗಾಯಹೊಂದಿ ಬೀಳುವರು. ಕೆಲವರು ಓಡುವರು.

ಕೆಲವರು ಶರಣುಹೋಗುವರು. ಎಚ್ಚನಾಯಕನು ಜಗನ ಎದೆಯ ಮೇಲೆ ಕೂಡುವನು. ಚಿಕ್ಕರಾಯನು ಕೆಳಗೀದು ನಡುಗುತ್ತ ನಿಲ್ಲುವನು.)

ನಾಯಕ— (ಆವೇಶದಿಂದ) ಆಹಾ! ವೈರಿಯ ರಕ್ತವೇ ವೀರನ ಇಹ ಲೋಕದ ಅಮೃತವು. ಇದನ್ನು ಕುಡಿದು ನನ್ನ ಸೇಡಿನ ಅಗ್ನಿಯನ್ನು ಶಾಂತಗೊಳಿಸುವೆನು. ದುಷ್ಟಾ! ಮೊದಲು ನಿನ್ನ ಹೃದಯವನ್ನು ಸೀಳುವೆನು. (ಪ್ರೇಮಾನಂದನು ನಾಯಕನ ಕೈಯನ್ನು ಹಿಡಿದು)

ಪ್ರೇಮಾನಂದ— ನಾಯಕರೇ! ಬೇಡಿರಿ. ಇದು ಪವಿತ್ರ ಸಿರಿಗನ್ನಡ ಸಿಂಹಾಸನವಿದೆ. ಇಲ್ಲಿ ರಕ್ತಪಾತವು ಬೇಡಾ.

ಚಿನ್ನವೇಂಕಟ—ನಾಯಕರೇ! ಈಗ ಸಧ್ಯಕ್ಕೆ ಇವರೆಲ್ಲರನ್ನು ಬಂದಿಖಾನೆಯಲ್ಲಿ ಹಾಕಿಸಿರಿ. ಮುನಿಗಳ ಸಮ್ಮತಿಯಂತೆ ಮುಂದೆ ಇವರಿಗೆ ಯೋಗ್ಯವಾದ ಶಿಕ್ಷೆಯನ್ನು ಕೊಡುವಾ.

ನಾಯಕ— (ಜಗನನ್ನು ತನ್ನ ಸೇವಕರ ವಶಮಾಡಿ) ಪ್ರಭೋ! ನಿಮ್ಮಗಳ ಆಜ್ಞೆಯು ಶಿರಸಾವಂದ್ಯ. ಮುನಿವರ್ಯರೇ! ಹೇಳಿಕಳಿಸಿದಂತೆ ಈ ಪ್ರಸಂಗದಲ್ಲಿ ತಮ್ಮ ಸಹಾಯ......

ಪ್ರೇಮಾನಂದ— ಅದೆಲ್ಲವಿರಲಿ; ನಾಯಕಾ! ಈ ಸಿಂಹಾಸನವು ಒಂದರಗಳಿಗೆಯಾದರೂ ಹೀಗೆ ತೆರವಾದ ಸ್ಥಿತಿಯಲ್ಲಿ ಕಾಣಬಾರದ್ದನ್ನು ಕಂಡೆವು. ಮೊದಲು ಈ ಚಿನ್ನಮೂರ್ತಿಯನ್ನು ಪಟ್ಟದಮೇಲೆ ಕುಳ್ಳಿರಿಸಿರಿ. ಹೂಂ; ತಡಮಾಡಕೂಡದು. ಬೇಗ ಇವರನ್ನು ಸಿಂಹಾಸನಾರೂಢಮಾಡಿ ನಾಳೆ ಸಾರ್ವಜನಿಕ ರೀತಿಯಿಂದ ಪಟ್ಟಾಭಿಷೇಕದ ಸಮಾರಂಭವನ್ನು ಒಳ್ಳೇ ಉತ್ಸಾಹದಿಂದ ಸಾಂಗಗೊಳಿಸುವಾ. (ನಾಯಕನು ಚಿನ್ನವೇಂಕಟನನ್ನು ಪಟ್ಟಕ್ಕೇರಿಸುವನು. ಜಗನ ಹೊರತು ಎಲ್ಲರೂ ನಮಿಸುವರು. ಶ್ಯಾಮಭಟ್ಟನು ಒತ್ತಾಯದಿಂದ ಜಗನನ್ನು ಬಗ್ಗಿಸಿ ನಮಿಸುವನು.)

ಖಾನಸಾಹೇಬ— (ಪ್ರೇಮಾನಂದನಿಗೆ) ಮಹಾರಾಜ! ಈ ಬಡವನ ಇನ್ನೊಂದು ಆಸೆಯಿದೆ. ಅದನ್ನಿಷ್ಟು ಪೂರೈಸಬೇಕು. ಈ ಶುಭ ಸಮಯದಲ್ಲಿಯೇ ನಾಯಕ-ಕುಮುದಿನಿಯವರ ಹಸ್ತ ಗಳ ಮಿಲನವನ್ನು ನೋಡಬೇಕೆನ್ನುವೆನು.

ಪ್ರೇಮಾನಂದ— ಇದಕ್ಕಂತೂ ಈ ಗೋಧೂಳಿ ಮುಹೂರ್ತವು ಬಹಳೇ ಶ್ರೇಷ್ಠವಾದದ್ದು. ಬಾ, ವೀರಕನ್ಯೇ! ವಿವಾಹ ಕಾಲದಲ್ಲಿ ನೀನು ಮಾಡಿದ ಪ್ರತಿಜ್ಞೆಗೆ ಸಾಕ್ಷಿಯಾದ ನಾನೂ ಖಾನ ನಂತೇ ಆತುರನಾಗಿರುವೆನು. (ನಾಯಕ-ಕುಮುದಿನಿಯವರ ಹಸ್ತಾಂದೋಲನೆಯನ್ನು ಮಾಡುವನು.) ಪರಮೇಶ್ವರಾ! ತಮ್ಮ ಪ್ರತಿಜ್ಞೆಗಳನ್ನು ಕೊನೆಯವರೆಗೂ ಪಾಲಿಸಿ ಕನ್ನಡಿಗರಿಗೆ ಬಲುಮೆಯಾಗಿದ್ದ ದಾಸ್ಯ ಶೃಂಖಲೆಗಳನ್ನು ಆಧ್ಯಾತ್ಮ ಬಲ ದಿಂದಲೂ ಉಜ್ವಲವಾದ ರಾಷ್ಟ್ರಭಕ್ತಿಯಿಂದಲೂ, ಪ್ರಖರ ವಾದ ಪಾವಿತ್ರ್ಯದಿಂದಲೂ ಕಡಿದುಹಾಕಿದ ಈ ದಂಪತಿಗಳಿಗೆ ಧವಳಕೀರ್ತಿಯನ್ನು ನೀಡು. ಒಳ್ಳೇದು ಸಜ್ಜನರೇ! ಇನ್ನು "ಶುಭಸ್ಯ ಶೀಘ್ರಂ." ಎಲೈ ಸೂರ್ಯನಾರಾಯಣಾ! ನಾಳೆ ಉಷಃಕಾಲದಲ್ಲಿ ನೀನು ಸ್ವರ್ಗದಲ್ಲಿರುವ ಎಲ್ಲ ದೇವಾನುದೇವತೆಗಳ ಸಹಿತ ಬಂದು ನಮ್ಮನ್ನು ತುಂಬಾ ಅಂತಃಕರಣದಿಂದ ಆಶೀರ್ವದಿಸು. ಎಲೈ ಪರಮಮಂಗಲ ಮೂರ್ತಿಯೇ! ವಿರಾಟರೂಪಿಯೇ! ನಾವು ಪಾಮರರು; ನೀನಿರುವ ವೈಕುಂಠದಲ್ಲಿ ಪ್ರತ್ಯಕ್ಷ ಪ್ರವೇಶಿಸಿ ನಿನಗೆ ಆಮಂತ್ರಣವನ್ನು ಕೊಡುವುದೆಂತು? ಅದಕ್ಕಾಗಿ ಈ ಸಂಧ್ಯಾ ಸಮಯದಲ್ಲಿ ಕೆಂದಾವರೆಯಂತೆ ಹೊಳೆದು ತನ್ನ ಕಂಗಳಿಂದ ನಿರೀಕ್ಷಿಸುವ ಮತ್ತು ನಮ್ಮ ಈ ಶುಭ ಸಂಕಲ್ಪಕ್ಕಾಗಿ ತಾನೂ ನಮ್ಮನ್ನು ಪುಷ್ಟೀಕರಿಸುವುದನ್ನು ವ್ಯಕ್ತಗೊಳಿಸಲು ಅನುರಾಗಪೂರ್ಣ ಕಾಂತಿಯಿಂದ ಪ್ರಕಾ ಶಿಸುತ್ತಲಿರುವ ಶ್ರೀ ಸೂರ್ಯನಾರಾಯಣನ ಪರವಾಗಿ ನಾವಿಂದು ಹೇಳಿಕಳುಹುವ ಆಮಂತ್ರಣೆಯನ್ನು ಸ್ವೀಕ

ರಿಸು. ನಮ್ಮ ಅಭ್ಯಾಗತನಾಗಿ ಬಂದು ನಿನ್ನ ಚರಣಕಮಲಗಳ ದರ್ಶನದಿಂದ ನಮ್ಮನ್ನು ಪುನೀತಗೊಳಿಸು. ನಮ್ಮ ಜನ್ಮಭೂಮಿಗೆ ಅಕ್ಷಯವಾದ ಭಾಗ್ಯವನ್ನು ನೀಡು. ಸಿರಿಗನ್ನಡ ಮಾತೆಯ ಉಜ್ವಲ ಕೀರ್ತಿಯನ್ನು ಕಾಪಾಡು. ಶ್ರೀಹರಿಯೇ! ಇಷ್ಟೇ ನಮ್ಮ ಬೇಡಿಕೆ.

ಎಲ್ಲರೂ— ಜಯ ಭಾರತಮಾತೇ! ಜಯ ಕರ್ನಾಟಕಮಾತೇ!! ಜಯ ವಿದ್ಯಾರಣ್ಯಪ್ರಭೋ!!!

ನಾಯಕ ಕುಮುದಿನಿಯವರ ಹೊರತು ಉಳಿದವರು—

ಜಯ ನಾಯಕ-ಕುಮುದಿನಿ!!!

ನಾಲ್ಕನೇ ಅಂಕ ಸಮಾಪ್ತ

ಓಂ ಶಾಂತಿಃ ಶಾಂತಿಃ ಶಾಂತಿಃ.

3973—29. ಬೆಂಗಳೂರು ಪ್ರೆಸ್, ಮೈಸೂರು ರೋಡು, ಬೆಂಗಳೂರು ಸಿಟಿ

THE
BANGALORE
PRESS
LAKE VIEW
MYSORE ROAD
BANGALORE
CITY